

ಸಂಪುಟ 22 ಸಂಚಿಕೆ 13
ಮಾರ್ಚ್ 26, 2000 ಬೆಲೆ ರೂ. 3.00


ದುಡಿವ ಜನರ ಪ್ರಾಣಮಿತ್ರ



ಕಂಬಾಲಪಲ್ಲಿ: ದಲಿತರ ಮಾರಣ ಹೋಮ



ರೈತ ಹೋರಾಟದ ಚಂಡಮದ್ದಳೆ



ಕ್ಲಿಂಟನ್ ಭೇಟಿ: ಕೊನೆಯಿಲ್ಲದ ವಾಜಪೇಯಿ ಗುಲಾಮಗಿರಿ

ದುಡಿಯುವ ಜನರಿಗೆ ನಿರಾಶೆ

ಕರ್ನಾಟಕದ ಇತಿಹಾಸದಲ್ಲಿ ಮೊದಲನೇ ಬಾರಿಗೆ ರಾಜ್ಯಪಾಲರು, ಜಂಟಿ ಅಧಿವೇಶನವನ್ನು ಉದ್ದೇಶಿಸಿ ಸ್ಪಷ್ಟ ಕನ್ನಡದಲ್ಲಿ ಭಾಷಣ ಮಾಡಿರುವುದು ಸಂತಸದ ವಿಚಾರ. ಇದೊಂದನ್ನು ಬಿಟ್ಟರೆ ರಾಜ್ಯಪಾಲರ ಭಾಷಣ ಕಳೆದ ಮೂರು ತಿಂಗಳಿಂದ ಮುಖ್ಯಮಂತ್ರಿಗಳು ಭಾಷಣ ಮಾಡುತ್ತಿದ್ದ ವಿಷಯವೇ ರಾಜ್ಯಪಾಲರ ಭಾಷಣವಾಗಿ ಹೊರಹೊಮ್ಮಿದೆ. ರಾಜ್ಯಪಾಲರ ಭಾಷಣ ದುಡಿಯುವ ವರ್ಗಕ್ಕೆ

ಸಂಪಾದಕೀಯ

- ನಿರುದ್ಯೋಗಿ ಯುವಕರಿಗೆ ನಿರಾಶೆಯನ್ನು ತಂದಿದೆ. ಭಾಷಣದಲ್ಲಿ ಕಾರ್ಯಗತವಾಗದ 2 ಲಕ್ಷ ಮನೆ ನಿರ್ಮಾಣ, ರಸ್ತೆ ದುರಸ್ತಿ, ಕುಡಿಯುವ ನೀರಿನ ವ್ಯವಸ್ಥೆಯನ್ನು ಪ್ರಸ್ತಾಪಿಸಲಾಗಿದೆ. ಇವುಗಳಿಗೆ ಎಲ್ಲಿಂದ ಸಂಪನ್ಮೂಲ ತರುತ್ತಾರೆಂದು ಕಾದು ನೋಡಬೇಕಿದೆ. ಮುಚ್ಚಿರುವ ಕಾರ್ಖಾನೆಗಳನ್ನು ತೆರೆಸುವ ಬಗ್ಗೆ, ಹೊಸ ಉದ್ಯೋಗಗಳ ಸೃಷ್ಟಿಸುವ ಕುರಿತು, ವಿದ್ಯಾರ್ಥಿಗಳಿಗೆ ಸುಲಭ ವೆಚ್ಚದಲ್ಲಿ ವ್ಯಾಸಂಗ ಮಾಡುವ ಬಗ್ಗೆ, ಕೃಷಿ ಕೂಲಿಕಾರರಿಗೆ ಸರ್ಕಾರ ನಿಗದಿ ಮಾಡಿರುವ ಕನಿಷ್ಟ ಕೂಲಿ ಜಾರಿ ಬಗ್ಗೆ, ಲಕ್ಷಾಂತರ ಅಸಂಘಟಿತ ಕಾರ್ಮಿಕರಿಗೆ ಬೆಲೆ ಏರಿಕೆಗೆ ಅನುಗುಣವಾಗಿ ಕೂಲಿ ಹೆಚ್ಚಳ ಹಾಗೂ ಅದರ ಜಾರಿ ಕುರಿತು ಪ್ರಸ್ತಾಪವಿಲ್ಲ.



ರಾಜ್ಯದ ರೈತರು ಬೆಲೆ ಕುಸಿತದಿಂದ ಕಂಗಾಲಾಗಿರುವಾಗ ಉದಾಹರಣೆಗೆ ತೊಗರಿ, ಮೆಣಸಿನಕಾಯಿ, ಈರುಳ್ಳಿ ಇತ್ಯಾದಿ ಅದರ ನಿವಾರಣೆಗೆ ಯಾವುದೇ ಪ್ರಸ್ತಾಪವಿಲ್ಲ. ಇಂತಹ ಪರಿಸ್ಥಿತಿಯಲ್ಲಿ ರೈತರು ಬೆಳೆದ ಫಸಲಿಗೆ, ನ್ಯಾಯವಾದ ಬೆಲೆಗೆ ಅದನ್ನು ಕೊಂಡು ಬೆಲೆ ಕುಸಿತ ನಿವಾರಣೆಗೆ ಯಾವುದೇ ಪ್ರಸ್ತಾಪವಿಲ್ಲ. ಒಟ್ಟಾರೆಯಾಗಿ ರಾಜ್ಯಪಾಲರ ಭಾಷಣ ಈ ಎಲ್ಲಾ ಹಿನ್ನೆಲೆಯಲ್ಲಿ ನಿರಾಶದಾಯಕ ಭಾಷಣ.

ಕ್ಲಿಂಟನ್ ಭೇಟಿ-ವಾಜಪೇಯಿ ಸರಕಾರದ ಗುಲಾಮಗಿರಿಗೆ ಕೊನೆ ಇಲ್ಲ

ಹಿಂದೆ ರಾಜರ ಕಥೆಗಳನ್ನು ಓದಿದ್ದೇವೆ. ನಾಟಕ ನೋಡಿದ್ದೇವೆ. ರಾಜಕುಮಾರಿ ಜಲಕ್ರೀಡೆಗೆ ಹೊರಡುತ್ತಿದ್ದರೆ ಬಹಳ ಮೊದಲೇ ಡಂಗುರ ಬಾರಿಸಿ ಹೇಳಲಾಗುತ್ತಿತ್ತು. ಜನರೆಲ್ಲಾ ಮನೆ ಸೇರಬೇಕಾಗುತ್ತಿತ್ತು. ಕಿಟಕಿಯಿಂದ ಕೂಡ ರಾಜಕುಮಾರಿಯನ್ನು ನೋಡುವಂತಿರಲಿಲ್ಲ. ಇಂದು ಕ್ಲಿಂಟನ್ ದೊರೆ ಬರುತ್ತಿದ್ದಾನೆ. ಸಾಮಂತದೊರೆಯಂತೆ ವರ್ತಿಸುತ್ತಿರುವ ವಾಜಪೇಯಿ ಸರ್ಕಾರ, ಜನತೆ ರಸ್ತೆಗೆ ಬರಬಾರದು ಎಂದು ಡಂಗುರ ಸಾರಿದೆ. ಜನ ಹೊರ ಬರುವಂತಿಲ್ಲ. ಪ್ರತಿಭಟನೆಗೆ ಮಾತ್ರವಲ್ಲ, ಹೊಟ್ಟೆ ಪಾಡಿಗೂ ಕೂಡ.

ಉಜ್ವಲ ರಾಷ್ಟ್ರಪ್ರೇಮದ ಬಗ್ಗೆ ಉದ್ದುದ್ದ ಭಾಷಣ ಬಿಗಿಯುತ್ತಾ ಇದೀಗ ಅಮೇರಿಕಾದ ಅಧ್ಯಕ್ಷ ಬಿಲ್ ಕ್ಲಿಂಟನ್ ಭಾರತಕ್ಕೆ ಭೇಟಿ ನೀಡುವ ಸಂದರ್ಭದಲ್ಲಿ ಹಲ್ಲು ಗಿಂಜಿ ಸ್ವಾಗತ ನೀಡುತ್ತಿರುವ ಬಿಜೆಪಿ ನೇತೃತ್ವದ ವಾಜಪೇಯಿ ಸರ್ಕಾರ ಗುಲಾಮಗಿರಿಯ ತುಟ್ಟತುದಿಗೇರಿದೆ.

ದೇಶದ ರಾಜಧಾನಿ ಎಂಬ ಕಾರಣದಿಂದಲೇ ದೆಹಲಿಯ ರಸ್ತೆಗಳು ಅಗಲವಾಗಿಯೇ ಇದೆ ಹಾಗೂ ಸಾಕಷ್ಟು ಅಚ್ಚುಕಟ್ಟಾಗಿಯೇ ಇರುತ್ತದೆ. ನಮ್ಮ ಹಳ್ಳಿಗಳ ರಸ್ತೆಗಳಂತಲ್ಲ. ಆದರೂ ಸಹ ಕ್ಲಿಂಟನ್ ಬರುತ್ತಾರೆ ಎಂಬ ಕಾರಣದಿಂದ ಆ ರಸ್ತೆಗಳು ಇನ್ನಷ್ಟು ಅಗಲವಾಗುತ್ತಿದೆ. ಸುಂದರಗೊಳ್ಳುತ್ತಿದೆ. ಕ್ಲಿಂಟನ್ ಉಳಿದುಕೊಳ್ಳುವ ಮೌರ್ಯ ಶೆರಟಾನ್ ಹೋಟೆಲ್ ಸಿಂಗಾರಗೊಳ್ಳುತ್ತಿದೆ. ಮಾತ್ರವಲ್ಲ ಅದನ್ನು ಪ್ರತಿದಿನವೂ ಟಿ.ವಿ.ಯಲ್ಲಿ ಬಿತ್ತರಿಸಲಾಗುತ್ತಿದೆ.

ಹಲವಾರು ದೇಶಗಳ ಅಧ್ಯಕ್ಷರು, ಪ್ರಧಾನ ಮಂತ್ರಿಗಳು ನಮ್ಮ ದೇಶಕ್ಕೆ ಆಗಾಗ ಬರುತ್ತಲೇ ಇರುತ್ತಾರೆ. ಅವರಿಗಿಲ್ಲದ ಸಂಭ್ರಮ ಕ್ಲಿಂಟನ್‌ಗ್ಯಾಕೆ? ಹೊಟ್ಟೆಗೆ ಹಿಟ್ಟಿಲ್ಲ, ಜುಟ್ಟಿಗ್ಯಾಕೆ ಮಲ್ಲಿಗೆ?

ಪ್ರಾಣಿಗಳಿಗೂ ಸ್ವಾತಂತ್ರ್ಯವಿಲ್ಲ

'ಕಂಪ್ಯೂಟರ್ ಮುಖ್ಯಮಂತ್ರಿ', ಎಂದು ಹೆಸರು ಮಾಡಿದ ಚಂದ್ರಬಾಬು ನಾಯ್ಡು ಅವರ ರಾಜದಾನಿ ಹೈದರಾಬಾದಿನಲ್ಲಿ ಪರಿಸ್ಥಿತಿ ಇನ್ನೊಂದು ಬಗೆ. ಕೇವಲ 2-3 ಗಂಟೆಗಳ ಕಾಲ ಕ್ಲಿಂಟನ್ ಅಲ್ಲಿ ತಂಗುತ್ತಾರೆ. ಆದರೆ ಈಗಾಗಲೇ 2000 ಕ್ಕೂ ಹೆಚ್ಚು ಭಿಕ್ಷುಕರನ್ನು ಸೆರೆ ಹಿಡಿಯಲಾಗಿದೆ. ನೂರಾರು ಬೀದಿ ನಾಯಿಗಳನ್ನು ಕೊಂದು ಹಾಕಿದ್ದಾರೆ. ಮಂಗಗಳಿಗೆ ಬೀದಿ ಬದಿಯ ಮರಗಳ ಮೇಲೂ ಹಾರಾಡುವ ಸ್ವಾತಂತ್ರ್ಯ ಇಲ್ಲವಂತೆ. ಕ್ಲಿಂಟನ್ ಬರುತ್ತಿರುವ ಸಂದರ್ಭದಲ್ಲಿ ಜನರ ಸ್ವಾತಂತ್ರ್ಯಕ್ಕೆ ಮಾತ್ರ ಧಕ್ಕೆ ಅಲ್ಲ ಪ್ರಾಣಿಗಳ ಸ್ವಾತಂತ್ರ್ಯಕ್ಕೂ ಕುತ್ತು.

ಆಗ್ರಾದ ಜನತೆ ಹೊರಬರುವಂತಿಲ್ಲ

ಅಮೆರಿಕಾದ ಬಿಳಿ ಅಧ್ಯಕ್ಷರು ಭೇಟಿ ನೀಡುವ ಇನ್ನೊಂದು ಸ್ಥಳ ಆಗ್ರಾದಲ್ಲಿ ಈಗಾಗಲೇ ರಸ್ತೆ ಬದಿ ವ್ಯಾಪಾರಸ್ಥರನ್ನು ಖಾಲಿ ಮಾಡಿಸಲಾಗಿದೆ. ಪ್ರತಿಯೊಬ್ಬ ದಾರಿಹೋಕನನ್ನೂ ದಸ್ತಗಿರಿ ಮಾಡಲಾಗುತ್ತಿದೆ. ಅಂದರೆ ಕ್ಲಿಂಟನ್ ಬಂದು ಹೋಗುವವರೆಗೂ ಆಗ್ರಾದ ಜನತೆ ಮನೆಯೊಳಗೆ ಅಡಗಿಕೊಂಡಿರಬೇಕು. ಕ್ಲಿಂಟನ್ ಆಗ್ರಾದ ತಾಜಮಹಲಿನ ಸೌಂದರ್ಯವನ್ನು ಸವಿಯುತ್ತಿದ್ದರೆ, ಕತ್ತಲ ಕೋಣೆಯೊಳಗಿನ ಜನ ನಾಲ್ಕು ಗೋಡೆಗಳ ನಡುವೆ ಉಪವಾಸ ಕುಳಿತಿರಬೇಕು.

ಜೈಪುರದ ರಸ್ತೆಯಲ್ಲಿ ವ್ಯಾಪಾರ ಮಾಡುತ್ತಿದ್ದ ವ್ಯಾಪಾರಸ್ಥರನ್ನು ಕ್ಲಿಂಟನ್ ಬರುತ್ತಾರೆಂದು ಖಾಲಿ ಮಾಡಿಸುತ್ತಿದ್ದಾಗ ಕೋರ್ಟಿನಿಂದ ತಡೆ ಆದೇಶವನ್ನು ತರಬೇಕಾಯಿತು. ಖಾಲಿ



ಮಾಡಿಸಬಾರದೆಂದು. 'ಒಂದೇ ಓಟಿನಲ್ಲಿ ಸೋತೆ. ನಿಮ್ಮ ಒಂದು ಓಟು ಕೊಡಿ' ಎಂದು ಅಧಿಕಾರಕ್ಕೆ ಬಂದ ವಾಜಪೇಯಿ ಸರ್ಕಾರದ ಪ್ರಜಾಪ್ರಭುತ್ವ ನೀತಿ ಇದು! ಗುಲಾಮಗಿರಿಯ ಪ್ರತೀಕ!

ಅಮೆರಿಕಾದ ಸರಕಾರಕ್ಕೆ ಭಾರತದ ಭದ್ರತಾ ವ್ಯವಸ್ಥೆಯ ಮೇಲೆ, ಪೋಲೀಸ್, ಮಿಲಿಟರಿ ಅಧಿಕಾರಿಗಳ ಮೇಲೆ ನಂಬಿಕೆ ಇಲ್ಲ. ಆದ್ದರಿಂದಲೇ ಕ್ಲಿಂಟನ್ ಅವರ ಭದ್ರತಾ ವ್ಯವಸ್ಥೆಗಾಗಿ ಅಮೆರಿಕಾದಿಂದಲೇ 200 ಮಂದಿ ಮಿಲಿಟರಿ ಅಧಿಕಾರಿಗಳು ಬರುತ್ತಿದ್ದಾರೆ.

ಗುಲಾಮಗಿರಿಗೆ ತಳ್ಳುವ ಪ್ರಯತ್ನ

ಬ್ರಿಟಿಶ್ ಗುಲಾಮಗಿರಿಯ ಸಂಕೋಲೆಗಳಿಂದ ಬಿಡಿಸಿಕೊಂಡು 50 ವರ್ಷಗಳು ಕಳೆಯುತ್ತಿರುವ ಸಂದರ್ಭದಲ್ಲಿ ಮತ್ತೊಮ್ಮೆ ಗುಲಾಮಗಿರಿಗೆತಳ್ಳುವ ಪ್ರಯತ್ನ ನಡೆಯುತ್ತಿದೆ, ವಸಾಹತು ಶಾಹಿಯಿಂದ ನವವಸಾಹತುಶಾಹಿಗೆ.

ವಸಾಹತುಶಾಹಿ ಎಂದರೆ ವಿದೇಶಿಯರು ನಮ್ಮ ದೇಶದೊಳಕ್ಕೆ ಬಂದು ಇಲ್ಲಿನ ಜನರನ್ನು ಬಗ್ಗು ಬಡಿದು ಅಧಿಕಾರ ನಡೆಸುವುದು. ಹಿಂದೆ ವ್ಯಾಪಾರಕ್ಕೆಂದು ಬಂದ ಬ್ರಿಟಿಶರು ಒಬ್ಬರನ್ನು ಇನ್ನೊಬ್ಬರ ಮೇಲೆ ಎತ್ತಿಕಟ್ಟಿ ದೇಶವನ್ನು ಆಳುತ್ತಾ, ಸಂಪತ್ತನ್ನು ದೋಚುತ್ತಾ ಭಾರತವನ್ನು ಬಡತನಕ್ಕೆ ನೂಕಿದರು. ಅವರು ಶ್ರೀಮಂತರಾದರು.

ನವವಸಾಹತುಶಾಹಿ ಎಂದರೆ ಅವರ ದೇಶದಲ್ಲೇ ಇದ್ದುಕೊಂಡು ತನ್ನ ಏಜೆಂಟರ ಮೂಲಕ ಆಡಳಿತ ನಡೆಸುವುದು. ಅಮೆರಿಕಾದಂತಹ ಶ್ರೀಮಂತ ರಾಷ್ಟ್ರಗಳು ನೇರವಾಗಿ ಭಾರತಕ್ಕೆ ಬಾರದೆ ಅವರ ದೇಶದಲ್ಲೇ ಕುಳಿತು ನಮ್ಮ ದೇಶದ ಆಳುವ ವರ್ಗವನ್ನು ಏಜೆಂಟರಾಗಿ ಮಾಡಿಕೊಂಡು ಈ ದೇಶಧ ಸಂಪತ್ತನ್ನು ದೋಚುವುದಕ್ಕೆ ಅವಕಾಶ ಮಾಡಿಕೊಡುವುದು. ಆ ಮೂಲಕ ನಮ್ಮ ದೇಶದ ಶ್ರೀಮಂತರಿಗೂ ಒಂದು ಪಾಲನ್ನು ನೀಡುವುದು. ಆ ಏಜೆಂಟರು ಯಾರು ಎಂಬುದು ಗೊತ್ತಾಗಿದೆಯೆ?

ಬಿಜೆಪಿ ನೇತೃತ್ವದ ವಾಜಪೇಯಿ ಸರಕಾರ. ಕ್ಲಿಂಟನ್ ಜೊತೆಯಲ್ಲಿ ಬರುತ್ತಿರುವ 1500 ವಾಣಿಜ್ಯೋದ್ಯಮಿಗಳಿಗೆ ಅಬ್ಬರದ ಸ್ವಾಗತ ನೀಡುತ್ತಿದೆ. ಇವರಲ್ಲಿ ದೊಡ್ಡ ವಿಭಾಗ ಔಷಧ ತಯಾರು ಮಾಡುವ ವರು. ಈಗಾಗಲೇ ದುಬಾರಿ ಯಾಗುತ್ತಿರುವ ಔಷಧವನ್ನು ಇನ್ನಷ್ಟು ದುಬಾರಿಗೊಳಿಸುವವರು. ತಮ್ಮ ದೇಶದಲ್ಲಿ ಮಾರುಕಟ್ಟೆ ಕುಂಠಿತಗೊಂಡಿದೆ ಎಂಬುದನ್ನು ಅರಿತು ಜಗತ್ತಿನಲ್ಲಿ ಅತಿಹೆಚ್ಚು ಜನಸಂಖ್ಯೆ ಹೊಂದಿದ ಎರಡನೇ ದೊಡ್ಡ ರಾಷ್ಟ್ರವಾಗಿರುವ ಭಾರತಕ್ಕೆ ಲಗ್ಗೆ ಹಾಕಿದ್ದಾರೆ.

ಅಮೆರಿಕಾದಿಂದ ಬಂದ ಅಡುಗೆ ಸಾಮಾನು!

ಇದು ಮಾರ್ಚ್ 17 ರ ಪ್ರಜಾವಾಣಿಯ ಮುಖಪುಟದಲ್ಲಿನ ತಲೆಬರಹ. ಕ್ಲಿಂಟನ್ ಪರಿವಾರಕ್ಕೆ ಊಟ ತಯಾರಿಸಿ ಬಡಿಸಲು ಪಾತ್ರೆಗಳು ಸಹ ಮೂರು ವಿಮಾನದಲ್ಲಿ ಅಮೆರಿಕಾದಿಂದ ಬಂದಿದೆ. ಜೊತೆಯಲ್ಲಿ 50 ಮಂದಿ ಶ್ವೇತಭವನದ ಸಿಬ್ಬಂದಿ ಕೂಡ. ವಿಮಾನಗಳಿಂದ ಸಾಮಾನುಗಳನ್ನು ಇಳಿಸಲು ಕೂಡಾ ಭಾರತೀಯರಿಗೆ ಬಿಡಲಿಲ್ಲವಂತೆ. ವಿಮಾನದಿಂದ ಸಾಮಾನುಗಳನ್ನು ಇಳಿಸುವುದಕ್ಕೂ ಭಾರತೀಯರನ್ನು ನಂಬದ ಕ್ಲಿಂಟನ್‌ಗೇಕೆ ಅದ್ದೂರಿಯ ಸ್ವಾಗತ? ಆತ್ಮಾಭಿಮಾನವುಳ್ಳ ಪ್ರತಿಯೊಬ್ಬ ಭಾರತೀಯನು ಎತ್ತಬೇಕಾದ ಪ್ರಶ್ನೆ.

ಕ್ಲಿಂಟನ್ ಜೊತೆ ಕೋಳಿ ತಿನ್ನಲು ಕೃಷ್ಣ ದೆಹಲಿಗೆ

ಕ್ಲಿಂಟನ್‌ನನ್ನು ಕೈ ಹಿಡಿದು ಕರೆದು ತರುತ್ತೇನೆಂದು ನಾಯ್ಡು ಜೊತೆಗೆ ಕಾಂಪಿಟೇಷನ್‌ಗೆ ಇಳಿದಿದ್ದ ಕೃಷ್ಣ, ಕ್ಲಿಂಟನ್ ಬೆಂಗಳೂರಿಗೆ ಬರುತ್ತಿಲ್ಲ ಎಂಬ ಸಂದೇಶ ಪಡೆದು ಸುಸ್ತಾಗಿ ಹೋದರು. ಆದರೆ ಇಷ್ಟಕ್ಕೆ ಜಗ್ಗುವ ಜಾಯಮಾನ ಕೃಷ್ಣರದ್ದಲ್ಲ. ನಿಟುಕದ ದ್ರಾಕ್ಷಿ ಹುಳಿ ಹುಳಿ ಎಂಬ ಹಳೇ ಕಾಲದ ಕಥೆಯು ಹೈಟೆಕ್ ಮೆದುಳಿನ ಸ್ಕ್ರೀನಿನ ಮೇಲೆ ಕೋಲ್ಮಿಂಚಿನಂತೆ ಹೊಳೆದದ್ದೇ ತಡ 'ಕ್ಲಿಂಟನ್ ಬರದಿದ್ದರೆ ಏನಂತೆ? ಎಂತೆಂಥವರೋ ಬಂದು ಹೋಗುತ್ತಾರೆ.' ಎಂದು ಬೀಗಿದರು. ಸೈಬರ್ ಲೋಕದ ದೈತ್ಯ ಮುರ್ಡೋಕ್ ಬಂದು ಹೋದದ್ದಾಯಿತು. ಇದಕ್ಕಿಂತ ಇನ್ನೇನು ಬೇಕು? ಕ್ಲಿಂಟನ್ ಹಿಂದೆ ಇರುವವರು ಇವರೇ ಅಲ್ಲವೇ? ಅವರ ಹಿಂದೆ ಬರುವ ಬದಲು ಮುಂದೆಬಂದಿದ್ದಾರೆ. ಈಗ ಏನಂತೆ? ಎಂದು ಅಸೆಂಬ್ಲಿಯಲ್ಲಿ ಅಡ್ಡಾಡತೊಡಗಿದರು.

ಆದರೂ ಕ್ಲಿಂಟನ್ ಸ್ವಾಗತಕ್ಕೆ ನೆಲಬಗ್ಗಿ ದೊಗ್ಗು ಸಲಾಮು ಹೊಡೆಯಲು ನಾಯ್ಡು ನಡೆಸಿರುವ ಕಸರತ್ತು ಮತ್ತು ಕ್ಲಿಂಟನ್ ಗೋಬ್ಯಾಕ್ ಎಂಬುವವರನ್ನು ಬಡಿದು ಅಮೆರಿಕನ್ ಅಂಕಲ್‌ಗಳನ್ನು ಮೆಚ್ಚಿಸುವ ವರಸೆಗಳು ಮೋಹಕವಾಗಿ ಕಂಡು ಬಂದು ಛಾನ್ಸ್ ತಪ್ಪುತ್ತಿದೆಯಲ್ಲ ಎಂದು ಕೈ ಕೈ ಹಿಸುಕಿಕೊಳ್ಳತೊಡಗಿದರು. ಪ್ರಸನ್ನತೆಯೇ ಇರಲಿ, ಖಿನ್ನತೆಯೇ ಇರಲಿ ಅವರು ಹಿಸುಕಿಕೊಳ್ಳುವುದು 'ಅಪ್ಪಟ ಕೈ'ಯನ್ನೇ. ವಾಜಪೇಯಿಗಿಂತಲೂ ಸಾಹೇಬ್ರು 'ಸ್ವದೇಶಿ' ಎಂದು ವಂಧಿಮಾಗಧ ಪರಿವಾರ ಪರಾಕು ಹಾಕುತ್ತಿತ್ತು, ಕ್ಲಿಂಟನ್ ಬದಲು ಅವರ ಮಗಳು ಹಂಪಿಗೆ ಆಗಮಿಸುವಳು ಎಂಬುದು ಕೇವಲ ಗಾಳಿ ಸುದ್ದಿ ಎಂದು ಖಾತ್ರಿಯಾಗಿ ಹೋಗಿತ್ತು. ಇತ್ತ ಕಡೆ ತನಗೆ ಆಗದವರು ಕಂಬಾಲಪಲ್ಲಿ ದುರ್ಘಟನೆಯನ್ನೇ ಮುಂದಿಟ್ಟು ರಾಜೀನಾಮೆ ಬೇರೆ ಕೇಳುತ್ತಿದ್ದಾರೆ. ಈ ಬಾಧೆಗಳಲ್ಲಿ ಬಳಲುತ್ತಿರುವಾಗ 'ಬಂತು ಬಂತು' ಎಂದು ಆಪ್ತ ಕಾರ್ಯದರ್ಶಿ ಓಡುತ್ತಾ ಬಂದ. 'ನೋಡಿ ಸಾರ್ ನೋಡಿ ಸಾರ್' ಎಂದು ಫ್ಯಾಕ್ಸ್ ಸಂದೇಶವನ್ನು ಕೃಷ್ಣರ ಕೈಗಿಟ್ಟ. ಈ ಪತ್ರವನ್ನು ನೋಡ ನೋಡುತ್ತಾ ಕಣ್ಣರಳಿಸಿ, ರೋಮಾಂಚಿತರಾದ ಕೃಷ್ಣರವರು 'ನೋಡಿ ಕೊನೆಗೂ ಬಂದೇ ಬಂತು' ಎಂದು ತಲೆ ನೇವರಿಸಿಕೊಳ್ಳುತ್ತಾ, "ನಾನು ಓದಿದ್ದು ಅಮೇರಿಕಾದಲ್ಲೇ, ಓಡಾಡಿದ್ದು ಅಮೇರಿಕಾದಲ್ಲೇ. ಈ ವಿಗ್ ಅಮೆರಿಕಾದ್ದೇ" ಎಂದು ಓಡಾಡತೊಡಗಿದರು. ಇದ್ದಕ್ಕಿದ್ದಂತೇ ಹೀಗೆ ಆಡುತ್ತಿರುವುದನ್ನು ಕಂಡು ಗಾಬರಿಯಾದ ಶ್ರೀಮತಿ ಪ್ರೇಮಾರವರು ಕೈಲ್ಲಿದ್ದ ಕಾಗದ ಕಸಿದುಕೊಂಡರು. ಅದನ್ನು ಓದಿ ಅವರೂ ಸಹ ಆನಂದತುಂದಿಲರಾದರು. ಅಸಲೀ ವಿಚಾರ ಏನೆಂದರೆ ಕರ್ನಾಟಕಕ್ಕೆ ತಾನು ಬರದೇ ಇರುವುದರಿಂದ ಮನೋವ್ಯಾದಿ ಹೆಚ್ಚಿಸಿಕೊಂಡ ಕೃಷ್ಣರನ್ನು ಕೈಬಿಡದೇ ಕ್ಲಿಂಟನ್ ಕೊನೆಗೆ ಮಾರ್ಚ್ 22 ರಂದು ಗಣ್ಯರೆನಿಸಿ ಕೊಂಡಿರುವವರೊಂದಿಗೆ ಕೃಷ್ಣ ದಂಪತಿಗಳನ್ನು ಉಣ್ಣಲು ಕರೆದಿರುವುದು ಈ ಸಂಗತಿಯಾಗಿದೆ. ಇದರಿಂದ ಪುಳಕಗೊಂಡಿರುವ ಕೃಷ್ಣ 'ಚಿಂಗು ಚಿಂಗನೆಂದು ಹಾರುವ ರಂಗು ರಂಗಿನ ಕನಸುಗಳೊಂದಿಗೆ ಅಮೆರಿಕಾದಿಂದಲೇ ತಂದಿರುವ ಚಿಕನ್ ನೆನೆದು ನೀರು ಸುರಿಸುತ್ತಾ ಈ ಆಹ್ವಾನಕ್ಕಾಗಿ ಪಟ್ಟಪಾಡು ನೆನೆಯುತ್ತಾ ದೆಹಲಿ ಹಾರಲು ಗೆಟ್‌ರೆಡಿ ಮಾಡುತ್ತಿದ್ದಾರೆಂದು ನಂಬಲರ್ಹ ಸುದ್ದಿ ಮೂಲವೊಂದು ವರದಿ ಮಾಡಿದೆ.

- ಜೀ

ರೈತ ಹೋರಾಟದ ಚಂಡ ಮದ್ದಳೆ

ಬಿಜೆಪಿ ನೇತೃತ್ವದ ಎನ್.ಡಿ.ಎ ಸರ್ಕಾರದ ರೈತವಿರೋದಿ ಜನವಿರೋದಿ, ದೇಶ ವಿರೋಧಿ ಬಜೆಟ್ ವಿರುದ್ಧ ಹೋರಾಟವನ್ನು, ಕೋಮುವಾದಿ ರಾಜಕೀಯ ಪಿತೂರಿಗಳ ವಿರುದ್ಧ ದೇಶದಲ್ಲಿ ಮೂರನೇ ಪರ್ಯಾಯವೊಂದನ್ನು ರೂಪಿಸುವ ನಿಟ್ಟಿನಲ್ಲಿ ಮಹತ್ವದ ಬೆಳವಣಿಗೆಯಾಗಿ ಮಾರ್ಚ್ 16-2000 ದಂದು ಬೆಂಗಳೂರಿನಲ್ಲಿ ಬೃಹತ್ ಸಮಾವೇಶ ನಡೆಯಿತು.

ಮಾರ್ಕ್ಸ್‌ವಾದಿ ಕಮ್ಯುನಿಸ್ಟ್ ಪಕ್ಷ ಮತ್ತು ಜನತಾದಳ (ಜಾತ್ಯಾತೀತ)ಗಳು ಜಂಟಿಯಾಗಿ ಸಂಘಟಿಸಿದ್ದ ಈ ಬೃಹತ್ ಸಮಾವೇಶ ಬೆಂಗಳೂರಿನ ಜಕ್ಕರಾಯನ ಕೆರೆ ಮೈದಾನದಲ್ಲಿ ನಡೆಯಿತು. ಸಿಪಿಐ(ಎಂ) ಅಖಿಲಭಾರತ ಪ್ರಧಾನ ಕಾರ್ಯದರ್ಶಿ ಕಾಂ। ಹರಿಕಿಶನ್ ಸಿಂಗ್ ಸುರ್ಜಿತ್ ಮಾಜಿ ಪ್ರಧಾನಿ ದೇವೇಗೌಡ ಇವರಲ್ಲದೆ, ಅನಾರೋಗ್ಯದ ಕಾರಣಗಳಿಗಾಗಿ ಸಾರ್ವಜನಿಕ ಜೀವನದಿಂದ ಹಲವು ವರ್ಷಗಳ ಕಾಲ ದೂರವಿದ್ದ ಮಾಜಿ ಪ್ರಧಾನಿ ವಿ.ಪಿ. ಸಿಂಗ್‌ರವರು ಭಾಗವಹಿಸಿದ್ದು ಈ ಸಮಾವೇಶದ ಮತ್ತೊಂದು ವಿಶೇಷವಾಗಿತ್ತು.

ರೈತ ವಿರೋಧಿ ಜನ ವಿರೋಧಿ ನೀತಿಗಳ ವಿರುದ್ಧ ಹೋರಾಟದ ಘೋಷಣೆಯಾಗಿ ಸಾಂಕೇತಿಕವಾಗಿ ಮುಖಂಡರುಗಳು ಚಂಡ ಮದ್ದಳೆ ಬಾರಿಸುವ ಮೂಲಕ ಸಮಾವೇಶವನ್ನು ಉದ್ಘಾಟಿಸಿದರು.


ಈ ಸಂದರ್ಭದಲ್ಲಿ ಮಾತನಾಡಿದ ವಿ.ಪಿ. ಸಿಂಗ್‌ರವರು ಈ ಸಮಾವೇಶ ಬಡವರು ರೈತರ ವಿಷಯಗಳಿಗೆ ಸಂಬಂಧಿಸಿದ್ದು ನಮ್ಮ ದೇಶದ ರೈತರು ಬೆಳೆವ- ಗೋಧಿ ಸೇಬು-ಹತ್ತಿ ಹಾಲು ಸಕ್ಕರೆ ಎಲ್ಲವನ್ನೂ ಆಮದು ಮಾಡಿಕೊಳ್ಳಲಾಗುತ್ತಿದೆ. ವಿದೇಶಿ ವಸ್ತುಗಳನ್ನು ಆಮದು ಮಾಡಿಕೊಂಡರೆ ನಮ್ಮ ದೇಶದ ರೈತ ದಿವಾಳಿಯಾಗುತ್ತಾನೆ. ಆಹಾರದ ಉತ್ಪಾದನೆ ಇದೇ ಪ್ರಥಮ ಬಾರಿಗೆ ಕುಸಿದಿದೆ. -ಸ್ಥಗಿತ ಗೊಂಡಿದೆ. ರೈತನ ವಸ್ತುವಿಗೆ ಬೆಲೆ ಸಿಗುತ್ತಿಲ್ಲ ಆದರೆ ರೈತ ಕೊಂಡುಕೊಳ್ಳುವ ವಸ್ತುವಿಗೆ ಹೆಚ್ಚಿನ ಬೆಲೆ ತೆರಬೇಕಿದೆ. ವಿದೇಶಗಳಲ್ಲಿ ದೊಡ್ಡ ಪ್ರಮಾಣದ ಸಬ್ಸಿಡಿ ಪಡೆದ ಕೃಷಿ ವಸ್ತುಗಳನ್ನು ಆಮದು ಮಾಡಿಕೊಳ್ಳಲಾಗುತ್ತಿದೆ ಎಂದರು.

ಸಬ್ಸಿಡಿ ಸಲ್ಲುತ್ತಿರುವುದು ರೈತರಿಗಲ್ಲ ಕೈಗಾರಿಕೋದ್ಯಮಿ-ಬಂಡವಾಳದಾರರಿಗೆ.

ಕೇಂದ್ರ ಸರ್ಕಾರ ರಸಗೊಬ್ಬರಕ್ಕೆ ನೀಡುವ ಸಬ್ಸಿಡಿ ಸಲ್ಲುವುದು ರೈತರಿಗಲ್ಲ ಸರ್ಕಾರ ಸುಳ್ಳು ಹೇಳುತ್ತಿದೆ. ಸಬ್ಸಿಡಿ ಸಿಗುವುದು ರಸಗೊಬ್ಬರ ತಯಾರಿಸುವ ಕೈಗಾರಿಕೋದ್ಯಮಿಗಳಿಗೆ, ಬಂಡವಾಳದಾರರಿಗೆ. ಈ ಕೈಗಾರಿಕೋದ್ಯಮಿಗಳಿಗೆ ಶೇ. 12 ಲಾಭದ ಗ್ಯಾರಂಟಿ ಒದಗಿಸಿ, ಬೆಲೆ ಹೆಚ್ಚಳಕ್ಕೆ ಅವಕಾಶ ಒದಗಿಸಿ, ಹಣದುಬ್ಬರದ ಪರಿಣಾಮವೂ ಸೇರಿದಂತೆ ಒಟ್ಟಾರೆ ಶೇ 25 ಹಣವನ್ನು ಕೊಳ್ಳೆ ಹೊಡೆಯುವ ಭ್ರಷ್ಟ ಒಪ್ಪಂದವನ್ನು ನಾನು ತಿರಸ್ಕರಿಸಿದೆ. ರಸಗೊಬ್ಬರದ ಉತ್ಪಾದನಾ ವೆಚ್ಚದ ಆಧಾರದಲ್ಲಿ ಕೈಗಾರಿಕೋದ್ಯಮಿಗಳಿಗೆ ಸಹಾಯಧನ ದೊರೆಯುತ್ತದೆ. **ಉತ್ಪಾದನಾ ವೆಚ್ಚದ ನಿರ್ಧಾರದಲ್ಲಿ ಭಾರಿ ಮೋಸ ನಡೆದು ಹೆಚ್ಚುವೆಚ್ಚ ತೋರಿಸಲಾಗುತ್ತದೆ. ನಮ್ಮ ದೇಶದಲ್ಲಿ ರಸಗೊಬ್ಬರ ಕೈಗಾರಿಕೆಗಳಲ್ಲಿ ದೋಷಪೂರಿತ ಹಳೆಯ ತಾಂತ್ರಿಕತೆ ಇದೆ. ವಿದ್ಯುತ್-ಹಾಗೂ ಕಚ್ಚಾ ವಸ್ತುಗಳನ್ನು ಅವು ಹೆಚ್ಚು ಕಬಳಿಸುತ್ತವೆ.** 400 ರೂ. ಗೆ ಒಂದು ಕೆ.ಜಿ.ಯ ದ್ರಾಕ್ಷಿ ಆಮದು ಮಾಡಿಕೊಳ್ಳುವ ಬದಲಿಗೆ ರೈತರಿಗೆ ಅಗತ್ಯವಾದ ರಸಗೊಬ್ಬರ ತಯಾರಿಕಾ ಯಂತ್ರೋಪಕರಣ ತಂತ್ರಜ್ಞಾನವನ್ನು ಏಕೆ ಆಮದು ಮಾಡಿಕೊಳ್ಳಬಾರದು? ಹೀಗಾದಲ್ಲಿ ಅತ್ಯಂತ ಕಡಿಮೆ ಬೆಲೆಗೆ ರಸಗೊಬ್ಬರ ದೊರೆಯುತ್ತದೆ. ಸರ್ಕಾರ 'ವ್ಯವಸಾಯದ ಜೊತೆ ವ್ಯವಹಾರ ನಿಲ್ಲಿಸಬೇಕು' ಶ್ರೀ ವಿ.ಪಿ. ಸಿಂಗ್ ಆಗ್ರಹಪಡಿಸಿದರು.

ರೇಷನ್ ನುಂಗುವ ಬಾಲವಿಲ್ಲದ ಇಲಿಗಳು

ಪಡಿತರ ವ್ಯವಸ್ಥೆಯ ಮೂಲಕ ಸರ್ಕಾರ ಜನರಿಗೆ 12 ಸಾವಿರ ಕೋಟಿ ಸಹಾಯಧನ ನೀಡುತ್ತಿರುವುದಾಗಿ ಘೋಷಿಸಿದೆ. ಆದರೆ ಅದು ಯಾರಿಗೆ ತಲುಪುತ್ತಿದೆ. ನಗರ -ಹಳ್ಳಿಗಳಲ್ಲಿ ನಿಜವಾಗಿ ಅಗತ್ಯ ಇರುವವರಿಗೆ ರೇಷನ್ ಸಿಗುತ್ತಿಲ್ಲ. ಅದಕ್ಷತೆ - ಭ್ರಷ್ಟಾಚಾರ ತುಂಬಿದೆ. **ಆಹಾರ ನಿಗಮದ ದಾಖಲೆಗಳಲ್ಲಿ ದೊಡ್ಡ ಪ್ರಮಾಣದ ರೇಷನನ್ನು ಇಲಿಗಳು ತಿಂದು ಹಾಕಿದ್ದಾವೆಂದು ಬರೆಯಲಾಗುತ್ತದೆ. ಅದು ನಿಜ, ಆದರೆ ಅದು ಬಾಲವಿಲ್ಲದ ಇಲಿಗಳು.** ನಮ್ಮಲ್ಲಿ ರೇಷನ್‌ಗೆ ಹಣವಿಲ್ಲ, ಶಿಕ್ಷಣಕ್ಕೆ ಹಣವಿಲ್ಲ, ರಸ್ತೆಗೆ ಹಣ ಇಲ್ಲ ಎನ್ನಲಾಗುತ್ತಿದೆ. ಆದರೆ **200 ದೊಡ್ಡ ದೊಡ್ಡ ಕಂಪನಿಗಳು ಬಾಕಿ ಉಳಿಸಿಕೊಂಡಿರುವ 60 ಸಾವಿರ ಕೋಟಿರೂಗಳನ್ನು ವಸೂಲಿ ಮಾಡಲು ಏನೂ ಕ್ರಮ ಕೈಗೊಳ್ಳುತ್ತಿಲ್ಲ.** ಬದಲಿಗೆ ಬಡವರ ಹೊಟ್ಟೆಯ ಮೇಲೆ ಹೊಡೆಯಲಾಗುತ್ತಿದೆ. ನಮ್ಮ ದೇಶ ವರ್ಷಕ್ಕೆ 1 ಲಕ್ಷ ಕೋಟಿ ರೂಗಳನ್ನು ವಿದೇಶಿ ಸಾಲದ ಬಡ್ಡಿಯಾಗಿ ತೆರುತ್ತಿದೆ. ನಮ್ಮ ತೆರಿಗೆಯ ಶೇ. 75ರಷ್ಟು ಬಡ್ಡಿಗಾಗಿಯೆ ವೆಚ್ಚವಾಗುತ್ತಿದೆ. ಸರ್ಕಾರ ತನ್ನ ತೀರ್ಮಾನಗಳ ಪ್ರಶ್ನೆಯಲ್ಲಿ ಜನರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳುತ್ತಿಲ್ಲ. "ಸಣ್ಣ ಗುಂಪಿ"ನಲ್ಲಿ ಈ ಬಗೆಗೆ ತೀರ್ಮಾನಿಸಲಾಗುತ್ತಿದೆ. ಪಿ.ವಿ. ನರಸಿಂಹರಾವ್ ಗೋಧಿ ಆಮದು ಮಾಡಿಕೊಳ್ಳುವ ಸಂದರ್ಭದಲ್ಲಿ ಮುಂಬೈ ಬಂದರಿನಲ್ಲಿ ಗೋಧಿ ಇಳಿಸಲು ಬಿಡುವುದಿಲ್ಲ ಎಂಬ ರೈತರ ಎಚ್ಚರಿಕೆಯಿಂದ ಆಮದನ್ನು ತಡೆಯಲಾಯಿತು. **ಈಗಲೂ ಅಷ್ಟೇ ನಾವು ಎದ್ದು ನಿಂತರೆ ಖಂಡಿತ ನಾವು ಗೆಲ್ಲುವೆವು. ಜನರ ಹೊಟ್ಟೆಯಲ್ಲಿ ಬೆಂಕಿ ಇದೆ ಅದು ತಲೆಗೆ ಏರಿದರೆ ಕ್ರಾಂತಿ ಸಂಭವಿಸುತ್ತದೆ** ಎಂದು ವಿಪಿ ಸಿಂಗ್ ಎಚ್ಚರಿಸಿದರು.



ಮೂರನೇ ಪರ್ಯಾಯ ಮೂಡಿಬರಲಿದೆ - ಸುರ್ಜಿತ್

ದೇಶ ಒಂದು ಗಂಭಿರ ಪರಿಸ್ಥಿತಿಯಲ್ಲಿ ಹಾದು ಹೋಗುತ್ತಿದೆ. ಸ್ವಾತಂತ್ರ್ಯಗಳಿಸಿ 50 ವರ್ಷಗಳು ದಾಟಿವೆ. ಬಡವರು ಮತ್ತಷ್ಟು ಬಡವರು ಆಗುತ್ತಿದ್ದಾರೆ. ಶ್ರೀಮಂತರು, ಬಹುರಾಷ್ಟ್ರೀಯ ಕಂಪನಿಗಳು ಮತ್ತಷ್ಟು ಶ್ರೀಮಂತಿಕೆ ಗಳಿಸುತ್ತಿವೆ. ಬಹುತೇಕ 45 ವರ್ಷಗಳ ಕಾಲ ಕಾಂಗ್ರೆಸ್ ದೇಶವನ್ನು ಆಳಿದೆ. ಕಾಂಗ್ರೆಸ್, ಅಲ್ಪಸಂಖ್ಯಾತರು ದಲಿತರು ಬಡವರ ಕುರಿತು ತುಂಬಾ ಮಾತನಾಡುತ್ತದೆ. ಆದರೆ ಬಾಬರಿ ಮಸೀದಿ ನಾಶದನಂತರ ಅಲ್ಪಸಂಖ್ಯಾತರು ಕಾಂಗ್ರೆಸ್‌ನಿಂದ ದೂರವಾದರು. ಜನ ವಿರೋಧಿ ಆರ್ಥಿಕ ನೀತಿಗಳ ಪರಿಣಾಮ ಹಸಿವಿನ ಹೆಚ್ಚಳದಿಂದ ದಲಿತರು ದೂರವಾಗಿದ್ದಾರೆ. ಹಿಂದೆ 446 ಲೋಕಸಭಾ ಸ್ಥಾನಗಳಿಂದ ಈಗ ಕಾಂಗ್ರೆಸ್ ಪಕ್ಷ 112 ಸ್ಥಾನಗಳಿಗೆ ಕಾಂಗ್ರೆಸ್ ಪ್ರಾತಿನಿಧ್ಯ ಇಳಿದಿದೆ. ಆದರೆ ಕಾಂಗ್ರೆಸ್ ಪಕ್ಷ ಇದಕ್ಕೆ ಕಾರಣವಾದ ಅಂಶಗಳೇನು ಎಂದು ಚಿಂತಿಸುತ್ತಿಲ್ಲ. ಪಾಠ ಕಲಿತಿಲ್ಲ. ಎಡ ಪ್ರಜಾಸತ್ತಾತ್ಮಕ ಶಕ್ತಿಗಳು ಸಂಪೂರ್ಣವಾಗಿ ಅತೃಪ್ತಿಯನ್ನು ಬಳಸಿಕೊಳ್ಳಲು ಆಗಿಲ್ಲ. ಜನರನ್ನು ದಾರಿತಪ್ಪಿಸಿ ಕೋಮುವಾದಿ ಕರಾಳ ಶಕ್ತಿಗಳು ಬೆಳೆದಿವೆ. "ವೈವಿಧ್ಯತೆಯಲ್ಲಿ ಏಕತೆ" ಎಂಬ ದೇಶದ ಐಕ್ಯತೆಯ ಕಲ್ಪನೆಗೆ ಅಪಾಯ ಬಂದಿದೆ. 1996ರಲ್ಲಿ ಬಿಜೆಪಿ ಏಕೈಕ ದೊಡ್ಡ ಪಕ್ಷವಾಗಿ ಬಂತು. ಸಂಯುಕ್ತ ರಂಗ ರಚನೆಯ ಮೂಲಕ, ಅದನ್ನು ಸೋಲಿಸಿದೆವು. ಸಂಯುಕ್ತ ರಂಗದ ಪ್ರಯೋಗದಿಂದ ಸೀಮಿತವಾದ ಫಲ ಸಿಕ್ಕಿದೆ. ಆದರೆ ಬಿಜೆಪಿ ಮತ್ತೆ ಅಧಿಕಾರಕ್ಕೆ ಬಂದಿದೆ. ವಿರೋಧ ಪಕ್ಷಗಳ ಪ್ರತಿಭಟನೆ ಹಾಗೂ ಜನ ಬೆಂಬಲ ಕಳೆದುಕೊಳ್ಳುವ ಭಯದಿಂದ, ಸರ್ಕಾರಿ ನೌಕರರು ಆರ್.ಎಸ್.ಎಸ್.ನಲ್ಲಿ ಪಾಲ್ಗೊಳ್ಳಬಹುದು ಎಂಬ ಗುಜರಾತ್ ಬಿಜೆಪಿ ಸರ್ಕಾರದ ನೀತಿ ವಾಪಸ್ಸಾಗಿದೆ. ಆದರೂ ಅವರು ಅವರ ಪ್ರಯತ್ನ ಬಿಡುವುದಿಲ್ಲ. ಸೋಲಿನಿಂದ ಬಿಜೆಪಿ ಪಾಠ ಕಲಿತಿಲ್ಲ. ಶೇ. 83 ಜನ ಹಿಂದುಗಳೇ ಈ ದೇಶದಲ್ಲಿದ್ದಾರೆ. ಯಾವ ಹಿಂದುತ್ವವನ್ನು ಇಲ್ಲಿ ಹೇರಲು ಈ ಶಕ್ತಿಗಳು ಬಯಸುತ್ತವೆ? ಇಲ್ಲಿರುವ ಅಲ್ಪಸಂಖ್ಯಾತರನ್ನು ಈ ದೇಶದಿಂದ ಓಡಿಸಬೇಕೇನು? ದೇಶದ ಜನ ಅದನ್ನು ಎಂದಿಗೂ ಒಪ್ಪುವುದಿಲ್ಲ. ಸಂವಿಧಾನ ಪರಾಮರ್ಶೆ ನಡೆಸಲಾಗುತ್ತಿದೆ. ಜನ ಇದನ್ನು ಖಂಡಿತ ತಿರಸ್ಕರಿಸುತ್ತಾರೆ. ವಿಮಾರಂಗವನ್ನು ಖಾಸಗೀಕರಣ ಮಾಡಲಾಗಿದೆ. ಬ್ಯಾಂಕ್‌ಗಳ ಶೇ. 33 ಷೇರುಗಳನ್ನು ಕೊಳ್ಳಲು ವಿದೇಶಿ ಶಕ್ತಿಗಳಿಗೆ ಅವಕಾಶ ನೀಡಲಾಗಿದೆ. ಅಮೇರಿಕಾಗೆ ಬೇಕಾದ ನೀತಿಗಳು ಜಾರಿಯಾಗುತ್ತಿದೆ. ದೇಶದ ಹಿತಾಸಕ್ತಿಗಳನ್ನು ಬಲಿಕೊಡಲಾಗುತ್ತಿದೆ. ಮಾರ್ಚ್ 9-2000 ಈ ನೀತಿಯ ವಿರುದ್ಧ ಬೃಹತ್ ಪ್ರತಿಭಟನೆ ನಡೆದಿದೆ. ಮೇ 11ರಂದು ಈ ನೀತಿಗಳ ವಿರುದ್ಧ ಅಖಿಲಭಾರತ ಸಾರ್ವಜನಿಕ ಮುಷ್ಕರ ನಡೆಯಲಿದೆ ಎಂದು ಸುರ್ಜಿತ್ ಅವರು ಘೋಷಿಸಿದರು.

ಸೇಲಂ ಸಾರ್ವಜನಿಕ ಉಕ್ಕಿನ ಕಾರ್ಖಾನೆ ಮಾರಾಟದ ನೀತಿಯ ವಿರುದ್ಧ ಎನ್.ಡಿ.ಎ ಭಾಗವಾದ ಡಿ.ಎಂ.ಕೆ. ಪ್ರತಿಭಟಿಸುತ್ತಿದೆ. ಪಡಿತರ ವಸ್ತುಗಳ ಬೆಲೆ ಏರಿಸಲಾಗಿದೆ. ಯೂರಿಯಾ ರಸಗೊಬ್ಬರ ದುಬಾರಿಯಾಗಿದೆ. ಇಂತಹ ನೀತಿಗಳ ವಿರುದ್ಧ ತೀವ್ರ ಪ್ರತಿರೋಧ ಮೂಡಿಬರಲಿದೆ. ಸಾಮಾಜಿಕ ನ್ಯಾಯಕ್ಕಾಗಿ ಮಂಡಲ್ ವರದಿ ಜಾರಿ ಮಾಡಲು ಹೊರಟಾಗ ಬಿಜೆಪಿ ರಥಯಾತ್ರೆ ಆರಂಭಿಸಿ ವಿ.ಪಿ.ಸಿಂಗ್ ಸರ್ಕಾರವನ್ನು ಬೀಳಿಸಿತು. ಆದರೆ ನಂತರ ಸಂಯುಕ್ತ ರಂಗ ಮೂರನೇ ಪರ್ಯಾಯವಾಗಿ ಮೂಡಿಬಂದಂತೆ ಮುಂದೆಯೂ ದೇಶದಲ್ಲಿ ವಿನಾಶಕಾರಿ ಆರ್ಥಿಕ ನೀತಿ ಕೋಮುವಾದದ ವಿರುದ್ಧ ಮೂರನೇ ಪರ್ಯಾಯ ಮೂಡಿ ಬರಲಿದೆ. ಈ ಹಿನ್ನೆಲೆಯಲ್ಲಿ ಈ ಸಮಾವೇಶ ತುಂಬಾ ಮಹತ್ವದ್ದು ಎಂದು ಸುರ್ಜಿತ್‌ರವರು ಘೋಷಿಸಿದರು.

ಮನೆಮಾರಿ ಚಿಲ್ಲರೆ ಅಂಗಡಿ ಸಾಲ ತೀರಿಸುವ ದಿವಾಳಿಕೋರ ನೀತಿ

'ರೈತರು ಬರುವರು ದಾರಿ ಬಿಡಿ - ರೈತರ ಬೆವರಿಗೆ ಬೆಲೆ ಕೊಡಿ' ಎಂಬ ಸಮಾವೇಶದ ಘೋಷಣೆಯ ಕುರಿತು ಪ್ರಸ್ತಾಪಿಸಿದ ಮಾಜಿ ಪ್ರಧಾನಿ ಎಚ್.ಡಿ. ದೇವೇಗೌಡರು. ರೈತರಿಗೆ ದಾರಿಬಿಡುವುದಿಲ್ಲ.

ಪುಟ 4 ಕ್ಕೆ

ಬೀಗ............... ವಜಾ....... ಕಾಂಗ್ರೆಸ್ ಸರ್ಕಾರ

ಶ್ರೀ ವಿ.ಪಿ. ಸಿಂಗ್‌ರವರು ರಾಜೀವ್‌ಗಾಂಧಿಯವರ ಕಾಂಗ್ರೆಸ್ ಸರ್ಕಾರದಲ್ಲಿ ಹಣಕಾಸು ಮಂತ್ರಿಗಳಾಗಿದ್ದಾಗಿನ ಅನುಭವಗಳು 1986ರಲ್ಲಿ ಏರುತ್ತಿರುವ ವಿದೇಶಿ ಸಾಲದ ಪ್ರವೃತ್ತಿಯನ್ನು ದೇಶದ ಆರ್ಥಿಕತೆಯ ಮೇಲೆ ಅದರ ದುಷ್ಪರಿಣಾಮಗಳ ಕುರಿತು ಹಾಗೂ ಅಂದಿನ ಆರ್ಥಿಕ ಬಿಕ್ಕಟ್ಟು ಕುರಿತು ಜನರಿಗೆ ಮಾಹಿತಿ ನೀಡಬೇಕೆಂದು ಪ್ರಧಾನಿಯವರನ್ನು ಅವರು ಒತ್ತಾಯಪಡಿಸಿದ್ದರಂತೆ.

ಆದರೆ ಈ ಯಾವ ಮಾಹಿತಿಯು ಯಾವ ರೀತಿಯಲ್ಲೂ ಹೊರಗೆ ಹೋಗಬಾರದು ಎಂದು ಈ ವಿಷಯಕ್ಕೆ ಸಂಬಂಧಿಸಿದ ಎಲ್ಲಾ ದಾಖಲೆ ಮಾಹಿತಿಯನ್ನು ಭದ್ರಪಡಿಸಿ ಬೀಗ ಹಾಕಲು ಶ್ರೀ ರಾಜೀವ್‌ಗಾಂಧಿಯವರು ಸೂಚಿಸಿದರಂತೆ.

ರಸಗೊಬ್ಬರಕ್ಕೆ ಸರ್ಕಾರ ನೀಡುತ್ತಿದ್ದ ಸಬ್ಸಿಡಿಯನ್ನು ಬಂಡವಾಳದಾರರೇ ಕಬಳಿಸುತ್ತಿರುವುದನ್ನು ಗಮನಿಸಿ, ಕೈಗಾರಿಕೋದ್ಯಮಿಗಳಿಗೆ ಸಬ್ಸಿಡಿ ನೀಡುವ ಈಗಿನ ಪದ್ಧತಿಯನ್ನು ವಜಾ ಮಾಡಿ, ರೈತರಿಗೆ ನೇರವಾಗಿ ಸಹಾಯಧನ ಸಿಗುವ ವ್ಯವಸ್ಥೆ ರೂಪಿಸಲು ತೀರ್ಮಾನಿಸಿದರಂತೆ. ಇದರ ಬೆನ್ನ ಹಿಂದೆಯೇ ಸ್ವತಃ ವಿ.ಪಿ. ಸಿಂಗರು ಮಂತ್ರಿ ಮಂಡಲದಿಂದ ವಜಾಗೊಂಡಿದ್ದರು.

ಮಾಸದ ನೆನಪುಗಳು
(ಒಂದು ರಾಜಕೀಯ ಆತ್ಮಕಥನ)



ಜ್ಯೋತಿಬಸು ಆತ್ಮಕಥನ

ಕನ್ನಡಕ್ಕೆ: ವಿಶ್ವಕುಂದಾಪುರ

ಧಾರವಾಹಿ 30

ಕಳೆದ ಸಂಚಿಕೆಯಲ್ಲಿ ಸೋವಿಯತ್ ಒಕ್ಕೂಟದ ನಾಯಕರಾದ ಖ್ರುಶ್ಚೆವ್ ಮತ್ತು ಬುಲ್ಗಾನಿನ್‌ರವರಿಗೆ ಅದ್ದೂರಿ ಸ್ವಾಗತ ಹಾಗೂ 50 ಲಕ್ಷ ಜನರೆದುರು ಅವರಿಗೆ ನಾಗರಿಕ ಸನ್ಮಾನ, ಗೋವಾ ವಿಮೋಚನಾ ಹೋರಾಟದಲ್ಲಿ ಕಮ್ಯುನಿಸ್ಟ್ ಪಕ್ಷದ ಪಾತ್ರ ಹಾಗೂ ಕರ್ನಾಟಕದ ಎನ್.ಎಲ್.ಉಪಾಧ್ಯಾಯ, ಎನ್.ಕೆ.ಉಪಾಧ್ಯಾಯರ ಹೋರಾಟದ ಬಗ್ಗೆ ಓದಿರುವಿರಿ. ಈ ಸಂಚಿಕೆಯಲ್ಲಿ ಗೋವಾ ವಿಮೋಚನೆಗಾಗಿ ಕೇಂದ್ರದ ನೆಹರೂ ಸರ್ಕಾರದ ಮೇಲೆ ತಂದ ಒತ್ತಡ ಹಾಗೂ ರಾಜ್ಯ ವಿಧಾನಸಭೆಯಲ್ಲಿ ಮಂಡಿಸಿದ ಗೊತ್ತುವಳಿ, ಕಾಂಗ್ರೆಸ್ ನಿಲುವುಗಳ ಬಗ್ಗೆ ಓದಿ........

ಗೋವೆ ವಿಮೋಚನೆಗೊಂಡಿತು

ಆರ್.ಎಸ್.ಪಿ. ನಾಯಕ ಹಾಗೂ ಸಂಸದೀಯ ಪಟು ತ್ರಿದಿಬ್ ಚೌಧರಿ ಗೋವಾ ವಿಮೋಚನೆ ಚಳುವಳಿಯಲ್ಲಿ ಮಹತ್ವದ ಪಾತ್ರವನ್ನು ನಿರ್ವಹಿಸಿದರು. ಅವರನ್ನು ಪೋರ್ಚುಗೀಸ್ ಪೋಲೀಸರು ಬಂಧಿಸಿದ್ದರು. ಆದರೆ ನೆಹರೂ ಅವರ ಬಿಡುಗಡೆಗೆ ಏನನ್ನೂ ಮಾಡಲಿಲ್ಲ. ತ್ರಿದಿಬ್‌ರನ್ನು ಜೈಲಿನಲ್ಲಿ ಅಮಾನವೀಯವಾಗಿ ಹಿಂಸಿಸಲಾಯಿತು. ಡಿಸೆಂಬರ್ 13 ರಂದು ನಾನು ಅನಧಿಕೃತ ಗೊತ್ತುವಳಿಯೊಂದನ್ನು ಮಂಡಿಸಿದೆ.

"ತ್ರಿದಿಬ್ ಚೌಧರಿಯವರ ಬಿಡುಗಡೆಗೆ ಕ್ರಮಕೈಗೊಳ್ಳುವಂತೆ, ಮತ್ತು ಬಿಡುಗಡೆ ಆಗುವವರೆಗೆ ಅವರನ್ನು ಗೌರವಯುತವಾಗಿ ನಡೆಸಿಕೊಳ್ಳುವಂತೆ ರಾಜ್ಯ ಸರಕಾರ ತಕ್ಷಣವೇ ಕೇಂದ್ರ ಸರಕಾರವನ್ನು ವಿನಂತಿಸಬೇಕೆಂದು ಈ ಸದನ ಭಾವಿಸುತ್ತದೆ" ಎಂದು ಗೊತ್ತುವಳಿಯಲ್ಲಿ ಹೇಳಿದೆ.

ನಾನು ತುಂಬಾ ದೀರ್ಘವಾಗಿ ಮಾತನಾಡಿದೆ, ಫಾರ್ವರ್ಡ್ ಬ್ಲಾಕ್ ನಾಯಕ ಹೇಮಂತ ಬೋಸ್ ಕೂಡ ಮಾತನಾಡಿದರು. ಒಬ್ಬ ಕಾಂಗ್ರೆಸ್ ಶಾಸಕ ಕೂಡ ಗೊತ್ತುವಳಿಯನ್ನು ಬೆಂಬಲಿಸಿದರು.

"ಅಂತರ್‌ರಾಷ್ಟ್ರೀಯ ರಂಗವನ್ನು ನೋಡಿದರೆ ನಮ್ಮ ನಿಜವಾದ ಮಿತ್ರ ಯಾರೆಂಬುದು ತುಂಬಾ ಸ್ಪಷ್ಟವಾಗುತ್ತಿದೆ. ಗೋವಾ ಪ್ರಶ್ನೆಗೆ ಶಾಂತಿಯುತ ಪರಿಹಾರ ಕಂಡುಕೊಳ್ಳಲು ಪಂಡಿತ ನೆಹರೂ ಗರಿಷ್ಠ ಪ್ರಯತ್ನ ಮಾಡುತ್ತಿದ್ದಾರೆ ಎಂಬುದು ನಮಗೆ ಅರ್ಥವಾಗುತ್ತದೆ. ಆದರೆ, ಪೋರ್ಚುಗೀಸ್ ಸಾಮ್ರಾಜ್ಯಶಾಹಿಗಳು ಅವರನ್ನು ನಿರ್ಲಕ್ಷಿಸುತ್ತಿದ್ದುದಷ್ಟೇ ಅಲ್ಲದೆ ಯುದ್ಧವಿಲ್ಲದೆ ಗೋವಾವನ್ನು ಬಿಟ್ಟು ಕೊಡುವುದಿಲ್ಲ ಎಂದು ಬೆದರಿಕೆಯನ್ನೂ ಹಾಕುತ್ತಿದೆ. ಪೋರ್ಚುಗೀಸರ ಹಿಂದೆ ಇನ್ನೂ ದೊಡ್ಡ ಶಕ್ತಿಯಿದೆ ಎಂಬುದನ್ನು ಅರ್ಥಮಾಡಿಕೊಳ್ಳಲು ಹೆಚ್ಚು ಹೊತ್ತೇನೂ ಬೇಕಾಗಿಲ್ಲ. ಯಾಕೆಂದರೆ ಭಾರತ ಸರಕಾರಕ್ಕೆ ಈ ರೀತಿಯ ಸವಾಲು ಹಾಕಲು ಪೋರ್ಚುಗೀಸರಿಗೆ ಶಕ್ತಿಯಿಲ್ಲ. ಅವರಿಗೆ ಅಮೇರಿಕ ಸಾಮ್ರಾಜ್ಯಶಾಹಿಗಳು ಬೆಂಬಲ ನೀಡುತ್ತಿ ದ್ದಾರೆಂಬುದು ಈಗ ಸ್ಪಷ್ಟ. ಗೋವಾದಲ್ಲಿ ಆಕ್ರಮಣದ ಭಾಷೆ ಮಾತ್ರವೇ ಯಶಸ್ವಿಯಾಗುತ್ತದೆ ಎಂಬುದನ್ನು ಅರಿಯಲು ಕೇಂದ್ರ ಸರಕಾರಕ್ಕೆ ಎಷ್ಟು ಸಮಯ ತಗಲುತ್ತದೆ ಎಂಬುದು ನಮಗೆ ಗೊತ್ತಿಲ್ಲ. ಸರಕಾರ ಇದನ್ನು ಅರ್ಥಮಾಡಿಕೊಳ್ಳಬೇಕು. ಗೋವಾವನ್ನು ಬಲಪ್ರಯೋಗದಿಂದಲೇ ವಿಮೋಚನೆಗೊಳಿಸಬೇಕು. ಗೋವಾ ವಿಮೋಚನೆ ಹೋರಾಟದಲ್ಲಿ ಬಂಧಿತರಾದವರೂ ಸೇರಿದಂತೆ ಅನೇಕ ರಾಜಕೀಯ ಮುಖಂಡರು ಸೆರೆಮನೆಯಲ್ಲಿ ಇದ್ದಾರೆಂಬುದು ನಮಗೆ ಗೊತ್ತು" ಎಂದು ನನ್ನ ಭಾಷಣದಲ್ಲಿ ಹೇಳಿದೆ.

ಸತ್ಯಾಗ್ರಹ ತಡೆಯಲು ಕಾಂಗ್ರೆಸ್ ಯತ್ನ

ಗೋವಾ ಸತ್ಯಾಗ್ರಹವನ್ನು ತಡೆಯಲು ಕಾಂಗ್ರೆಸ್ ಪ್ರಯತ್ನಿಸಿತು. ಸತ್ಯಾಗ್ರಹವನ್ನು ನಿಲ್ಲಿಸುವಂತೆ ಕರೆ ಕೊಡುವ ಗೊತ್ತುವಳಿಯನ್ನು ಎಐಸಿಸಿ ಕಾರ್ಯಸಮಿತಿ ಅಂಗೀಕರಿಸಿತು. ಕಾಂಗ್ರೆಸ್ ಬಣ್ಣ ಮತ್ತೊಮ್ಮೆ ಬಯಲಾಯಿತು.

ಏನಿದ್ದರೂ ಪ್ರತಿಪಕ್ಷದ ಸತತ ಒತ್ತಾಯದಿಂದಾಗಿ ನೆಹರೂ ಸರಕಾರ ಕೆಲವು ಅನುಕೂಲಕರ ಕ್ರಮಗಳನ್ನು ಕೈಗೊಂಡಿತು. ಪೋರ್ಚುಗೀಸ್ ಜೈಲುಗಳಲ್ಲಿದ್ದ ಬಂಧಿಗಳ ಬಿಡುಗಡೆಯಾಯಿತು. 1957ರ ಎರಡನೇ ಸಾರ್ವತ್ರಿಕ ಚುನಾವಣೆಗಳ ಮುನ್ನ, ಮುಖ್ಯವಾಗಿ ರಾಜಕೀಯ ಕಾರಣಗಳಿಗಾಗಿ ಭಾರತ ಸರಕಾರ ಗೋವಾಕ್ಕೆ ಸೇನೆಯನ್ನು ಕಳಿಸುವ ಒತ್ತಡಕ್ಕೆ ಒಳಗಾಯಿತು. ಗೋವಾದ ವಿಮೋಚನೆಯಾಯಿತು. ಗೋವಾ ವಿಮೋಚನೆ ಹೋರಾಟದಲ್ಲಿ ಪಕ್ಷದ ಪಶ್ಚಿಮ ಬಂಗಾಳ ರಾಜ್ಯ ಘಟಕ ಮತ್ತು ರಾಜ್ಯದ ಜನರು ಒಂದು ಮಹತ್ವದ ಪಾತ್ರ ವಹಿಸಿದ್ದರು ಎನ್ನುವುದು ನಮಗೆ ಹೆಮ್ಮೆಯ ಸಂಗತಿ.

ಕರಾಳವಾದ ಬಂಧನ ಕಾನೂನಿನ ಅವಧಿಯನ್ನು ವಿಸ್ತರಿಸುವ ಬಗ್ಗೆ ಡಾ. ರಾಯ್ 1955 ಸೆಪ್ಟೆಂಬರ್ 7 ರಂದು ಒಂದು ಮಸೂದೆಯನ್ನು ಮಂಡಿಸಿದರು. "ಈ ಮಸೂದೆ ಅಪ್ರಜಾಸತ್ತಾತ್ಮಕ, ಸರ್ವಾಧಿಕಾರದ್ದು ಹಾಗೂ ಮೂಲಭೂತ ಹಕ್ಕುಗಳ ಮೇಲಿನ ಅತಿಕ್ರಮಣ" ಎಂದು ನಾನು ವರ್ಣಿಸಿದೆ. ಈ ಮಸೂದೆಯನ್ನು ಕಾರ್ಮಿಕರು, ರೈತರು, ಶಿಕ್ಷಕರು ಮತ್ತು ಪ್ರಜಾಸತ್ತಾತ್ಮಕ ಸಂಸ್ಥೆಯ ವಿರುದ್ಧ ಎಷ್ಟರ ಮಟ್ಟಿಗೆ ಬಳಸಲಾಗಿದೆ ಎಂಬುದು ಕಳೆದ ಎಂಟು ವರ್ಷಗಳಲ್ಲಿ ಜನರಿಗೆ ಅನುಭವವಾಗಿದೆ. ಈ ಅಂಶವನ್ನು ಮನಸ್ಸಿನಲ್ಲಿಟ್ಟುಕೊಂಡು ಈ ಮಸೂದೆ ಬಗ್ಗೆ ಚರ್ಚಿಸಬೇಕು ಎಂದು ನಾನು ವಿಶೇಷವಾಗಿ 6 ಮತ್ತು 7ನೇ ನಿಯಮಗಳನ್ನು (ಪ್ರತಿಬಂಧಕ ಆಜ್ಞೆಗಳು) ಪ್ರಸ್ತಾಪಿಸಿದೆ. ಈ ನಿಯಮಗಳನ್ನು ಬಳಸಿ ಚಿತ್ತರಂಜನ್ ಮತ್ತು ಬುರ್ನಾಪುರ ಕಾರ್ಮಿಕರ ಟ್ರೇಡ್ ಯೂನಿಯನ್ ಹಕ್ಕುಗಳನ್ನು ಕಸಿದುಕೊಳ್ಳಲಾಗಿತ್ತು. 10ನೇ ನಿಯಮ 'ಛಿದ್ರಕಾರಿ ಚಳುವಳಿಗಳಿಗೆ' ಸಂಬಂಧಪಟ್ಟಿದ್ದಾಗಿತ್ತು. ಅದನ್ನು ಶಿಕ್ಷಕರ ಚಳುವಳಿಯ ವಿರುದ್ಧ ಹೆಚ್ಚಾಗಿ ಬಳಸಲಾಯಿತು. ಈ ಕರಾಳ ಮಸೂದೆ ಮೇಲಿನ ಚರ್ಚೆ ಸಂದರ್ಭದಲ್ಲಿ ಸ್ಪೀಕರ್ ತಳೆದ ನಿಲುವನ್ನು ವಿರೋಧಿಸಿ ಸೆಪ್ಟೆಂಬರ್ 8 ರಂದು ಇಡೀ ಪ್ರತಿಪಕ್ಷ ಸಭಾತ್ಯಾಗ ಮಾಡಿತು.

ರಾಜ್ಯಗಳ ಪುನರ್‌ಘಟನೆ

ರಾಜ್ಯಗಳ ಪುನರ್‌ಘಟನೆ ಕುರಿತು ರಚಿಸಿದ ಆಯೋಗ 1956ರ ಡಿಸೆಂಬರ್‌ನಲ್ಲಿ ತನ್ನ ಶಿಫಾರಸುಗಳನ್ನು ಬಿಡುಗಡೆ ಮಾಡಿತು. ಅವುಗಳು ಪಶ್ಚಿಮ ಬಂಗಾಳದಂಥ ಕೆಲವು ರಾಜ್ಯಗಳಿಗೆ ಇಷ್ಟವಾಗುವಂತಿರಲಿಲ್ಲ, ಆಯೋಗದ ವರದಿಯನ್ನು ಡಾ.ರಾಯ್ ಬೆಂಬಲಿಸಲಿಲ್ಲ, ಆದರೆ ಈ ನಿರಾಶೆಯ ಹಿಂದಿನ ಕಾರಣವೇ ಬೇರೆಯಿತ್ತು. ಅದನ್ನು ಆಮೇಲೆ ಚರ್ಚಿಸೋಣ.

ಪಶ್ಚಿಮ ಬಂಗಾಳ ವಿಧಾನ ಪರಿಷತ್ತಿನಲ್ಲಿ (ಅದನ್ನು 1969ರಲ್ಲಿ ರದ್ದುಪಡಿಸಲಾಯಿತು) ಕಾ. ಅಬ್ದುಲ್ ಹಲೀಂ ವರದಿಯನ್ನು ಟೀಕಿಸಿದರು. ರಾಷ್ಟ್ರೀಯ ಏಕತೆ ಮತ್ತು ಭದ್ರತೆಯನ್ನು ಕಾಯ್ದುಕೊಳ್ಳಲು ಹೊಸ ದೃಷ್ಟಿಕೋನ ಅಗತ್ಯ ಎಂದವರು ಹೇಳಿದರು. ಭಾಷೆ, ಸಂಸ್ಕೃತಿ ಪ್ರಾದೇಶಿಕ ಸಾಮಿಪ್ಯ ಮತ್ತು ಜನತೆಯ ಆಶೆ ಹಾಗೂ ಆಶೋತ್ತರಗಳ ಆಧಾರದಲ್ಲಿ ಇದನ್ನು ಮಾಡಬಹುದು. ಸಹಜವಾಗಿಯೇ (Demarcation) ಪುನರ್‌ರಚನೆ ವ್ಯವಸ್ಥೆಯಲ್ಲಿ ಗ್ರಾಮ ಅತಿ ಕೆಳಗಿನ ಘಟಕವಾಗಬೇಕು. ಚರ್ಚೆಯ ವೇಳೆ, ವರದಿಯಲ್ಲಿ ಪ.ಬಂಗಾಳದ ವಿರುದ್ಧ ತಾರತಮ್ಯ ಎಸಗಲಾಗಿದೆ ಎಂದು ಪ್ರತಿಭಟಿಸಿ ಅಸೆಂಬ್ಲಿಯತ್ತ ಒಂದು ಬೃಹತ್ ರ್‍ಯಾಲಿ ಬಂತು. ರ್‍ಯಾಲಿಯನ್ನು ಅಸೆಂಬ್ಲಿ ಕಟ್ಟಡಕ್ಕಿಂತ ದೂರದಲ್ಲಿ ತಡೆಯಲಾಯಿತು.

ಭಾಷೆಯ ಆಧಾರದಲ್ಲಿ ರಾಜ್ಯಗಳ ಪುನರ್‌ಘಟನೆ ಮಾಡುವುದಾಗಿ ಕಾಂಗ್ರೆಸ್ ಸರಕಾರ ಸದಾ ಆಶ್ವಾಸನೆ ನೀಡಿತ್ತು. ಆದರೆ ಅದು ದ್ವಿಮುಖ ಧೋರಣೆ ಅನುಸರಿಸಿದೆ ಎಂದು ಡಿಸೆಂಬರ್ 6 ರಂದು ಸದನದಲ್ಲಿ ಕಮ್ಯುನಿಸ್ಟ್ ನಾಯಕ ರಣಜಿತ್ ಸೇನ್ ಹೇಳಿದರು.

ಆಯೋಗದ ವರದಿ ಕಾಂಗ್ರೆಸ್ ಸರಕಾರದ ನೀತಿಯನ್ನಷ್ಟೆ ಅನುಸರಿಸಿದ್ದು ಭಾಷೆ ಮತ್ತು ಸಂಸ್ಕೃತಿಯ ಅಂಶಗಳನ್ನು ಕಡೆಗಣಿಸಿತ್ತು.

"ವರದಿಯಿಂದ ಉಂಟಾಗಿರುವ ವಿಷಮಯ ವಾತಾವರಣಕ್ಕೆ ಕಾಂಗ್ರೆಸ್ ಪೂರ್ಣ ಹೊಣೆ. ಭಾಷೆ ಮತ್ತು ಪ್ರಾದೇಶಿಕ ಸಾಮಿಪ್ಯದ ಆದಾರದ ಮೇಲಷ್ಟೇ ಪರಿಹಾರ ಕಂಡುಕೊಳ್ಳಬಹುದು. ಭಾರತ ಒಂದು ಎಂಬುದನ್ನು ನಾವು ಮರೆಯಬಾರದು. ರಾಜ್ಯಗಳ ಗಡಿಗಳನ್ನು ನಿರ್ಧರಿಸುವುದಷ್ಟೇ ಇಲ್ಲಿರುವ ಪ್ರಶ್ನೆಯಲ್ಲ, ರಾಷ್ಟ್ರೀಯ ಭದ್ರತೆ ಮತ್ತು ಏಕತೆಯ ಪ್ರಶ್ನೆಯಾಗಿದೆ. ಬ್ರಿಟೀಷ್ ಆಳ್ವಿಕೆ ವೇಳೆ ಇಡೀ ಕಾಂಗ್ರೆಸ್ ಭಾಷೆಯ ಆಧಾರದಲ್ಲಿ ರಾಜ್ಯಗಳನ್ನು ರಚಿಸುವ ಭರವಸೆ ಮೇಲೆ ಜನಮತಗಳಿಸಿತ್ತಾದರೂ ಕೇಂದ್ರ ಸರಕಾರ ಯಾವುದೇ ವೈಜ್ಞಾನಿಕ ಸಂಶೋಧನೆ ಮಾಡಲಿಲ್ಲ. ಸುಮ್ಮನೆ ಆಯೋಗ ರಚಿಸುವುದರಿಂದ ಏನೂ ಆಗುವುದಿಲ್ಲ" ಎಂದು ಸದನದಲ್ಲಿ ನಾನು ಹೇಳಿದೆ.

ಆಯೋಗದ ವರದಿ ಸಮಯಸಾಧಕತನದ್ದು, ಅದರ ಅಪ್ರಸ್ತುತತೆಗೆ ಕೇಂದ್ರ ಸರಕಾರವೇ ಹೊಣೆ ಎಂದೆ. ವಾಸ್ತವವಾಗಿ, ಪಶ್ಚಿಮ ಬಂಗಾಳದ ಗಡಿ ಪ್ರಶ್ನೆ ವಿಚಾರದಲ್ಲಿ ಕೇಂದ್ರ ಮತ್ತು ರಾಜ್ಯದ ಕಾಂಗ್ರೆಸ್ ಸರಕಾರಗಳು ಸೂಕ್ಷ್ಮ ನಿಲುವು ತಾಳಿರಲಿಲ್ಲ. ನಿರಾಶ್ರಿತರು ಮತ್ತು ನಿರುದ್ಯೋಗ ಸಮಸ್ಯೆಗಳಿಂದಾಗಿ ರಾಜ್ಯದ ಗಡಿಯನ್ನು ವಿಸ್ತರಿಸಬೇಕು ಎಂಬ ತರ್ಕ ಅರ್ಥಹೀನವಾಗಿತ್ತು. ಬಿಹಾರದಿಂದ ಇನ್ನೊಂದು ಮೈಲು ಪ್ರದೇಶವನ್ನು ಪಡೆಯುವುದರಿಂದ ಈ ಸಮಸ್ಯೆಗಳನ್ನು ಬಗೆಹರಿಸಲು ಸಾಧ್ಯವಿಲ್ಲ ಎಂದು ನಾನು ಪ್ರತಿಪಾದಿಸಿದೆ.

ಬೇಡಿಕೆಗೆ ನಾಲ್ಕು ದಶಕಗಳ ನಂತರ ಮನ್ನಣೆ

ಡಾರ್ಜಿಲಿಂಗ್‌ನ ನೇಪಾಳ ಪ್ರದೇಶಗಳಲ್ಲಿ ಸ್ಥಳೀಯ ಸ್ವಯಂ ಸರಕಾರ ರಚನೆಯನ್ನು ಖಾತರಿಪಡಿಸುವಂತೆ ಒತ್ತಾಯಿಸಿದೆ. ಇದು ನಮ್ಮ ಪಕ್ಷದ ನಿಲುವಾಗಿತ್ತು. ಕಾಂಗ್ರೆಸ್ ಸರಕಾರ ಸಹಜವಾಗಿಯೇ ಈ ಬೇಡಿಕೆಯನ್ನು ತಿರಸ್ಕರಿಸಿತು. ಆಗ ನಮ್ಮ ಬೇಡಿಕೆಯನ್ನು 'ರಾಷ್ಟ್ರವಿರೋಧಿ' ಎಂದು ಕರೆಯಲಾಯಿತು. ನಾಲ್ಕು ದಶಕಗಳ ನಂತರ, ಕಾಂಗ್ರೆಸ್ ಸರಕಾರ ಕೊನೆಗೂ ಎಡಪಂಥೀಯರ ಈ ಬೇಡಿಕೆಯನ್ನು ಮನ್ನಿಸಬೇಕಾಯಿತು. ರಾಜ್ಯದ ಎಡರಂಗ ಸರಕಾರ ಇದನ್ನು ಯಶಸ್ವಿಯಾಗಿ ಖಾತರಿಪಡಿಸಿತು.

ಡಿಸೆಂಬರ್ 10 ರಂದು ಡಾ.ರಾಯ್ ಸುದ್ದಿಗಾರರ ಜತೆ ಮಾತನಾಡುತ್ತ ಹೀಗೆಂದರು. "ಪಶ್ಚಿಮ ಬಂಗಾಳದ ಭದ್ರತೆ ಮತ್ತು ಸ್ಥಿರತೆ ಹಾಗೂ ನೆರೆಯ ಬಿಹಾರದ ಜನತೆಯ ಆಶೋತ್ತರಗಳನ್ನು ಗಮನದಲ್ಲಿಟ್ಟುಕೊಂಡು ರಾಜ್ಯಗಳ ಪುನರ್ ಘಟನೆ ಸಮಿತಿಯ ಶಿಫಾರಸ್ಸುಗಳಿಗೆ ಕೆಲವು ತಿದ್ದುಪಡಿಗಳನ್ನು ಮಾಡಬೇಕು".

ಅನಂತರ, 1956ರಲ್ಲಿ, ಡಾ. ರಾಯ್ ಮತ್ತು ಬಿಹಾರ ಮುಖ್ಯಮಂತ್ರಿ ಶ್ರೀ ಕೃಷ್ಣ ಸಿನ್ಹ ಒಂದು ಸಂಯುಕ್ತ ಹೇಳಿಕೆ ನೀಡಿ ಪಶ್ಚಿಮ ಬಂಗಾಳ ಮತ್ತು ಬಿಹಾರ ವಿಲೀನವಾಗಬೇಕು ಎಂದು ಹೇಳಿದರು. ಇದರಿಂದ ರಾಜ್ಯದಲ್ಲಿ ಅಲ್ಲೋಲ ಕಲ್ಲೋಲವೇ ಉಂಟಾಯಿತು.

(ಮುಂದುವರಿಯುವುದು)

ರೈತ ಹೋರಾಟದ ಚಂಡಮದ್ದಲೆ

ಪುಟ 3 ರಿಂದ

ರೈತರೇ ದಾರಿ ಮಾಡಿಕೊಳ್ಳಬೇಕಾಗುತ್ತದೆ ಎಂದರು. ರೈತರ ಬೆನ್ನು ಮುರಿಯುವಂತಹ ಬಜೆಟ್ ಆರ್ಥಿಕ ನೀತಿಯನ್ನು ಜಾರಿಗೆ ತರುತ್ತಿರುವ ಬಿಜೆಪಿಗೆ ಸರಿಯಾದ ಪಾಠ ಕಲಿಸಬೇಕೆಂದು ಅವರು ಕರೆನೀಡಿದರು. **ಸಂಯುಕ್ತ ರಂಗ ಸರ್ಕಾರದ ಪ್ರಧಾನಿಯಾಗಿ ತಾವು ಅಧಿಕಾರ ವಹಿಸಿಕೊಂಡಾಗ ವಿದೇಶಿ ಸಾಲ 93 ಬಿಲಿಯನ್ ಡಾಲರ್ ಇತ್ತು. ಅಧಿಕಾರ ಬಿಟ್ಟಾಗ 91 ಬಿಲಿಯನ್ ಡಾಲರ್, ಅಂದರೆ 2 ಬಿಲಿಯನ್ ಡಾಲರ್ ವಿದೇಶಿ ಸಾಲ ಕಡಿಮೆಯಾಯಿತು. ಆದರೆ ವಾಜಪೇಯಿ ಅಧಿಕಾರಕ್ಕೆ ಬಂದನಂತರ 7.5 ಬಿಲಿಯನ್ ಡಾಲರ್ ವಿದೇಶಿ ಸಾಲ ಹೆಚ್ಚಾಗಿದೆ.** 10 ಲಕ್ಷ ಕೋಟಿ ವಿದೇಶಿ ಸಾಲದಲ್ಲಿ ರೈತರಿಗಾಗಿ ಶೇ.5 ವೆಚ್ಚವಾಗಿಲ್ಲ ಎಂದು ಅವರು ತಿಳಿಸಿದರು. 36 ಕೋಟಿ ಭಾರತೀಯರು ಬಡತನ ರೇಖೆಯ ಕೆಳಗಿದ್ದಾರೆ. ಆದರೆ **ಪಡಿತರ ವ್ಯವಸ್ಥೆಯಲ್ಲಿ ಗೋದಿ 3 ರೂ ನಿಂದ 5-20ಕ್ಕೆ ಅಕ್ಕಿಯನ್ನು 3.5 ರಿಂದ 6 ರೂಗೆ ಏರಿಸಲಾಗುತ್ತಿದೆ. 8 ಲಕ್ಷ ಜನ ಹೊಂದಿರುವ ಮೊಬೈಲ್ ಫೋನ್‌ಗಳಿಗೆ ಬಾರಿ ರಿಯಾಯಿತಿ ನೀಡಲಾಗಿದೆ.** ಏಪ್ರಿಲ್ 1,2000 ರಿಂದ ಕೃಷಿ ಉತ್ಪನ್ನಗಳ ಆಮದುಗಳ ಮೇಲಿನ ಎಲ್ಲಾ ನಿರ್ಬಂದನೆಗಳನ್ನು ತೆಗೆದುಹಾಕುವ ಒಪ್ಪಂದಕ್ಕೆ ಮುರಸೋಳಿಮಾರನ್ ಸಹಿ ಮಾಡಿ ಬಂದಿದ್ದಾರೆ.


1996ರಲ್ಲಿ ಕೃಷಿ ಉತ್ಪನ್ನ ಶೇ. 9.6 ರಷ್ಟು ಹೆಚ್ಚಳವಾಗಿದ್ದರೆ, ಈ ವರ್ಷ ಕೃಷಿ ಉತ್ಪನ್ನದಲ್ಲಿ 2.02 ರಷ್ಟು ಕುಸಿತ ಉಂಟಾಗಿದೆ. ಇದು ಬಿಜೆಪಿ ಸರ್ಕಾರದ ಕೃಷಿನೀತಿಯ ಪರಿಣಾಮ ಎಂದರು. 1970-71ರಲ್ಲಿ 125 ಮಿಲಿಯನ್ ಹೆಕ್ಟೇರ್ ಕೃಷಿ ಭೂಮಿ ಇದ್ದದ್ದು, ಈಗ 123 ಮಿಲಿಯನ್ ಹೆಕ್ಟೇರ್‌ಗೆ ಇಳಿದಿದೆ. 2 ಮಿಲಿಯನ್ ಹೆಕ್ಟೇರ್ ಭೂಮಿಯನ್ನು ಈ ಅವಧಿಯಲ್ಲಿ ಕೃಷಿಯೇತರ ಉದ್ದೇಶಕ್ಕೆ ಬಳಸಲಾಗಿದೆ. ಈ ಬಾರಿಯ ಬಿಜೆಪಿ ಬಜೆಟ್‌ನಲ್ಲಿ ಕೃಷಿಗೆ ಶೇ. 6 ರಷ್ಟು ಹಣ ಕಡಿತ ಮಾಡಲಾಗಿದೆ. ಗ್ರಾಮಾಂತರಕ್ಕೆ ಶೇ. 11 ರಷ್ಟು ಹಣ ಕಡಿತ ಮಾಡಲಾಗಿದೆ. ದೇಶದಲ್ಲಿ ವಿನಾಶಕಾರಿ ಆರ್ಥಿಕ ನೀತಿಯನ್ನು ತರಲಾಗುತ್ತಿದೆ. ಸಾರ್ವಜನಿಕ ಕಾರ್ಖಾನೆಗಳನ್ನು, ಆಸ್ತಿಯನ್ನು ಮಾರಿ 3 ಲಕ್ಷ ಕೋಟಿ ಹಣ ಸಂಗ್ರಹದ ಗುರಿ ಹೊಂದಲಾಗಿದೆ. ಇದು ಮನೆಮಾರಿ ಚಿಲ್ಲರೆ ಅಂಗಡಿ ಸಾಲ ತೀರಿಸಿದಂತಿದೆ ಎಂದು ಖಂಡಿಸಿದರು.

ಈ ವಿನಾಶಕಾರಿ ನೀತಿಗಳ ವಿರುದ್ಧ ಹೋರಾಟದಲ್ಲಿ ಜೈಲು ಸೇರಬೇಕಾಗಿ ಬಂದರೂ ದೇಶದಲ್ಲಿ ಮೂರನೇ ಪರ್ಯಾಯ ಮೂಡಿಬರುತ್ತದೆ ಎಂದು ದೇವೇಗೌಡರು ಕರೆ ನೀಡಿದರು.

ಜಾತ್ಯಾತೀತ ಜನತಾದಳದ ಅಧ್ಯಕ್ಷರಾದ ಸಿದ್ದರಾಮಯ್ಯ ಸಮಾವೇಶದ ಆರಂಭದಲ್ಲಿ ಸ್ವಾಗತಿಸಿ ಪ್ರಸ್ತಾವನೆಯ ಮಾತುಗಳನ್ನಾಡಿದರು. ಸಿಪಿಐ(ಎಂ) ರಾಜ್ಯ ಕಾರ್ಯದರ್ಶಿ ಕಾಂ। ಎಸ್. ಸೂರ್ಯನಾರಾಯಣರಾವ್ ಹಾಗೂ ಕರ್ನಾಟಕದ ಮಾಜಿ ಮುಖ್ಯಮಂತ್ರಿ ಎಸ್.ಆರ್. ಬೊಮ್ಮಾಯಿಯವರು ಇನ್ನಿತರ ಹಲವು ಮುಖಂಡರು ಸಮಾವೇಶದಲ್ಲಿ ಪಾಲ್ಗೊಂಡಿದ್ದರು. ಬೆಂಗಳೂರು ನಗರ, ಗ್ರಾಮಾಂತರ, ಕೋಲಾರ, ತುಮಕೂರು, ಮಂಡ್ಯ ಹಾಗೂ ರಾಜ್ಯದ ವಿವಿಧ ಜಿಲ್ಲೆಗಳಿಂದ ಬಂದ 10 ಸಾವಿರಕ್ಕೂ ಅಧಿಕ ರೈತರು, ಕಾರ್ಮಿಕರು ಮಹಿಳೆಯರು ಭಾಗವಹಿಸಿದ ಈ ಯಶಸ್ವಿ ಸಮಾವೇಶ ಯಾವುದೇ ಗೊಂದಲ ಗದ್ದಲಗಳಿಲ್ಲದೆ, ಕಡೆಯವರೆಗೂ ಮುಖಂಡರ ಮಾತುಗಳನ್ನು ಆಲಿಸುವ ಜನರ ಶಿಸ್ತು, ಆಸಕ್ತಿಗಾಗಿ ವಿಶೇಷ ಗಮನ ಸೆಳೆಯಿತು.

ಈ ವಿನಾಶಕಾರಿ ನೀತಿಗಳ ವಿರುದ್ಧ ಹೋರಾಟದಲ್ಲಿ ಜೈಲು ಸೇರಬೇಕಾಗಿ ಬಂದರೂ ನಾವು ಹಿಂಜರಿಯುವುದಿಲ್ಲ, ಈ ಹೋರಾಟದಲ್ಲಿ ದೇಶದಲ್ಲಿ ಮೂರನೇ ಪರ್ಯಾಯ ಮೂಡಿಬರುತ್ತದೆ

21 ಮಾರ್ಚ್ 2000 ದಂದು ಜಾಗತಿಕ ಸಾಮ್ರಾಜ್ಯಶಾಹಿ ಮುಖಂಡ ಅಮೇರಿಕಾದ ಅಧ್ಯಕ್ಷ ಬಿಲ್‌ಕ್ಲಿಂಟನ್‌ರವರು ಭಾರತಕ್ಕೆ ಆಗಮಿಸುತ್ತಿದ್ದಾರೆ. ಈ ಜಾಗತಿಕ ಶೋಷಕರ ಪ್ರತಿನಿಧಿಯನ್ನು ಸ್ವಾಗತಿಸಲು ಹಲ್ಲುಗಿಂಜಿ, ರತ್ನ ಕಂಬಳಿ ಹಾಸಿ ಕೇಂದ್ರ ಸರ್ಕಾರ ಬಾಜಾ ಭಜಂತ್ರಿ ನಡೆಸುತ್ತಿರುವಾಗಲೇ ದೇಶಪ್ರೇಮಿ ಜನತೆ ದೇಶಾದ್ಯಂತ ತಮ್ಮನ್ನು ಗುಲಾಮಿಕೆಗೆ ತಳ್ಳುತ್ತಿರುವ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರದ ಮತ್ತು ಇಡೀ ದೇಶವನ್ನೇ ತನ್ನ ಗುಲಾಮಿಕೆಗೆ ಒಳಪಡಿಸಿಕೊಳ್ಳಲು ಹವಣಿಸುತ್ತಿರುವ ಅಮೆರಿಕಾದ ಅಧ್ಯಕ್ಷರ ವಿರುದ್ಧ ಪ್ರತಿಭಟಿಸಲು ಸಜ್ಜಾಗುತ್ತಿದ್ದಾರೆ. ಇದರ ಭಾಗವಾಗಿ ಬೆಂಗಳೂರಿನಲ್ಲಿ ಸಿಪಿಐ(ಎಂ) ರಾಜ್ಯ ಸಮಿತಿ ಏರ್ಪಡಿಸಿದ್ದ 'ಅಮೆರಿಕನ್ ಸಾಮ್ರಾಜ್ಯಶಾಹಿ ಮತ್ತು ಭಾರತ' ಎಂಬ ವಿಷಯದ ಮೇಲೆ ಮಾತನಾಡುತ್ತಾ ಸಿಪಿಐ(ಎಂ) ಪೊಲಿಟ್‌ಬ್ಯೂರೋ ಸದಸ್ಯರಾದ ಸೀತಾರಾಂ ಯೆಚೂರಿಯವರು ಕ್ಲಿಂಟನ್ ಭೇಟಿಯ ಹಿಂದಿನ ನಗ್ನ ಸ್ವರೂಪವನ್ನು ಬಿಚ್ಚಿಟ್ಟಿದ್ದಾರೆ.



ಕ್ಲಿಂಟನ್ ಭಾರತಕ್ಕೆ ಭೇಟಿ

ದೇಶದ ಮಿತ್ರನಾಗಿ ಅಲ್ಲ ದೇಶ ಮಾರಿಸುವ ದಲ್ಲಾಳಿಯಾಗಿ

ಕ್ಲಿಂಟನ್ ಭೇಟಿಯ ಸಮಯದಲ್ಲಿ ಭಾರತದಲ್ಲಿ ನಡೆಯುವ ಎಲ್ಲಾ ಪ್ರತಿಭಟನೆಗಳನ್ನು ನಿಷೇಧಿಸಿ ಕೇಂದ್ರ ಸರ್ಕಾರ ಆದೇಶ ಹೊರಡಿಸಿದೆ ಮತ್ತು ಆಂಧ್ರದ ಚಂದ್ರಬಾಬು ನಾಯ್ಡು ಸಹ ಇದಕ್ಕೆ ಧ್ವನಿ ಕೂಡಿಸಿದ್ದಾರೆ. ಆದರೆ ಸಿಪಿಐ(ಎಂ) ಮತ್ತು ಎಲ್ಲಾ ಎಡಪಕ್ಷಗಳು ಎಲ್ಲಾ ಪ್ರತಿಬಂಧಕಾಜ್ಞೆಗಳನ್ನು ಉಲ್ಲಂಘಿಸಿ ಪ್ರತಿಭಟಿಸಲು ತೀರ್ಮಾನಿಸಿದ್ದೇವೆ, ನಾವು ಭಾರತೀಯ ಜನತೆ ಈ ಭೇಟಿಯನ್ನು ಪ್ರತಿಭಟಿಸಿಯೇ ಪ್ರತಿಭಟಿಸುತ್ತೇವೆ ಇದನ್ನು ತಡೆಯುವ ಹಕ್ಕು ಯಾರಿಗೂ ಇಲ್ಲ ಎಂದು ತಮ್ಮ ಮಾತು ಆರಂಭಿಸಿದರು.

ಈಗಾಗಲೇ ರಾಷ್ಟ್ರಾದ್ಯಂತ ಸಾಮ್ರಾಜ್ಯಶಾಹಿ ಕ್ಲಿಂಟನ್ ಅವರು ಆಗಮಿಸುವುದನ್ನು ವಿರೋಧಿಸಿ ಜನಾಭಿಪ್ರಾಯ ರೂಪಿಸಲಾಗಿದೆ. ಈ ನಿಟ್ಟಿನಲ್ಲಿ ಆಂಧ್ರ ಸೇರಿದಂತೆ ದೇಶದ ವಿವಿಧ ಭಾಗಗಳಲ್ಲಿ ಪ್ರತಿಭಟನೆ ನಡೆಸಲಾಗುವುದು ಎಂದರು.

ಕ್ಲಿಂಟನ್ ಅವರು ಭಾರತಕ್ಕೆ ಭೇಟಿ ನೀಡುತ್ತಿರುವುದು ಸ್ನೇಹಪೂರ್ವಕವಾಗಿ ಅಲ್ಲ, ಬದಲಾಗಿ ಭಾರತವನ್ನು ಸಾಮ್ರಾಜ್ಯಶಾಹಿ ಒಕ್ಕೂಟಗಳ ಅಡಿಯಾಳನ್ನಾಗಿಸುವ ಗುಪ್ತ ಕಾರ್ಯಸೂಚಿಯನ್ನು ತೆಗೆದುಕೊಂಡು ಬರುತ್ತಿದ್ದು; ಈ ಉದ್ದೇಶವನ್ನು ಹಿಮ್ಮೆಟ್ಟಿಸುವುದು ಎಲ್ಲಾ ಭಾರತೀಯರ ಆದ್ಯ ಕರ್ತವ್ಯವಾಗಿದೆ ಎಂದು ಕರೆ ನೀಡಿದರು.

ಆದರೆ ಕೇಂದ್ರ ಮತ್ತು ಆಂಧ್ರಪ್ರದೇಶ ಸರ್ಕಾರಗಳು ಕ್ಲಿಂಟನ್ ಅವರ ಭೇಟಿಯ ಸಮಯದಲ್ಲಿ ಯಾರಾದರೂ ಪ್ರತಿಭಟನೆಯಂತಹ ಮಾರ್ಗ ಹಿಡಿದರೆ ಅವರ ವಿರುದ್ಧ ಕಠಿಣ ಕ್ರಮ ಕೈಗೊಳ್ಳುವುದಾಗಿ ಪ್ರಕಟಿಸಿವೆ. ಇದೊಂದು ಪ್ರಜಾಪ್ರಭುತ್ವ ವಿರೋಧಿ ಧೋರಣೆಯಾಗಿದ್ದು, ಈ ಸರ್ಕಾರಗಳ ಯಾವುದೇ ಕ್ರಮವನ್ನಾದರೂ ಸಹ ತಾವು ಪ್ರಜಾಪ್ರಭುತ್ವ ಮಾರ್ಗದ ಮೂಲಕ ಉಲ್ಲಂಘಿಸಿ ಈಗಾಗಲೇ ಪ್ರಕಟಿಸಿರುವ ಕಾರ್ಯಕ್ರಮಗಳನ್ನು ನಡೆಸುವುದಾಗಿ ಪ್ರಕಟಿಸಿದರು.

ಭಾರತ ಒಂದು ಪ್ರಜಾಪ್ರಭುತ್ವ ರಾಷ್ಟ್ರ, ಇಲ್ಲಿ ಪ್ರಜಾಪ್ರಭುತ್ವ ಮಾದರಿಯಲ್ಲಿ ನಡೆಸುವ ಯಾವುದೇ ಹೋರಾಟಗಳನ್ನು ಹತ್ತಿಕ್ಕಲು ಸಾಧ್ಯವಿಲ್ಲ, ಸರ್ಕಾರಗಳು ಈ ಅಂಶವನ್ನು ಗಮನಿಸದೇ ಯಾವುದಾದರೂ ಕ್ರಮ ಕೈಗೊಂಡರೆ ಅವುಗಳ ವಿರುದ್ಧ ಹೋರಾಡುವ ಜನರನ್ನು ನಿಯಂತ್ರಿಸಲು ಸಾಧ್ಯವಿಲ್ಲ ಎಂದು ಎಚ್ಚರಿಸಿದರು.

ಭಾರತಕ್ಕೆ ಯಾವುದೇ ದೇಶದ ಪ್ರತಿನಿಧಿಗಳು ಬಂದರೆ ಅವರನ್ನು ತುಂಬು ಹೃದಯದಿಂದ ಸ್ವಾಗತಿಸುತ್ತೇನೆ, ಆದರೆ ಆಗಮನದ ಸಮಯದಲ್ಲಿ ಭಾರತವನ್ನು ಮಾರಾಟದ ವಸ್ತುವನ್ನಾಗಿ ಪರಿವರ್ತಿಸುವಂತಹ ಉದ್ದೇಶ ಇಟ್ಟುಕೊಂಡು ಬರುತ್ತಿರುವ ಕ್ಲಿಂಟನ್ ಅಂತಹ ವ್ಯಕ್ತಿಗಳ ಆಗಮನವನ್ನು ಯಾವುದೇ ಕಾರಣಕ್ಕೂ ಒಪ್ಪುವುದಿಲ್ಲ ಎಂದು ತಿಳಿಸಿದರು.

ವಾಜಪೇಯಿ ನೇತೃತ್ವದ ಕೇಂದ್ರ ಸರ್ಕಾರ ಕ್ಲಿಂಟನ್ ಅವರ ಆಗಮನವನ್ನು ತುಂಬು ಹೃದಯದಿಂದ ಸ್ವಾಗತಿಸುತ್ತಿದೆ. ಅಲ್ಲದೆ ದಕ್ಷಿಣ ಏಶ್ಯಾದಲ್ಲಿ ಅಮೇರಿಕಾದ ಏಜೆಂಟನಂತೆ ಕರ್ತವ್ಯ ನಿರ್ವಹಿಸುವುದು, ಪಾಕಿಸ್ತಾನಕ್ಕಿಂತ ದೊಡ್ಡ ಏಜೆಂಟ್ ಆಗಿ ವರ್ತಿಸುವ ಎಲ್ಲಾ ಪ್ರಯತ್ನಗಳನ್ನು ನಡೆಸುತ್ತಿದೆ ಎಂದು ಟೀಕಿಸಿದರು.

ಅಮೇರಿಕಾ ಯಾವುದೇ ಸಂದರ್ಭದಲ್ಲೂ ಭಾರತದ ಪರವಾದ ರಾಷ್ಟ್ರವಾಗಿರಲಿಲ್ಲ, ಭಾರತ ಯಾವುದೇ ರಂಗದಲ್ಲಿ ಸ್ವಾವಲಂಬಿಯಾಗುವುದು ಅಮೆರಿಕೆಗೆ ಹಿಡಿಸದು, ಹಾಗಾಗಿ ರಶ್ಯಾದೇಶವು ಭಾರತಕ್ಕೆ ಕ್ರಿಯೋಜನಿಕ್ ರಾಕೆಟ್‌ನ್ನು ನೀಡಲು ತೀರ್ಮಾನಿಸಿದಾಗ ಅದನ್ನು ವಿರೋಧಿಸಿ, ತಂತ್ರಜ್ಞಾನ ವರ್ಗಾವಣೆ ಮಾಡಿಕೊಳ್ಳದಂತೆ ಎರಡೂದೇಶಗಳ ಮೇಲೆ ಒತ್ತಡ ಹೇರಿತು. ಪರೀಕ್ಷೆಯ ನೆಪದಲ್ಲಿ ಭಾರತದ ಮೇಲೆ ಹೇರಿರುವ ಆರ್ಥಿಕ ದಿಗ್ಬಂಧನಗಳನ್ನು ಇಲ್ಲಿಯವರೆಗೂ ವಾಪಸ್ಸು ಪಡೆದಿಲ್ಲ. ಪರಿಸ್ಥಿತಿ ಹೀಗಿರುವಾಗ ಇಂತಹವರನ್ನು ಸ್ವಾಗತಿಸುವ ವಾದದಲ್ಲಿ ಯಾವ ಅರ್ಥವಿದೆ ಎಂದು ಪ್ರಶ್ನಿಸಿದರು.

ಭಾರತವನ್ನು ಸಿಟಿಬಿಟಿ ಮತ್ತು ಟಿಎಂಸಿಟಿ ಗಳಿಗೆ ಸಹಿ ಹಾಕಲು ಒತ್ತಾಯ ಪಡಿಸಲಾಗುತ್ತಿದೆ. ಇದರ ಉದ್ದೇಶ ಜಗತ್ತನ್ನು ಅಣ್ವಸ್ತ್ರಗಳಿಂದ ಮುಕ್ತ ಮಾಡುವುದಲ್ಲ, ಬದಲಾಗಿ ಈಗಾಗಲೇ ಅಣ್ವಸ್ತ್ರ ಹೊಂದಿರುವ ಅಮೆರಿಕಾ, ರಷ್ಯಾ, ಫ್ರಾನ್ಸ್, ಇಂಗ್ಲೆಂಡ್ ಮತ್ತು ಚೀನಾ ದೇಶಗಳ ಏಕಸ್ವಾಮ್ಯವನ್ನು ನ್ಯಾಯಬದ್ಧಗೊಳಿಸುವುದಾಗಿದೆ. ವಾಜಪೇಯಿ ಸರ್ಕಾರವು, ಅಮೆರಿಕಾವು ಸಂಪೂರ್ಣ ಅಣ್ವಸ್ತ್ರ ನಿರ್ಮೂಲನೆ ಮಾಡುವವರೆಗೆ ಸಹಿ ಹಾಕುವುದಿಲ್ಲ ಎನ್ನುವ ಬದಲು ಅದರ ಮುಂದೆ ಮಂಡಿಯೂರಿ ಕುಳಿತಿದೆ. ಎಲ್ಲಾ ರೀತಿಯ ನಿಯಂತ್ರಣಗಳನ್ನು ತೆಗೆದು ಹಾಕಿ ಅಂತರ್ರಾಷ್ಟ್ರೀಯವಾಗಿ ಬಂಡವಾಳ ಹರಿದು ಬರಲು ಸಾಧ್ಯವಾಗುವಂತೆ ಮಾಡುವ ಹಾಗೂ ದುರ್ಬಲ ರಾಷ್ಟ್ರಗಳ ಆಂತರಿಕ ಮಾರುಕಟ್ಟೆಯಲ್ಲಿ ಏಕಸ್ವಾಮ್ಯ ಹೊಂದಿರುವ ಹುನ್ನಾರ ಅಮೆರಿಕಾದ್ದಾಗಿದೆ. ಇದೆಲ್ಲದರ ಹಿಂದಿನ ಉದ್ದೇಶ ಬಡರಾಷ್ಟ್ರಗಳನ್ನು ಆರ್ಥಿಕವಾಗಿ ತಮ್ಮ ವಸಾಹತುಗಳನ್ನಾಗಿಸಿಕೊಳ್ಳುವುದು ಎಂದು ವಿಶ್ಲೇಷಿಸಿದರು.

ಬಡರಾಷ್ಟ್ರಗಳು ತಮ್ಮ ತಾಳಕ್ಕೆ ತಕ್ಕಹಾಗೆ ಕುಣಿಯುವಂತೆ ಅಮೆರಿಕಾ ನೇತೃತ್ವದ ಕೆಲವು ರಾಷ್ಟ್ರಗಳು ಒತ್ತಡ ಹೇರುತ್ತಿವೆ. ಐಎಂಎಫ್, ವಿಶ್ವಬ್ಯಾಂಕ್, ಡಬ್ಲ್ಯುಟಿಓ ಗಳು 'ಸಾಮ್ರಾಜ್ಯಶಾಹಿ ತ್ರಿಮೂರ್ತಿಗಳು' ಎಂದು ಬಣ್ಣಿಸಿದ ಅವರು ಇವುಗಳ ಮೂಲಕ ಬಡರಾಷ್ಟ್ರಗಳನ್ನು ನಿಯಂತ್ರಿಸಲಾಗುತ್ತಿದೆ ಎಂದರು.

ಕ್ಲಿಂಟನ್ ಭಾರತಕ್ಕೆ ಬರುತ್ತಿರುವುದು ಭಾರತವನ್ನು ಸಾಮ್ರಾಜ್ಯಶಾಹಿ ಶಕ್ತಿಗಳಿಗೆ ಮಾರಾಟ ಮಾಡಿಸುವುದು ಒಂದು ಉದ್ದೇಶವಾಗಿದ್ದರೆ, ತಾನು ಬಯಸಿದ ಆರ್ಥಿಕತೆಯನ್ನು ಭಾರತ ಒಪ್ಪಿಕೊಳ್ಳುವಂತೆ ಮಾಡುವುದು ಇನ್ನೊಂದು ಉದ್ದೇಶ ಎಂದರು. ಈ ಒತ್ತಡಗಳ ಪರಿಣಾಮವಾಗಿ ಕೇಂದ್ರ ಸಚಿವ ಸಂಪುಟವು ಭಾರತೀಯ ಉದ್ದಿಮೆಗಳಲ್ಲಿ ಶೇ 100 ಶೇರು ಹೊಂದಲು ಅವಕಾಶ ನೀಡುವ ತೀರ್ಮಾನ ಕೈಗೊಂಡಿದೆ, ಇದರಿಂದ ಬರುವ ಆದಾಯವನ್ನು ಕೂಡ ಪೂರ್ಣಪ್ರಮಾಣದಲ್ಲಿ ಕೊಳ್ಳೆ ಹೊಡೆಯಲು ಅವಕಾಶ ನೀಡಲಾಗಿದೆ. ಹಾಗೆಯೇ ಸಿಯಾಟಲ್ ಒಪ್ಪಂದದಂತೆ ಕೃಷಿ ಉತ್ಪನ್ನಗಳ ಮೇಲಿನ ಗುಣಾತ್ಮಕ ನಿರ್ಬಂಧವನ್ನು ತೆಗೆದುಹಾಕಲೂ ಸಹ ಭಾರತದ ಮೇಲೆ ಒತ್ತಡ ಹೇರಲಾಗಿದೆ. ಮತ್ತು ಆಮದು ಸುಂಕದ ಮೇಲೆ ವಿನಾಯತಿ ನೀಡಿದೆ, ಆದ್ದರಿಂದ ಏಪ್ರಿಲ್ ಒಂದರ ಹೊತ್ತಿಗೆ 720 ಉತ್ಪನ್ನಗಳ ಮೇಲಿನ ಗುಣಾತ್ಮಕ ನಿರ್ಬಂಧವನ್ನು ತೆಗೆಯಲಾಗಿದೆ. ಕೃಷಿ ಉತ್ಪನ್ನಗಳ ಮೇಲಿನ ನಿರ್ಬಂಧವನ್ನು ತೆಗೆದಿರುವುದರಿಂದ ಇಡೀ ಕೃಷಿ ವಲಯ ನಾಶವಾಗುತ್ತದೆ, ವಿದೇಶದಿಂದ ಸಕ್ಕರೆ ಮತ್ತು ಆಹಾರ ಪದಾರ್ಥಗಳು ಕಡಿಮೆ ಬೆಲೆಯಲ್ಲಿ ಬರುತ್ತಿರುವುದರಿಂದ ಉತ್ತರ ಭಾರತದ ಕಬ್ಬು ಬೆಳೆಯುವ ರೈತರು ತಮ್ಮ ಕಬ್ಬಿಗೆ ಬೇಡಿಕೆಯಿಲ್ಲದೆ, ಕಬ್ಬನ್ನು ರಸ್ತೆಯಲ್ಲಿ ಹಾಕಿ ಸುಡುತ್ತಿದ್ದಾರೆ ಎಂದರು.

ಡಬ್ಲ್ಯುಟಿಓ ಕೊಟ್ಟಿರುವ ಅವಧಿಗಿಂತ 3 ವರ್ಷ ಮೊದಲೇ ಈ ರೀತಿ ಕ್ರಮಕೈಗೊಂಡು 'ಭಾರತ ಮಾರಾಟಕ್ಕಿದೆ' ಎಂದು ಹೇಳುತ್ತಿದ್ದಾರೆ. ಆದರೆ ನಾವು ಭಾರತೀಯರು ಭಾರತವನ್ನು ಉಳಿಸಿಕೊಳ್ಳಲೇ ಬೇಕಾಗಿದೆ ಎಂದರು.

ಮತ್ತೊಂದು ಪ್ರಮುಖ ವಿಷಯವೆಂದರೆ, ಕಾಶ್ಮೀರ ವಿಷಯದಲ್ಲಿ ಅಮೇರಿಕವು ಮಧ್ಯಸ್ಥಿಕೆ ವಹಿಸಲು ಹವಣಿಸುತ್ತಿದೆ - ನಾವು ಬಯಸದಿದ್ದರೂ ಈ ವಿಷಯದಲ್ಲಿ ಮೂಗು ತೂರಿಸಿ, ದಕ್ಷಿಣ ಏಷ್ಯಾದಲ್ಲೇ ಕಾಶ್ಮೀರ ಅಪಾಯಕಾರಿ ಪ್ರದೇಶ ಅದರಲ್ಲೂ ವಿಶೇಷವಾಗಿ ಗಡಿ ನಿಯಂತ್ರಣ ರೇಖೆ ಎಂದು ಹೇಳಿ, ಅಮೆರಿಕಾದ ವಿದೇಶಾಂಗ ಕಾರ್ಯದರ್ಶಿ ಮೆಡಲಿನ್ ಆಲ್‌ಬ್ರೈಟ್‌ರವರು, ಗಡಿ ನಿಯಂತ್ರಣರೇಖೆಯನ್ನು ಬದಲಿಸುವ ಯಾವುದೇ ಪ್ರಯತ್ನವನ್ನು ಸಹಿಸುವುದಿಲ್ಲ, ಇದೊಂದು ಅಂತರರಾಷ್ಟ್ರೀಯ ಗಡಿ, ಇದನ್ನು ಎರಡೂ ದೇಶಗಳು ಒಪ್ಪಿಕೊಳ್ಳಬೇಕೆಂದು ಹೇಳಿದ್ದಾರೆ. ಆದರೆ ಇದೊಂದು ಎರಡೂ ದೇಶಗಳಿಗೆ ಸಂಬಂಧಿಸಿದ ವಿಷಯ, ಇದು ನಮಗೆ ಸಂಬಂಧಿಸಿದ ವಿಚಾರ, ಆದರೂ ಅಮೆರಿಕಾ ಇದರಲ್ಲಿ ತಲೆ ಹಾಕಲು ಬಯಸುತ್ತಿದೆ, ಏಕೆಂದರೆ ಇಲ್ಲಿ ವಿವಾದವನ್ನು ಸೃಷ್ಟಿಸಿ ತನ್ನ ಮಧ್ಯ ಪ್ರವೇಶಿಕೆಯನ್ನು ಶಾಶ್ವತಗೊಳಿಸಿಕೊಂಡು ತನ್ನ ನೆಲೆಯನ್ನು ಭದ್ರಪಡಿಸಿಕೊಳ್ಳುವುದೇ ಆಗಿದೆ.

ಯಾವ ದೇಶಗಳು ಆರ್ಥಿಕವಾಗಿ - ರಾಜಕೀಯವಾಗಿ ತನ್ನ ಶರತ್ತುಗಳನ್ನು ಒಪ್ಪುವುದಿಲ್ಲವೋ ಅಂತಹ ದೇಶಗಳನ್ನು ಮಿಲಿಟರಿ ಬಲದಿಂದ ಬಗ್ಗು ಬಡಿಯಲು ಅಮೆರಿಕಾ ಜಗತ್ತಿನಾದ್ಯಂತ ತನ್ನ ಮಿಲಿಟರಿ ನೆಲೆಗಳನ್ನು ಸ್ಥಾಪಿಸ ಬಯಸಿದೆ.

ಇದರ ಭಾಗವಾಗಿ ಯುಗಸ್ಲೋವಿಯಾ ಮತ್ತು ಇರಾಕ್ ಮೇಲೆ ಬಾಂಬ್ ದಾಳಿ ನಡೆಸಲಾಯಿತು. ಇರಾಕ್ ಮೇಲಿನ ಬಾಂಬ್ ದಾಳಿಯಿಂದ ಲಕ್ಷಾಂತರ ಜನರು ನೋವನ್ನನುಭವಿಸಿದರೆ, ಅದರ ಮೇಲಿನ ದಿಗ್ಬಂಧನದಿಂದಾಗಿ ಉಂಟಾಗಿರುವ ಪೌಷ್ಟಿಕ ಆಹಾರ ಮತ್ತು ಔಷಧಿಗಳ ಕೊರತೆಯಿಂದಾಗಿ ಸುಮಾರು 5 ಲಕ್ಷಕ್ಕೂ ಅಧಿಕ ಮಕ್ಕಳು ಅಪೌಷ್ಟಿಕತೆಯಿಂದ ನರಳುತ್ತಿದ್ದಾರೆ.

ಪುಟ 9 ಕ್ಕೆ

ಕಂಬಾಲಪಲ್ಲಿ: ದಲಿತರ ಮಾರಣ

ಇಡೀ ನಾಗರೀಕ ಸಮಾಜ ತಲೆತಗ್ಗಿಸುವಂತಹ, ರಾಜ್ಯಕ್ಕೆ ಕುಖ್ಯಾತಿಯನ್ನು ತಂದಿರುವ ಘಟನೆಯಲ್ಲಿ ದಲಿತ ಕುಟುಂಬದ ಮುಗ್ಧ ಮೂರು ಮಹಿಳೆಯರೂ ಸೇರಿದಂತೆ ಏಳು ಜನರನ್ನು ಸಜೀವ ದಹನಮಾಡಿದ ಅತ್ಯಂತ ಪೈಶಾಚಿಕ ಕೃತ್ಯ ಕೋಲಾರ ಜಿಲ್ಲೆಯ ಚಿಂತಾಮಣಿ ತಾಲೂಕಿನ ಕಂಬಾಲಪಲ್ಲಿಯಲ್ಲಿ ಮಾರ್ಚ್ 11ರ ಶನಿವಾರ ನಡೆದಿದೆ. ದಲಿತ ವಿರೋದಿ ಪಾಳೇಗಾರಿಕೆಯ ದರ್ಪ ಹುಟ್ಟಿದ್ದು ಕುಣಿದು ಈ ಬೀಬತ್ಸತೆಯನ್ನು ಸೃಷ್ಟಿಸಲು ಕೆಲವು ನಿಮಿಷಗಳು ಮುಂಚಿತವಾಗಿ ನಡೆದ ಸವರ್ಣೀಯ ಕೃಷ್ಣಾರೆಡ್ಡಿಯರ ಕೊಲೆ ತಕ್ಷಣದ ಕಾರಣವಾದರೂ ವೈಶಮ್ಯ ಮೂರು ವರ್ಷಗಳಷ್ಟು ಹಳೆಯದು.

— ಜಿ.ಸಿ.ಬಯ್ಯಾರೆಡ್ಡಿ —

ಮೂರು ವರ್ಷಗಳ ಹಿಂದೆ ಮೂರು ಜನ ಪೊಲೀಸರನ್ನು ಕೊಂದು ಹಾಕಿದ ಕುಖ್ಯಾತಿಯ ಬಿಲ್ಲಾಂಡ್ಲಹಳ್ಳಿಯ ಪಕ್ಕದ ಗ್ರಾಮವೇ ಕಂಬಾಲಪಲ್ಲಿ. ಭೂಮಿ, ಕೃಷಿ, ಪಶು ಸಂಗೋಪನೆ, ದಲಿತರ ಎಚ್ಚರದಿಂದ ದಲಿತೇತರಲ್ಲಿ ಹುಟ್ಟಿದ ಆಕ್ರೋಶ ಎರಡು ಪ್ರಮುಖ ರಾಜಕೀಯ ಗುಂಪುಗಳ ನಡುವಿನ ವೈಷಮ್ಯ ಇತ್ಯಾದಿ ಕಾರಣಗಳಿಂದ ಮಾರಣಹೋಮಕ್ಕೆ ಗುರಿಯಾಗಿರುವ ದಲಿತ ಕುಟುಂಬಗಳಿಗೂ ಮತ್ತು ಸವರ್ಣಿಯ ಪ್ರಮುಖ ಗುಂಪೊಂದರ ನಡುವೆ ಜಿದ್ದಾ ಜಿದ್ದಿ ಸುಮಾರು 3 ವರ್ಷಗಳಿಂದ ನಡೆದಿತ್ತು. ಇದರ ಭಾಗವಾಗಿ ಈ ಗುಂಪುಗಳ ನಡುವೆ ಕುರಿಗಳ ಕಳ್ಳತನದ ಆರೋಪ ಪ್ರತ್ಯಾರೋಪಗಳ ಕೇಸು, ಕೋರ್ಟುಗಳಿಗೆ ಅಲೆದಾಟ ಸಣ್ಣ ಪುಟ್ಟ ಜಗಳಗಳು ನಡೆದು ಇವುಗಳ ಒಂದು ಹಂತದ ಪರಿಣಾಮವಾಗಿ 1998ರಲ್ಲಿ ಸಜೀವದಹನಕ್ಕೆ ಗುರಿಯಾಗಿರುವ ಕುಟುಂಬದ ಸದಸ್ಯರಲ್ಲೊಬ್ಬರಾದ ವೆಂಕಟರಮಣಪ್ಪನನ್ನು ಸವರ್ಣಿಯರ ಗುಂಪೊಂದು ಸೈಜುಗಲ್ಲುಗಳಿಂದ ಜಜ್ಜಿ ಬರ್ಭರವಾಗಿ ಕೊಲೆ ಮಾಡಲಾಗಿತ್ತು. ಅಂದಿನಿಂದ ಮೃತನ ಸಹೋದರರಾದ ಶ್ರೀರಾಮಪ್ಪ (ಡಿ.ಎಸ್.ಎಸ್. ಕಾರ್ಯಕರ್ತ) ಆಂಜನಪ್ಪ (ಸರ್ಕಾರಿ ಶಾಲಾ ಶಿಕ್ಷಕ) ಕಂಬಾಲಪಲ್ಲಿಯನ್ನು ಬಿಟ್ಟು ಚಿಂತಾಮಣಿಯಲ್ಲಿ ವಾಸವಾಗಿದ್ದರು. ಕಳೆದ ಜನವರಿಯಲ್ಲಿ ಡಿ.ಎಸ್.ಎಸ್. ಮುಖಂಡರು ತಹಶೀಲ್ದಾರ್ ಮತ್ತು ಸರ್ಕಲ್ ಇನ್ಸ್‌ಪೆಕ್ಟರ್ ಗ್ರಾಮಸ್ಥರು ಮತ್ತು ಕುಟುಂಬ ನಡುವೆ ಮಾತುಕತೆ ಮಾಡಿಸಿ ಶ್ರೀರಾಮಪ್ಪನ ಕುಟುಂಬದವರು ಕಂಬಾಲಪಲ್ಲಿಯಲ್ಲಿ ವಾಸಿಸುವಂತೆ ಮಾಡಿದ್ದರು. ಆದರೆ ವೈಷಮ್ಯ ಎರಡೂ ಗುಂಪುಗಳಲ್ಲಿ ಹೆಡೆಯಾಡುತ್ತಲೇ ಇತ್ತು.


ಫೆಬ್ರವರಿಯಲ್ಲಿ ನಡೆದ ಗ್ರಾ. ಪಂಚಾಯತಿ ಚುನಾವಣೆಯಲ್ಲಿ ದಲಿತ ಕುಟುಂಬಗಳು ಮಾಜಿ ಕಾಂಗ್ರೆಸ್ ಹಾಲಿ ಪಕ್ಷೇತರ ಶಾಸಕ ಚೌಡರೆಡ್ಡಿಯವರ ಬೆಂಬಲಕ್ಕೆ ನಿಂತಿದ್ದು ಮಾಜಿ ಜನತಾದಳ ಹಾಲಿ ಕಾಂಗ್ರೆಸಿನ ಕೃಷ್ಣಾರೆಡ್ಡಿ ಬೆಂಬಲಿಗ ಸವರ್ಣಿಯರಲ್ಲಿ ಆಕ್ರೋಷಕ್ಕೆ ಕಾರಣವಾಗಿ ವೈಷಮ್ಯ ಮತ್ತಷ್ಟು ತೀವ್ರಗೊಂಡಿತು. ಈ ಹಿನ್ನೆಲೆಯಲ್ಲಿ ಮಾರ್ಚ್ 11ರ ಒಂದೆರಡು ದಿನಗಳ ಹಿಂದೆ ಎರಡೂ ಗುಂಪುಗಳ ಯುವಕರ ನಡುವೆ ಕ್ಷುಲ್ಲಕ ಕಾರಣಗಳಿಗಾಗಿ ಸಣ್ಣ ಪುಟ್ಟ ಜಗಳಗಳು ನಡೆದವು. ಈ ಬಗ್ಗೆ ಡಿ.ಎಸ್.ಎಸ್.ನ ಶ್ರೀರಾಮಪ್ಪ, ತನ್ನ ಸಹಚರರನ್ನು ಕರೆದೊಯ್ದು ಕಂಚಾರ್ಲನ ಹಳ್ಳಿ ಪೊಲೀಸ್ ಠಾಣೆಯಲ್ಲಿ ದೂರು ಕೊಟ್ಟರೆ ಸ್ವತಃ ದಲಿತನಾದರೂ ಆಳುವ ಪಕ್ಷದ ಏಜೆಂಟನಾದ ಸಬ್‌ಇನ್ಸಪೆಕ್ಟರ್ ದೂರನ್ನು ದಾಖಲಿಸಿಕೊಳ್ಳಲಿಲ್ಲ. ಇದರಿಂದ ಕುಪಿತಗೊಂಡು ಚಿಂತಾಮಣಿಗೆ ಹೊರಟ ಶ್ರೀರಾಮಪ್ಪ ತನ್ನ ಗುಂಪಿನೊಂದಿಗೆ ಸರ್ಕಲ್ ಇನ್ಸ್‌ಪೆಕ್ಟರ್‌ರಲ್ಲಿ ದೂರನ್ನು ಸಲ್ಲಿಸಿದರು. ಸರ್ಕಲ್ ಇನ್‌ಸ್ಪೆಕ್ಟರ್ ಜತೆ ಮಾತನಾಡಿದ ಶ್ರೀರಾಮಪ್ಪನ ಗುಂಪಿನವರು ಮಾರ್ಚ್ 11 ರಂದು ಸಂಜೆ ಇನ್ನೂ 4-5 ಮಂದಿ ಹಿಂಬಾಲಕರೊಡನೆ ಚಿಂತಾಮಣಿಯಲ್ಲಿ ಬಸ್ ಹತ್ತಿ ಸುಮಾರು 7 ಗಂಟೆಗೆ ಕಂಬಾಲಪಲ್ಲಿಯನ್ನು ತಲುಪಿದರು. ಬಸ್‌ನಿಂದ ಇಳಿಯುತ್ತಿದ್ದಂತೆ ಹೊಡೆದಾಟ ಆರಂಭವಾಗಿ ಚಾಕುಚೂರಿಗಳು ಹೊರಬಂದವು. ವಾಟರ್ ಟ್ಯಾಂಕ್ ಬಳಿಯಿದ್ದ ಕೃಷ್ಣಾರೆಡ್ಡಿ ಚಾಕು ತಿವಿತಕ್ಕೆ ಬಲಿಯಾದರು. ಇದನ್ನೆಲ್ಲ ಕಣ್ಣಿಂದ ನೋಡುತ್ತಿದ್ದ ಇಬ್ಬರು ಪೊಲೀಸ್ ಪೇದೆಗಳು ಅಲ್ಲಿಂದ ಪಲಾಯನಗೈದರು. ಕೇವಲ ಮೂರು ವರ್ಷಗಳ ಹಿಂದೆ ಪೊಲೀಸರನ್ನೆ ಕೊಂದ ಹಿನ್ನೆಲೆ ಗೊತ್ತಿದ್ದ ಪರಿಣಾಮ ನಿರಾಯುಧರಾದ ಪೋಲಿಸರು ಪರಾರಿಯಾಗದೆ ಗತ್ಯಂತರವಿರಲಿಲ್ಲ.

ಕೃಷ್ಣಾರೆಡ್ಡಿಯ ಕೊಲೆಯಿಂದ ಆಕ್ರೋಶಗೊಂಡ ಸುವರ್ಣಿಯ ಗುಂಪು ದಾಳಿಯನ್ನು ಆರಂಭಿಸಿತು. ದಲಿತರಲ್ಲಿ ಕೆಲವರು ತಲೆ ತಪ್ಪಿಸಿಕೊಂಡು ಓಡಿದರೆ, ಶ್ರೀರಾಮಪ್ಪ, ಆಂಜನಪ್ಪ ಮತ್ತಿತರರು ಮನೆಗಳ ಒಳಗೆ ಆಶ್ರಯ ಪಡೆದರು. ಆವೇಶಭರಿತರಾಗಿದ್ದ ಸವರ್ಣೀಯರ ಗುಂಪು ಎದುರಿನಲ್ಲೇ ಇದ್ದ ಹುಲ್ಲಿನ ಬಣವೆಯಿದ ಒಣಹುಲ್ಲನ್ನು ತಂದು ಶ್ರೀರಾಮಪ್ಪನ ಎರಡೂ ಮನೆಗಳ ಬಾಗಿಲು ಕಿಟಕಿ ಮುಚ್ಚಿ ಸೀಮೆ ಎಣ್ಣೆ ಸುರಿದು ಬೆಂಕಿ ಹಚ್ಚಲಾಯಿತು. ದಲಿತರ ಮನೆಗಳು ದಗದಗನೆ ಉರಿಯತೊಡಗಿದವು. ಹೊರಗಿದ್ದವರ ಅಟ್ಟಹಾಸದ ಕೇಕೆಗಳಲ್ಲಿ ಒಳಗಿದ್ದವರ ಆಕ್ರಂದನ ಕೇಳಿಸದೆ ಬೂದಿಯಾದರು. ಈ ನಡುವೆ ಇಲ್ಲಿಂದ ಓಡಿ ಹೋಗಿದ್ದ ಪೊಲೀಸ್ ಪೇದೆಗಳು ಠಾಣೆಗೆ ಸುದ್ದಿ ತಲುಪಿಸಿದ್ದ ಫಲವಾಗಿ ಬೆಂಕಿ ಆರಿಸಲು ಫೈರ್ ಇಂಜಿನ್ ತುರ್ತಾಗಿ ಕಂಬಾಲಪಲ್ಲಿಗೆ ಧಾವಿಸಿ ಬಂತು. ಆದರೆ ಫೈರ್ ಇಂಜಿನ್ ತನ್ನ ಕೆಲಸ ಮಾಡಲು ದಲಿತರ ಸಜೀವ ದಹನಕ್ಕೆ ಮುಂದಾಗಿದ್ದ ಕೊಲೆಗಡುಕರು ಬಿಡಲಿಲ್ಲ. ತಮ್ಮ ಮಾತನ್ನು ಮೀರಿ ಹೋದರೆ ಬಿಲ್ಲಾಂಡ್ಲಹಳ್ಳಿ ಘಟನೆ ಮರುಕಳಿಸುವುದೆಂದು ಬೆದರಿಕೆ ಹಾಕಿದರು. ಇದರಿಂದ ಫೈರ್ ಇಂಜಿನ್‌ರವರು ಮನೆಗಳು ಭಸ್ಮವಾಗುವುದನ್ನು ನೋಡುವ ಮೂಕ ಪ್ರೇಕ್ಷಕರಾದರು. ಕೇವಲ ಕೆಲವೇ ನಿಮಿಷಗಳಲ್ಲಿ ಮೂರು ಮಹಿಳೆಯರೂ ಸೇರಿದಂತೆ 7 ಜನ ದಲಿತರ ಸಜೀವ ದಹನ ನಡೆದು ರಾಜ್ಯವನ್ನು ಬಿಹಾರ, ಆಂಧ್ರ ಪ್ರದೇಶದ ಪಂಕ್ತಿಗೆ ಸೇರಿಸುವ ಕೆಲಸ ನಡೆಯಿತು.

ಈ ಅಮಾನವೀಯ ಮಾರಣ ಹೋಮದಿಂದ ಕುಗ್ರಾಮವಾಗಿದ್ದ ಕಂಬಾಲಪಲ್ಲಿ ದೇಶದಲ್ಲೇ ದಿಢೀರನೆ ಕುಖ್ಯಾತಿಯನ್ನು ಪಡೆಯಿತು. ಈ ಘಟನೆಯ ಸುದ್ದಿ ತಿಳಿದ ಪೊಲೀಸ್ ಇಲಾಖೆ, ಮಂತ್ರಿ ಮಾನ್ಯರು ಹನ್ನೆರಡರ ಬೆಳಗಿನಿಂದಲೇ ತಂಡೋಪ-ತಂಡವಾಗಿ ಆಗಮಿಸಲು ಆರಂಭಿಸಿದರು. ಹನ್ನೆರಡರ ಮುಂಜಾನೆಯೇ ಸ್ಥಳಕ್ಕೆ ಆಗಮಿಸಿದ್ದ ಗೃಹಮಂತ್ರಿಗಳ ಜತೆಯೇ ತನ್ನ ಎಲ್ಲಾ ಕಾರ್ಯಕ್ರಮಗಳನ್ನು ರದ್ದುಪಡಿಸಿ ಮುಖ್ಯ ಮಂತ್ರಿಗಳೂ ಸಹ ವಿಮಾನದಲ್ಲಿ ಹಾರಿ ಕಂಬಾಲಪಲ್ಲಿಯನ್ನು ಮಧ್ಯಾಹ್ನಕ್ಕೆಲ್ಲ ಸೇರಿಕೊಂಡರು. ಸ್ಥಳ ಮತ್ತು ಶವಗಳನ್ನು ವೀಕ್ಷಿಸಿದ ಮಂತ್ರಿ ಮಾನ್ಯರು ಇದನ್ನು ಖಂಡಿಸಿ ದಲಿತ ಸಂಘಟನೆಗಳ ಮತ್ತು ಸಿಪಿಐ(ಎಂ) ಪಕ್ಷದ ಕಾರ್ಯಕರ್ತರ ಒತ್ತಾಯದಂತೆ ಇಡೀ ಘಟನೆಯನ್ನು ನ್ಯಾಯಾಂಗ ತನಿಖೆಗೆ ಆದೇಶಿಸುವುದಾಗಿ, ಪುನರ್ವಸತಿ, ಪರಿಹಾರ, ತಪ್ಪಿತಸ್ಥರನ್ನು ಬಂದಿಸುವ ಅಂಶ ಮತ್ತು ಇಂತಹ ಘಟನೆಗಳು ಮರುಕಳಿಸದಂತೆ ಅಗತ್ಯಕ್ರಮಗಳನ್ನು ಕೈಗೊಳ್ಳುವುದಾಗಿ ಘೋಷಿಸಿದರು.

ಯಾಕೀ ಜಾತಿ ವೈಷಮ್ಯ?

ಇತ್ತೀಚಿನ ವರ್ಷಗಳಲ್ಲಿ ದಲಿತ ಜನ ವಿಭಾಗಗಳಲ್ಲಿ ಮೂಡುತ್ತಿರುವ ಎಚ್ಚರಿಕೆಯನ್ನು ಸಹಿಸಲಾರದ ಪಾಳೇಗಾರಿ ಜಮೀನ್ದಾರಿ ಮನೋಭಾವ, ಹೆಚ್ಚುತ್ತಿರುವ ಈ ಪ್ರಜ್ಞೆಯನ್ನು ಸಾಮಾನ್ಯ ಪ್ರಜಾಪ್ರಭುತ್ವ ಚಳುವಳಿಯಾಗಿ ಮಾರ್ಪಡಿಸುವಲ್ಲಿ ದಲಿತ ಚಳುವಳಿಗಳಲ್ಲಿರುವ ಬಲಹೀನತೆಗಳು, ಹಲವಾರು ಕಾರಣಗಳಿಂದ ಗ್ರಾಮೀಣ ಪ್ರದೇಶದಲ್ಲಿ ದಲಿತ-ದಲಿತೇತರರಲ್ಲಿ



ಬರುವ ಸಮಸ್ಯೆಗಳನ್ನು ಸಾಮರಸ್ಯದಿಂದ ಪರಿಹರಿಸದೇ ಸಂಘರ್ಷಣಾತ್ಮಕ ದಿಕ್ಕಿಗೊಯ್ಯುವ ಕೆಲವು ದಲಿತ ನಾಯಕರ ಕಾರ್ಯಶೈಲಿ, ಸರ್ಕಾರದ ಇಡೀ ಯೋಜನೆಗಳೆಲ್ಲ ದಲಿತರಿಗಾಗಿಯೇ ರೂಪುಗೊಳ್ಳುತ್ತಿವೆ ಎಂಬ ಅವಾಸ್ತವಿಕ ವ್ಯಾಪಕ ಅಪಪ್ರಚಾರಗಳು, ಹಲವಾರು ರೀತಿಯ ಆರ್ಥಿಕ ಸಂಕಷ್ಟಗಳಿಗೆ ಗುರಿಯಾಗಿರುವ ಗ್ರಾಮೀಣ ದಲಿತೇತರರಲ್ಲಿ ಅತೃಪ್ತಿ ಅಸಮಾದಾನಗಳಿಗೆ ಒಂದೆಡೆ ಕಾರಣವಾದರೆ ದಲಿತೇತರರ ನಡುವೆ ದಲಿತ ವಿರೋಧಿ ಪ್ರಜ್ಞೆಯನ್ನು ಬೆಳೆಸುವುದರ ಮೂಲಕ ತಮ್ಮ ಸ್ವಾರ್ಥ ರಾಜಕೀಯವನ್ನು ಬೆಳೆಸಿಕೊಳ್ಳಲು ಪ್ರಯತ್ನಿಸುತ್ತಿರುವ ಬಂಡವಾಳಶಾ[ಹಿ] ಪ್ರತಿಗಾಮಿ ರಾಜಕೀಯ ಪಕ್ಷಗಳ ಮುಖಂಡರುಗಳ ಅಧಿಕಾರದಾಹವು "ಗಾಯಕ್ಕೆ ಉಪ್ಪು ಹಚ್ಚಿದಂತಾಗಿ" ಇಂತಹ ಘಟನೆಗಳು ಮತ್ತೆ ಮತ್ತೆ ಮರುಕಳಿಸಲು ಕಾರಣವಾಗಿದೆ.

ಘಟನೆ ಖಂಡಿಸಿ ಚಿಂತಾಮಣಿ ಬಂದ್

12 ಮಾರ್ಚ್ 2000ದ ಬೆಳಿಗ್ಗೆ ಕಂಬಾಲಹಳ್ಳಿಗೆ ಸಿಪಿಐ(ಎಂ) ಮುಖಂಡರ ನಿಯೋಗ ತೆರಳಿ ಕ್ರೂ[ರ] ಅಮಾನುಷ ಕೃತ್ಯವನ್ನು ಖಂಡಿಸುವುದರ ಜತೆಗೆ ಎರಡು ಡಿ.ಎಸ್.ಎಸ್. ಸಂಘಟನೆಗಳ ಜೊತೆ ಸೇರಿ 13 ನೇ ತಾರೀಖು ಚಿಂತಾಮಣಿ ಬಂದ್‌ಗೆ ಕರೆ ನೀಡಲಾಯಿತು. ಚಿಂತಾಮಣಿಯ ನಾಗರೀಕರು ಸಹಾನುಭೂತಿ ವ್ಯಕ್ತಪಡಿಸಿ, ಬಂದ್‌ಗೆ ಸಂಪೂರ್ಣವಾಗಿ ಬೆಂಬಲಿಸಿ, ಬಂದ್ ಸಂಪೂರ್ಣವಾಗಿ ಯಶಸ್ವಿಯಾಯಿತು. ಸಿಪಿಐ(ಎಂ) ಮತ್ತು ಎರಡು ಡಿ.ಎಸ್.ಎಸ್. ಸಂಘಟನೆಗಳ ಕಾರ್ಯಕರ್ತರು ನಗರದಲ್ಲಿ ಮೆರವಣಿಗೆ ನಡೆಸಿ, ಸಭೆ ಮತ್ತು ಪತ್ರಿಕಾಗೋಷ್ಠಿ ನಡೆಸಲಾಯಿತು.

ಸವರ್ಣಿಯ ಕೃಷ್ಣರೆಡ್ಡಿಯ ಹತ್ಯೆ ಮತ್ತು ದಲಿತರ ಸಾಮೂಹಿಕ ಸಜೀವ ದಹನ ಎರಡನ್ನೂ ಉಗ್ರವಾಗಿ ಖಂಡಿಸಿ ತಪ್ಪಿತಸ್ಥರನ್ನು ಕೂಡಲೇ ಬಂದಿಸಿ ಕಠಿಣ ಶಿಕ್ಷೆಗೆ ಗುರಿಪಡಿಸಬೇಕು ಮತ್ತು ಸಿಬಿಐ ತನಿಖೆ ನಡೆಸಬೇಕೆಂದು ಒತ್ತಾಯಿಸಲಾಯಿತು. ನೊಂದು ಬೆಂದ ಸಾಮುದಾಯಗಳಿಗೆ ರಕ್ಷಣೆ ಒದಗಿಸಲು ಆಗ್ರಹಿಸಲಾಗಿದೆ.

ಮುಂದೇನಾಗಬೇಕಾಗಿದೆ?

ಪಕ್ಷದ ಜಿಲ್ಲಾ ಕಾರ್ಯದರ್ಶಿ ಜಿ.ವಿ. ಶ್ರೀರಾಮರೆಡ್ಡಿಯೊಡನೆ ಮತ್ತೊಮ್ಮೆ ಕಂಬಾಲಹಳ್ಳಿಗೆ ಬೇಟಿಕೊಟ್ಟ ಸಿಪಿಐ(ಎಂ) ನಿಯೋಗ (ಜಿ.ಸಿ. ಬಯ್ಯಾರೆಡ್ಡಿ, ಅಶ್ವತನಾರಾಯಣ ರೆಡ್ಡಿ ಒಳಗೊಂಡು) ಇಡೀ ಘಟನೆಯ ಬಗ್ಗೆ ಚರ್ಚಿಸಿ ಎರಡು ಕಡೆಯ ಕೊಲೆಯನ್ನು ಖಂಡನೆ, ತಪ್ಪಿತಸ್ಥರಿಗೆ ಉಗ್ರಶಿಕ್ಷೆ, ಪೊಲೀಸ್ ವೈಫಲ್ಯದಿಂದ ಉಂಟಾದ

ಪೊಲೀಸ್ ವೈಫಲ್ಯ - ಘಟನೆಗೆ ಕಾರಣ

ಬಿಲ್ಲಾಂಡ್ಲ ಹಳ್ಳಿಯ ಘಟನೆಯಲ್ಲಿ ಪೊಲೀಸರನ್ನು ಕೊಂದರೂ ತಪ್ಪಿತಸ್ತರ ವಿರುದ್ಧ ಗಂಭೀರ ಕ್ರಮ ಕೈಗೊಳ್ಳದ ಪೊಲೀಸರ ನಿರ್ಲಕ್ಷದಿಂದ ಪುಷ್ಠಿಗೊಂಡ ದಲಿತ ವಿರೋಧಿ ಪಾಳೇಗಾರಿ ಶಕ್ತಿಗಳು ಈ ದುಸ್ಸಾಹಸಕ್ಕೆ ಕೈಹಾಕಲು ದೈರ್ಯಗೊಂಡರು ಮಾತ್ರವಲ್ಲದೆ ಕಂಬಾಲಹಳ್ಳಿಯ ಪ್ರಕ್ಷುಬ್ದ ಪರಿಸ್ಥಿತಿಯ ಬಗ್ಗೆ ಸಾಕಷ್ಟು ಮಾಹಿತಿಯಿದ್ದರೂ ಮತ್ತು ಮಾರ್ಚ್ 9-10 ರಂದು ಆ ಗ್ರಾಮದಲ್ಲಿ ನಡೆದ ಹೊಡೆದಾಟಗಳ ಬಗ್ಗೆ ಲಿಖಿತ ದೂರನ್ನು ಸಲ್ಲಿಸಿದರೂ ಸಬ್ ಇನ್‌ಸ್ಪೆಕ್ಟರಿಂದ ಮೇಲಾಧಿಕಾರಿಗಳ ತನಕ ಉದಾಸೀನ ತೋರಿಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳದಿರುವ ಕಾರಣದಿಂದ ಮಾರ್ಚ್ 11 ರಂದು ಈ ದುರಂತ ಸಂಭವಿಸಲು ನೇರವಾಗಿ ಪೊಲೀಸರು ಹೊಣೆಗಾರರಾಗಿದ್ದಾರೆ. ಇಂತಹ ಅಮಾನುಷ ಘಟನೆಯ ನಂತರವೂ ಮುಖ್ಯ ತಪ್ಪಿತಸ್ಥರನ್ನು ಬಂಧಿಸಲಾಗದ ಅಸಮರ್ಥ ಅಧಿಕಾರಿಗಳು ತನ್ನ ಮೇಲಧಿಕಾರಿಗಳು ಮತ್ತು ಮಂತ್ರಿಮಾನ್ಯರಿಗೆ ತಾವು ಅಗತ್ಯ ಕ್ರಮಗಳನ್ನು ಕೈಗೊಂಡಿದ್ದೇವೆ ಎಂದು ತೋರಿಸಲು ಕೆಲವು ಅಮಾಯಕರನ್ನು ಬಂಧಿಸಿದ್ದಾರೆ.


ಇಂತಹ ನಿರ್ಲಕ್ಷ್ಯ ಮತ್ತು ಬೇಜವಾಬ್ದಾರಿ ಜಿಲ್ಲಾ ಪೊಲಿಸ್ ಅಧಿಕಾರಿ ಜಯಪ್ರಕಾಶ್‌ನಾಯಕ್ ರನ್ನು ಜನರ ಒತ್ತಾಯದಿಂದ ವರ್ಗಾವಣೆ ಮಾಡಲಾಗಿದೆ. ಕೆಳಹಂತದ ಪೊಲೀಸ್ ಅಧಿಕಾರಿಯನ್ನು ಮಾಡಲಾಗಿದೆ. ಸಬ್‌ಇನ್‌ಸ್ಪೆಕ್ಟರನ್ನು ಅಮಾನತ್ತುಗೊಳಿಸಲಾಗಿದೆ. ಕ್ರಮ ವಹಿಸಲಾಗಿದೆ. ಈಗ ಬಂದಿರುವ ಪೊಲೀಸ್ ಅಧಿಕಾರಿಗಳಾದರೂ ನಿಸ್ಪಕ್ಷಪಾತ ಮತ್ತು ಜವಾಬ್ದಾರಿಯಿಂದ ಕೆಲಸ ಮಾಡುವಂತೆ ಸಹಕಾರಿಯಾಗಬೇಕಾಗಿದೆ.



ಜಾತಿದ್ವೇಷದ ಕಿಚ್ಚಿಗೆ ಬೆಂದು ಬೂದಿಯಾದ ಮನೆ-ಜನ

...ೋಮ

ಈ ರೀತಿಯ ಘಟನೆಗಳು ಮರುಕಳಿಸದಂತೆ ಪೊಲೀಸ್ ವರಿಷ್ಠಾಧಿಕಾರಿಯಿಂದ ಸಬ್‌ಇನ್ಸ್‌ಪೆಕ್ಟರ್ ತನಕ ಎಲ್ಲರ ಮೇಲೂ ಕ್ರಮ ಜರುಗಿಸಿ ಕರ್ತವ್ಯ ನಿರ್ಲಕ್ಷ್ಯ ಆರೋಪದ ಮೇಲೆ



ಸುಟ್ಟು ಕರಕಲಾದ ದಲಿತರ ಶವಗಳು

ಮೊಕದ್ದಮೆ ಹೂಡಬೇಕೆಂದು ಮತ್ತು ಮುಖ್ಯವಾಗಿ ದಲಿತ ಮತ್ತು ದಲಿತೇತರರ ನಡುವೆ ವ್ಯಾಪಕವಾಗಿ ಬೆಳೆಯುತ್ತಿರುವ ವೈಷಮ್ಯವನ್ನು ತೊಡೆದು ಹಾಕಿ ಶಾಂತಿ ಸಾಮರಸ್ಯವನ್ನು ನೆಲೆಗೊಳಿಸಲು 'ಶಾಂತಿ-ಸಾಮರಸ್ಯ' ಸಮಿತಿಗಳನ್ನು ರಚನೆ, ಜಿಲ್ಲೆಯಾದ್ಯಂತ ವ್ಯಾಪಕ ಪ್ರಚಾರ ನಡೆಸಬೇಕೆಂದು ಆಗ್ರಹಿಸಲಾಯಿತು.

ಈ ಎಲ್ಲದರೊಡನೆ, ಇಂತಹ ಘಟನೆಗಳು ಪುನರಾವರ್ತನೆಯಾಗದಂತೆ ಡಿ.ಎಸ್.ಎಸ್. ಸಂಘಟನೆಗಳ ಕೆಲವು ಮುಖಂಡರಲ್ಲಿರುವ ದೋಷಗಳನ್ನು ಸರಿಪಡಿಸಿಕೊಂಡು ಎಲ್ಲಾ ಬಡವರ ವಿಶ್ವಾಸಗಳಿಸಿಕೊಳ್ಳುವ ರೀತಿಯಲ್ಲಿ ತಮ್ಮ ಕಾರ್ಯಶೈಲಿಯನ್ನು ಬದಲಾಯಿಸಿಕೊಳ್ಳಬೇಕು.

ಇನ್ನು ಬಂಡವಾಳಶಾಹಿ ರಾಜಕೀಯ ಪಕ್ಷಗಳು ಯಾರಪರ- ವಿರೋಧವಾದರೆ ಹೆಚ್ಚು ಮತಗಳು ಬರಬಹುದು ಎಂಬ ಸಂಕುಚಿತ "ಮತಗಳ ರಾಜಕೀಯ" ಬಿಟ್ಟು ದಲಿತ, ದಲಿತೇತರರ ನಡುವೆ ಸಾಮರಸ್ಯಕ್ಕೆ ಮುಂದಾಗಬೇಕು ಮತ್ತು ಕಂಬಾಲಪಲ್ಲಿಯಂತಹ ಘಟನೆಗಳಲ್ಲಿ ನೇರವಾಗಿ ಪಾಲ್ಗೊಳ್ಳುವ ತಮ್ಮಗಳ ಬೆಂಬಲಿಗರಿಗೆ ಯಾವುದೇ ಸಹಾಯ ಮಾಡದೆ ತಮ್ಮ ಪಕ್ಷಗಳಿಂದ ಹೊರಗೆ ಹಾಕಬೇಕು. ○

ಕೋಲಾರ ಜಿಲ್ಲೆಯಲ್ಲಿ ಬದಲಾಗುತ್ತಿರುವ ಗ್ರಾಮೀಣ ಸಂಬಂಧಗಳು ಹಾಗೂ ದಲಿತರ ಮೇಲಿನ ದೌರ್ಜನ್ಯಗಳು

ಜಿ.ಎನ್.ನಾಗರಾಜ್

ಕೋಲಾರ ಜಿಲ್ಲೆ ಹಲವಾರು ದೃಷ್ಟಿಯಿಂದ ಕರ್ನಾಟಕದಲ್ಲಿಯೇ ವಿಶಿಷ್ಟ ಜಿಲ್ಲೆ. ರೇಷ್ಮೆ, ಹಾಲು, ಹಣ್ಣು, ತರಕಾರಿಗಳು ಇವುಗಳಿಗೆ ಪ್ರಸಿದ್ಧವಾಗಿದೆ. ಹಾಗೆಯೇ ಚಿನ್ನಕ್ಕೂ ಕೂಡ. ಆದರೂ ಕೂಡ ಕರ್ನಾಟಕದಲ್ಲಿ ಹಿಂದುಳಿದ ಜಿಲ್ಲೆಗಳ ಸಾಲಿಗೆ ಸೇರಿದೆ. ಮಾನವ ಅಭಿವೃದ್ಧಿಯಲ್ಲಿ15ನೇ ಸ್ಥಾನ, ಆರೋಗ್ಯ ಮತ್ತು ಶಿಕ್ಷಣದಲ್ಲಿ 12ನೇ ಸ್ಥಾನ, ಆದಾಯ ಮಟ್ಟದಲ್ಲಿ ಇಡೀ ರಾಜ್ಯದಲ್ಲಿಯೇ ಅತ್ಯಂತ ಕಡಿಮೆ 19ನೇ ಸ್ಥಾನ (20 ಜಿಲ್ಲೆಗಳಲ್ಲಿ) ಇದರಿಂದಾಗಿ ಬಡತನದ ಪ್ರಮಾಣವೂ ರಾಜ್ಯದಲ್ಲಿಯೇ ಅತ್ಯಂತ ಹೆಚ್ಚಿನ ಪ್ರಮಾಣದಲ್ಲಿರುವ ಜಿಲ್ಲೆಗಳ ಸಾಲಿನಲ್ಲಿದೆ. ನೂರಕ್ಕೆ 49 ಜನ ಬಡತನ ರೇಖೆಯ ಕೆಳಗಿದ್ದಾರೆ. ಅಂದರೆ ದಿವಸಕ್ಕೆ ತರಕಾರಿ ಬೆಳೆಗಳಿಲ್ಲದೆ ಕೇವಲ ಅನ್ನ, ಮುದ್ದೆ ಕೂಡ ಸಿಗದಂತಹ ಜನರ ಸಂಖ್ಯೆ ಅದು. ಇದೊಂದುದೊಡ್ಡ ವಿಪರ್ಯಾಸ. ರೇಷ್ಮೆಯ ನಾಡು, ಹಾಲಿನ ಬೀಡು, ಕೋಟಿಗಟ್ಟಲೆ ಜನರಿಗೆ ತರಕಾರಿ,ಹಣ್ಣು ಬೆಳೆದು ನೀಡುತ್ತಿರುವ ನಾಡಿನಲ್ಲಿ ಅದನ್ನು ಬೆಳೆಯುವ ಜನಕ್ಕೆ ಅದರ ವಾಸನೆ ಕೂಡ ಸಿಗದ ಪರಿಸ್ಥಿತಿ.

ಇನ್ನೂ ಒಂದು ವಿಶೇಷವೆಂದರೆ ಕೋಲಾರ ಜಿಲ್ಲೆ ಇಡೀ ರಾಜ್ಯದಲ್ಲಿಯೇ ಅತ್ಯಂತ ಹೆಚ್ಚು ಪರಿಶಿಷ್ಟ ಜಾತಿಯ ಜನರನ್ನು ಪಡೆದ ಜಿಲ್ಲೆ. ರಾಜ್ಯದ ಒಟ್ಟು ಜನಸಂಖ್ಯೆಯಲ್ಲಿ ಶೇ 16ರಷ್ಟು ಪರಿಶಿಷ್ಟ ಜಾತಿಯವಾದರೆ, ಕೋಲಾರದಲ್ಲಿ ನೂರಕ್ಕೆ 26 ರಷ್ಟು. ಪರಿಶಿಷ್ಟ ಜಾತಿಯ ಜನ ಸಮುದಾಯದ ಒಳಗೆ ಗ್ರಾಮೀಣ ಪ್ರದೇಶದಲ್ಲಿ 31.70 ರಷ್ಟು ಮಾತ್ರ ರೈತ ವಿಭಾಗಕ್ಕೆ ಸೇರಿದ್ದರೆ ಕೋಲಾರ ಜಿಲ್ಲೆ ಶೇ 45 ರಷ್ಟು ರೈತರು. ಪರಿಶಿಷ್ಟ ಜನರಲ್ಲಿ ಕೂಲಿಕಾರರ ಸಂಖ್ಯೆ ಮಾತ್ರ ರಾಜ್ಯದಲ್ಲಿಯೂ ಕೋಲಾರ ಜಿಲ್ಲೆಯಲ್ಲಿಯೂ ಒಂದೇ ಪ್ರಮಾಣದಲ್ಲಿದೆ. ಸುಮಾರು ಶೇ 46ರಷ್ಟು. ಅಂದರೆ ಪರಿಶಿಷ್ಟ ಜಾತಿಯ ಜನತೆಯಲ್ಲಿ ರಾಜ್ಯದ ಇತರೆ ಭಾಗಗಳಿಗೆ ಹೋಲಿಸಿದರೆ ಹೆಚ್ಚು ಜನ ರೈತರಿದ್ದಾರೆ. ರಾಜ್ಯದ ಗ್ರಾಮೀಣ ಪ್ರದೇಶದಲ್ಲಿ ನೂರಕ್ಕೆ 32 ರಷ್ಟು ಪರಿಶಿಷ್ಟ ಜಾತಿಯ ಜನ ರೈತರಾಗಿದ್ದರೆ ಕೋಲಾರದಲ್ಲಿ ಅದು ಶೇ 45ರಷ್ಟು. ಕೂಲಿಕಾರರ ಸಂಖ್ಯೆ ರಾಜ್ಯದಲ್ಲಿಯೂ ಕೋಲಾರದಲ್ಲಿಯೂ ಅಷ್ಟೇ ಇದೆ. ಶೇ 46 ರಷ್ಟು ಈ ಪರಿಸ್ಥಿತಿ ಕೋಲಾರ ಜಿಲ್ಲೆಯ ದಲಿತರ ಮತ್ತು ದಲಿತೇತರರ ನಡುವಣ ಸಂಬಂಧದ ಸ್ವರೂಪದ ಮೇಲೆ ಪ್ರಭಾವ ಬೀರುತ್ತದೆ.

ಮೇಲಿನ ಎರಡೂ ಅಂಶಗಳನ್ನು ಒಟ್ಟಿಗೆ ತೆಗೆದುಕೊಂಡರೆ ಒಂದು ವಿಷಯ ಹೊರಹೊಮ್ಮುತ್ತದೆ. ಈ ಜಿಲ್ಲೆಯಲ್ಲಿ ದಲಿತರು, ದಲಿತೇತರರೂ ಅತ್ಯಂತ ಬಡತನದಿಂದ ನರಳುತ್ತಿದ್ದಾರೆ. ಬರಗಾಲದ ಬಾಧೆಯಿಂದ ನರಳುತ್ತಾ ಕಷ್ಟ ಕಾರ್ಪಣ್ಯಗಳನ್ನು ಎದುರಿಸುತ್ತಿದ್ದಾರೆ.

ಹಿಂದಕ್ಕೆ ಎಲ್ಲರೂ ಒಂದೇ ರೀತಿ ಕಷ್ಟಗಳನ್ನು ಎದುರಿಸುತ್ತಾ ಬಾಳುತ್ತಿದ್ದರೆ ಇತ್ತೀಚಿನ ಕೆಲವು ದಶಕಗಳಲ್ಲಿ ರೈತಾಪಿಜನರಲ್ಲಿ ಕೆಲವರ ಜೀವನ ಪರಿಸ್ಥಿತಿ ಬಾವಿ, ಬೋರ್‌ವೆಲ್‌ಗಳು, ತರಕಾರಿ ಹಣ್ಣು, ಹಾಲಿನಿಂದ ಉತ್ತಮಗೊಂಡಿದೆ. ಉತ್ತಮವಾದ ಕೆಲವೊಮ್ಮೆ ಬಂಗಲೆಗಳಂತಹ ಮನೆಗಳು, ಮೋಟರ್‌ಬೈಕ್‌ಗಳು, ಟಿ.ವಿ.ಗಳು, ಕೆಲವು ಮನೆಗಳಲ್ಲಿ ಫ್ರಿಜ್, ಡೈನಿಂಗ್ ಟೇಬಲ್‌ಗಳು, ಕಾರುಗಳೂ ಕೂಡ ಬಂದಿದೆ. ಇವರು ತಾವು ತಮ್ಮ ಕುಟುಂಬದವರೂ ಸೇರಿ ಹಗಲಿರುಳೂ ದುಡಿದು ಕೃಷಿ ಮಾಡುತ್ತಿದ್ದುದನ್ನು ಕಡಿಮೆ ಮಾಡುತ್ತಾ ಬಂದಿದ್ದಾರೆ. ಕೂಲಿಕಾರರ ಮೇಲೆ ಹೆಚ್ಚು ಅವಲಂಬಿಸುತ್ತಿದ್ದಾರೆ. ಒಟ್ಟಿನಲ್ಲಿ ರೈತಾಪಿ ಜನರಲ್ಲಿ ವರ್ಗವಿಭಜನೆಯಾಗುತ್ತಿದೆ. ಈ ಕೂಲಿಕಾರರು ಯಾರು? ಹೆಚ್ಚಾಗಿ ದಲಿತರೇ (ಇಡೀ ರಾಜ್ಯದ ಕೂಲಿಕಾರರಲ್ಲಿ ನೂರಕ್ಕೆ 30 ರಷ್ಟು ಮಾತ್ರ ದಲಿತ ಕೂಲಿಕಾರರಾದರೆ ಕೋಲಾರ ಜಿಲ್ಲೆಯ ಕೂಲಿಕಾರರಲ್ಲಿ ಶೇ 50 ರಷ್ಟು ದಲಿತ ಕೂಲಿಕಾರರು) ಆದ್ದರಿಂದ ದಲಿತರ ಮೇಲೆ ಅವಲಂಬಿಸಬೇಕಾಗಿ ಬಂದಿದೆ. ಹೀಗಾಗಿ ದಲಿತ ಕೂಲಿಕಾರರಿಗೂ ಈ ಶ್ರೀಮಂತ ಮೇಲು ಮಧ್ಯಮ ರೈತರ ಕುಟುಂಬಗಳಿಗೂ ಮನಸ್ತಾಪಗಳು ಸಹಜವಾಗಿ ಉದ್ಭವಿಸುತ್ತವೆ. ಕೂಲಿಯೋ, ಕೆಲಸದ ಅವಧಿಯೋ, ಗುಣಮಟ್ಟವೋ ಯಾವುದೋ ಒಂದು ಕಾರಣ ಇರಬಹುದು.

ಆದರೆ ಅದೇ ಸಂದರ್ಭದಲ್ಲಿ ದಲಿತರ ನಡುವೆ ಶಿಕ್ಷಣ, ಸ್ವಾಭಿಮಾನ, ಸಂಘಟನೆಗಳಿಂದಾಗಿ ಎಚ್ಚರ ಮೂಡುತ್ತಿದೆ. ಸಾವಿರಾರು ವರ್ಷಗಳ ಜಾತಿ ಪದ್ಧತಿ ಯಿಂದಾಗಿ ಹಾಗೂ ಅಸ್ಪೃಶ್ಯತೆಯ ಅಮಾನವೀಯತೆಯಿಂದ ಬಿಡುಗಡೆ ಬಯಸುತ್ತಿದ್ದಾರೆ. ಇದು ಒಡೆಯ -ಕೂಲಿಕಾರ ಸಂಬಂಧಗಳನ್ನು ಮತ್ತಷ್ಟು ತೀವ್ರ ಗೊಳಿಸುತ್ತಿದೆ. ಇವುಗಳ ಫಲವಾಗಿ ಗ್ರಾಮಾಂತರದಲ್ಲಿ ಮೇಲು ಜಾತಿಗಳ ಶ್ರೀಮಂತ ರೈತರು ಆಗಾಗ್ಗೆ "ಇವರು ಬಹಳ ಹೆಚ್ಚಿಕೊಂಡು ಬಿಟ್ಟಿದ್ದಾರೆ, ಇವರನ್ನು ಮಟ್ಟ ಹಾಕಬೇಕು" ಎನ್ನುವಂತಹ ಮಾತುಗಳಿಗೆ ಹಾಗೂ ಮನೋಭಾವನೆಗಳಿಗೆ ಕಾರಣವಾಗಿದೆ. ಇದು ಒಕ್ಕಲಿಗರ ಯುವ ವೇದಿಕೆಯಂತಹ ಸಂಘಟನೆಗಳಿಗೆ ಕಾರಣವಾಗುತ್ತಿದೆ.

ಇಂತಹ ಪರಿಸ್ಥಿತಿಯಲ್ಲಿ ಇತ್ತೀಚಿನ ವರ್ಷಗಳಲ್ಲಿ ಬಾವಿಯ ನೀರು ಬತ್ತಿದ್ದು, ವಿದ್ಯುತ್ ಸರಬರಾಜಿಲ್ಲ, ಗೊಬ್ಬರ, ಔಷಧಿಗಳ ಬೆಲೆ ಏರಿದೆ. ಅದೇ ಸಂದರ್ಭದಲ್ಲಿ ರೇಷ್ಮೆ, ತರಕಾರಿ, ಹಾಲಿನ ಬೆಲೆಗಳಲ್ಲಿ ಕುಸಿತವಾಗಿದೆ. ಇದರ ಪರಿಣಾಮವಾಗಿ ಬಡರೈತರ ಬಡತನ ಮತ್ತಷ್ಟು ಹೆಚ್ಚಿದೆ. ಇದರಲ್ಲಿ ದಲಿತ ರೈತರೂ ದಲಿತೇತರ ಬಡ ರೈತರೂ ಈ ಸಂಕಷ್ಟವನ್ನು ಎದುರಿಸಬೇಕಾಗಿ ಬಂದಿದೆ.

ದಲಿತೇತರ ಬಡರೈತರೂ ಕೂಡ ಹೀಗೆ ಹೆಚ್ಚು ಕಷ್ಟಗಳನ್ನು ಅನುಭವಿಸುತ್ತಿದ್ದರೂ, ಇದಕ್ಕೆ ಸರ್ಕಾರದಿಂದ ಯಾವುದೇ ರಕ್ಷಣೆಯಿಲ್ಲ. ಸಾಲಸೌಲಭ್ಯಗಳು, ಸಾಲಮನ್ನಾ, ಬಡ್ಡಿ ಮನ್ನಾಗಳು ಇಲ್ಲ. ರಸಗೊಬ್ಬರ, ಸಬ್ಸಿಡಿಗಳು, ಕಡಿಮೆ ದರದಲ್ಲಿ ವಿದ್ಯುತ್ ಲಭ್ಯತೆ ಇವುಗಳು ಮಾಯವಾಗುತ್ತಿವೆ. ಸರ್ಕಾರವೇ ಇವರನ್ನು ಸಂಕಷ್ಟದಲ್ಲಿ ಸಿಲುಕಿಸುತ್ತಿರುವುದು ಎದ್ದುಕಾಣುತ್ತದೆ. ಆದರೆ ಅದೇ ಸಮಯದಲ್ಲಿ ದಲಿತ ಸಮುದಾಯಗಳಿಗೆ ವಸತಿ, ಮನೆ, ನೀರಾವರಿ ಕಡಿಮೆ ಬಡ್ಡಿಯ ಸಾಲ, ಶಿಕ್ಷಣ, ಉದ್ಯೋಗದ ಮೀಸಲಾತಿಗಳು ಸರ್ಕಾರದಿಂದಲೇ ಲಭ್ಯವಾಗುತ್ತಿರುವುದು ಕಣ್ಣಿಗೆ ಹೊಡೆಯುವಂತೆ ಕಾಣುತ್ತಿದೆ. ಈ ಸೌಲಭ್ಯಗಳನ್ನೆಲ್ಲಾ ಈಗ್ಗೆ 50 ವರ್ಷಗಳಿಂದಲೂ ಜಾರಿಯಲ್ಲಿದ್ದರೂ ಕೂಡ ಆಗ ಅವು ಎದ್ದು ಕಾಣುತ್ತಿರಲಿಲ್ಲ. ಆದರೆ ಈಗ ಮತ್ತಷ್ಟು ಬಡವರಾಗುತ್ತಿರುವಾಗ, ತಮಗೂ ಇಂತಹ ಸೌಲಭ್ಯಗಳು ಬೇಕು ಎನಿಸುತ್ತಿರುವಾಗ ಇವು ಅಸಮಾಧಾನವನ್ನು ಮೂಡಿಸುತ್ತಿವೆ. ಆದರಿಂದಾಗಿ ಶ್ರೀಮಂತ ರೈತರ ಮಾತುಗಳಿಗೆ ಅವರ ಜಾತಿಗಳ ಬಡ ಜನರೂ ತಲೆದೂಗುವಂತಾಗುತ್ತಿದೆ. ಇಂತಹ ಪರಿಸ್ಥಿತಿಯಲ್ಲಿ ಹೆಪ್ಪುಗಟ್ಟುತ್ತಾ ಹೋದ ಅಸಮಾಧಾನಕ್ಕೆ ಒಂದು ನೆಪ ಸಿಕ್ಕರೆ ಸಾಕು ಆಸ್ಫೋಟವಾಗುತ್ತದೆ. ಜಾತಿ ಸಂಘರ್ಷವಾಗಿ ಕೊಲೆಗಳಲ್ಲಿ, ದೌರ್ಜನ್ಯಗಳಲ್ಲಿ ಕೊನೆಗಾಣುತ್ತಿವೆ. ಇಂತಹ ಒಂದೊಂದು ಪ್ರಸಂಗವೂ ಮತ್ತಷ್ಟು ದ್ವೇಷವನ್ನು ಹುಟ್ಟಿಹಾಕುತ್ತಿದೆ.

ಕೋಲಾರ ಜಿಲ್ಲೆಯಲ್ಲಿ ಆದರಲ್ಲಿಯೂ ಚಿಂತಾಮಣಿ ತಾಲೂಕಿನಲ್ಲಿ ಇಂತಹ ಹಲವಾರು ಘಟನೆಗಳು ಸಣ್ಣದು - ದೊಡ್ಡದು ನಡೆಯುತ್ತಿವೆ. ಆದರೆ ಬಿಲ್ಲಾಂಡ್ಲಹಳ್ಳಿಯ, ಕಂಬಾಲಪಲ್ಲಿಯಂತಹ ದೊಡ್ಡ ಘಟನೆಗಳಾದಾಗ ಮಾತ್ರ ಇವುಗಳತ್ತ ಗಮನ ಹರಿಯುತ್ತದೆ. ಸಣ್ಣ ಘಟನೆಗಳಲ್ಲಿಯೇ



ಭಯದಿಂದ ಊರು ಬಿಡುತ್ತಿರುವ ದಲಿತರು

ಇದರ ಬೀಜವನ್ನು ಗಮನಿಸಿ ಅದಕ್ಕೆ ಪರಿಹಾರ ಹುಡುಕಲು ಪ್ರಯತ್ನಿಸದೆ ಕಡೆಗಣಿಸುವುದು, ರಾಜಕೀಯ ಲಾಭಕ್ಕಾಗಿ ಈ ದ್ವೇಷಕ್ಕೆ ಮತ್ತಷ್ಟು ತುಪ್ಪ ಸುರಿಯುವುದು ಇವುಗಳಿಂದ ಜಾತಿ ದ್ವೇಷ ದೊಡ್ಡ ಪ್ರಮಾಣದಲ್ಲಿ ಹಬ್ಬುತ್ತಿದೆ.

ಪ್ರಜಾಸತ್ತಾತ್ಮಕ ಶಕ್ತಿಗಳು, ಸಂಘಟನೆಗಳು ಸಂಕಷ್ಟದಲ್ಲಿರುವ ಬಡಜನರೆಲ್ಲರನ್ನು ಒಗ್ಗೂಡಿಸಿ ಅವರ ಸಂಕಷ್ಟಗಳ ಮೂಲ ಕಾರಣವನ್ನು ಮನಗಾಣಿಸಿ ಸರ್ಕಾರಗಳ, ಸರ್ಕಾರದ ನೀತಿಗಳ ವಿರುದ್ಧ ಚಳುವಳಿ ರೂಪಿಸುವುದರಿಂದ ಮತ್ತು ಶ್ರೀಮಂತ ವಿಭಾಗಗಳನ್ನು ಪ್ರತ್ಯೇಕಿಸಿ ದಲಿತ ಹಾಗೂ ದಲಿತೇತರ ಬಡಜನರ ವಿಭಾಗಗಳ ನಡುವೆ ಸಾಮರಸ್ಯದ ಸಂಬಂಧವನ್ನು ಮೂಡಿಸಲು ಸಾಧ್ಯವಾಗುತ್ತದೆ. ಈಗ ಶ್ರೀಮಂತರ ರಾಜಕೀಯ ಬೇಳೆಬೇಯಿಸಿಕೊಳ್ಳುವವರ ಮಾತಿಗೆ ದಲಿತೇತರ ಜಾತಿಗಳ ಬಡವರು ಕಿವಿಗೊಡುವುದಿಲ್ಲ ಮಾತ್ರವಲ್ಲ ಧಾಳಿಗಳ ಸಮಯದಲ್ಲಿ ದಲಿತರ ರಕ್ಷಣೆಗೂ ಮುಂದಾಗುತ್ತಾರೆ.

ಹೀಗೆ ದಲಿತ ಮತ್ತು ದಲಿತೇತರ ಬಡವ ಒಟ್ಟು ಹೋರಾಟವೇ ಈ ಪರಿಸ್ಥಿತಿಗೆ ಪರಿಹಾರ ಎನ್ನುವಾಗ ದಲಿತ ಸಂಘಟನೆಗಳು ಇತ್ತ ಮನಕೊಡಬೇಕು. ದಲಿತೇತರ ಬಡವರ ಏಕತೆಗೆ ಭಂಗ ತರುವಂತಹ ಕೆಲಸಗಳನ್ನು ಕೈ ಬಿಡಬೇಕು ಹಾಗೂ ಪ್ರಜ್ಞಾಪೂರ್ವಕವಾಗಿ ದಲಿತೇತರ ಬಡವರ ಏಳಿಗೆಗಾಗಿ ಶ್ರಮಿಸಬೇಕು. ಪ್ರಜಾಸತ್ತಾತ್ಮಕ ಶಕ್ತಿಗಳು,ಸಂಘಟನೆಗಳು ಸಮಗ್ರ ಚಳುವಳಿ ಕಟ್ಟುವ ಹೊಣೆಯನ್ನು ನಿರ್ವಹಿಸಬೇಕು. ○

ದಲಿತರ ಸಜೀವ ದಹನ, ಮಾನವೀಯತೆಗೆ ಮಿಡಿದ ಬೆಂ. ವಿಶ್ವ ವಿದ್ಯಾಲಯ. ಬಂದ್

ಕಂಬಾಲಪಲ್ಲಿಯಲ್ಲಿ 7 ಜನ ದಲಿತರ ಸಜೀವ ದಹನ ನಡೆಸಿದ ಅಮಾನವೀಯ ದುರ್ಘಟನೆಯನ್ನು ಪ್ರತಿಭಟಿಸಿ ಭಾರತ ವಿದ್ಯಾರ್ಥಿ ಫೆಡರೇಷನ್ (ಎಸ್.ಎಫ್.ಐ) ಮತ್ತು ದಲಿತ ಹಿಂದುಳಿದ ವಿದ್ಯಾರ್ಥಿ ಒಕ್ಕೂಟ ಜಂಟಿಯಾಗಿ ವಿಶ್ವ ವಿದ್ಯಾಲಯ ಬಂದ್ ಮತ್ತು ರಸ್ತೆ ತಡೆಗೆ ಕರೆ ನೀಡಿದ್ದವು. ಸುಮಾರು 800 ಕ್ಕೂ ಹೆಚ್ಚು ವಿದ್ಯಾರ್ಥಿಗಳು ಪ್ರತಿಭಟನೆಯ ರ್‍ಯಾಲಿಯಲ್ಲಿ "ಜಾತಿ ಬಿಡಿ ಮತ ಬಿಡಿ ಮಾನವತೆಗೆ ಜೀವ ಕೊಡಿ" "ದಲಿತರ ಮೇಲೆ ನಡೆಯುತ್ತಿರುವ ದೌರ್ಜನ್ಯಗಳಿಗೆ ಧಿಕ್ಕಾರ" "ದಲಿತರ ಜೀವಕ್ಕೆ ರಕ್ಷಣೆ ನೀಡದ ಪೊಲೀಸರ ನಿರ್ಲಕ್ಷತೆಗೆ ಧಿಕ್ಕಾರ" "ಕಂಬಾಲ ಪಲ್ಲಿಯ ದಲಿತರ ಸಜೀವ ದಹನಕ್ಕೆ ಧಿಕ್ಕಾರ" ಕಂಬಾಲ ಪಲ್ಲಿಯ ಜಾತಿ ವೈಷಮ್ಯಕ್ಕೆ ಧಿಕ್ಕಾರ", ಮುಂತಾದ ಘೋಷಣೆಗಳನ್ನು ಮುಗಿಲು ಮುಟ್ಟುವಂತೆ ಕೂಗುತ್ತಾ ಎಲ್ಲಾ ವಿಭಾಗದ ವಿದ್ಯಾರ್ಥಿಗಳು ತರಗತಿಗಳನ್ನು ಬಹಿಷ್ಕರಿಸಿ ಪ್ರತಿಭಟನಾ ರ್‍ಯಾಲಿಯ ಮೂಲಕ ವಿಶ್ವ ವಿದ್ಯಾಲಯದ ಉಪ ಕುಲಪತಿಗಳನ್ನು ಭೇಟಿ ಮಾಡಿ, ದಲಿತರ ಸಜೀವ ದಹನದ ದುರ್ಘಟನೆಯನ್ನು ಖಂಡಿಸಿ, ಈ ಕೂಡಲೇ ನೊಂದ ದಲಿತರ ಕುಟುಂಬಗಳಿಗೆ ಪರಿಹಾರ ಹಾಗೂ ತಪ್ಪಿತಸ್ಥರಿಗೆ ಉಗ್ರ ಶಿಕ್ಷೆ ನೀಡಬೇಕೆಂದು ಮನವಿ ಪತ್ರವನ್ನು ಸಲ್ಲಿಸಿದರು. ಪ್ರೊ. ಸಿದ್ದಪ್ಪ ಮನವಿ ಪತ್ರವನ್ನು ಸ್ವೀಕರಿಸಿ, ಅಮಾನವೀಯ ಸಜೀವ ದಹನದ ಕೃತ್ಯವನ್ನು ಎಂಥವರೂ ವಿರೋಧಿಸಬೇಕಿದೆ. ಈ ನರಮೇಧವನ್ನು ಖಂಡಿಸಿ ಮಾಧ್ಯಮಗಳು, ಸಂಘಟನೆಗಳು ಪ್ರತಿಧ್ವನಿಸಿದೆ. ಇಂಥ ರಾಕ್ಷಸ ಪ್ರವೃತ್ತಿಯಂಥ ಹೇಯ ಕೃತ್ಯಗಳನ್ನು ಖಂಡಿಸಿ ಮಾನವೀಯತೆ ಎತ್ತಿ ಹಿಡಿದು, ಶಾಂತಿಯಿಂದ ವಿಶ್ವ ವಿದ್ಯಾಲಯ ಬಂದ್ ಮಾಡಿರುವುದು ಸ್ವಾಗತಾರ್ಹ, ಈ ಕೂಡಲೇ ಸರ್ಕಾರಕ್ಕೆ, ನಿಮ್ಮ ಮನವಿಯನ್ನು ಕಳಿಸುತ್ತೇನೆ ಎಂದರು. ಅನಂತರ ವಿದ್ಯಾರ್ಥಿಗಳು ಜ್ಞಾನ ಭಾರತಿ ಬಸ್ ನಿಲ್ದಾಣದ ಮೈಸೂರು ರಸ್ತೆಯಲ್ಲಿ ರಸ್ತೆ ತಡೆ ನಡೆಸಿದರು. ಪ್ರತಿಭಟನೆಯ ನೇತೃತ್ವವನ್ನು ದಲಿತ ಮತ್ತು ಹಿಂದುಳಿದ ವಿದ್ಯಾರ್ಥಿ - ಒಕ್ಕೂಟ ಮತ್ತು ಬೆಂಗಳೂರು ವಿಶ್ವ ವಿದ್ಯಾಲಯದ ಸೆನೆಟ್ ಸದಸ್ಯೆ ಹಾಗೂ ಎಸ್.ಎಫ್.ಐ. ರಾಜ್ಯ ಉಪಾಧ್ಯಕ್ಷೆ ಕೆ.ಎಸ್.ಲಕ್ಷ್ಮಿಯವರು ಮತ್ತು ಎಸ್.ಎಫ್.ಐ.ನ ರಾಜ್ಯ ಕಾರ್ಯದರ್ಶಿ ಆರ್.ರಾಮಕೃಷ್ಣರವರು ಮತ್ತು ಬೆಂಗಳೂರು ವಿಶ್ವ ವಿದ್ಯಾಲಯದ ಶಿಕ್ಷಕ, ಶಿಕ್ಷಕೇತರರ ಸಂಘ ಮತ್ತು ಜ್ಞಾನ ಭಾರತಿ ಎಸ್.ಎಫ್.ಐ ಘಟಕ ಹಾಗೂ ಬೆಂಗಳೂರು ಎಸ್.ಎಫ್.ಐ. ಜಿಲ್ಲಾ ಸಮಿತಿಯ ಮುಖಂಡರುಗಳಾದ ಬಸಮ್ಮ ರಮೇಶ್, ಬಿ. ರಾಜಶೇಖರ್ ಮೂರ್ತಿ, ಜ್ಞಾನ ಭಾರತಿ ಘಟಕದ ಅಧ್ಯಕ್ಷ ಶೇಷಗಿರಿಯವರ ನೇತೃತ್ವದಲ್ಲಿ ಶಾಂತಿಯುತ ಯಶಸ್ವಿ ಬೆಂಗಳೂರು ವಿಶ್ವ ವಿದ್ಯಾಲಯ ಬಂದ್ ಮತ್ತು ರಸ್ತೆ ತಡೆ ನಡೆಯಿತು.

ಬಿ. ರಾಜಶೇಖರ ಮೂರ್ತಿ.



ಬಡತನ ಮತ್ತು ಹಿಂಸೆ ವಿರೋಧಿಸಿ ವಿಶ್ವನಡೆ - 2000

ರಾಜ್ಯಮಟ್ಟದ ಮಹಿಳಾ ರ್‍ಯಾಲಿ

ಎನ್.ಪ್ರಭಾ

ಮಾರ್ಚ್ 8, ಅಂತರಾಷ್ಟ್ರೀಯ ಮಹಿಳಾ ದಿನ. 1911 ರಿಂದ ವಿಶ್ವದಾದ್ಯಂತ ಈ ದಿನವನ್ನು ನಿರಂತರವಾಗಿ ಆಚರಿಸಲಾಗುತ್ತಿದೆ. ಹೋರಾಟದ ಗರ್ಭದಿಂದ ವಿಜಯಿಯಾಗಿ ಹುಟ್ಟಿದ ಈ ದಿನ ಇಲ್ಲಿಯವರೆಗೆ ಜಗತ್ತಿನಲ್ಲೆಡೆ ವಿಭಿನ್ನವಾಗಿ ಆಚರಿಸಲ್ಪಡುತ್ತಿತ್ತು. ಆದರೆ ಈ ವರ್ಷ ಮಾರ್ಚ್ 8 ನ್ನು ಉದಾರೀಕರಣ ಹುಟ್ಟುಹಾಕಿರುವ 'ಬಡತನ ಮತ್ತು ಹಿಂಸೆ' ವಿರೋಧಿಸಿ ಒಂದೇ ಘೋಷಣೆಯಡಿ ಎಲ್ಲ ದೇಶಗಳ ಮಹಿಳೆಯರು ಒಟ್ಟಾಗಲು ವಿಶ್ವ ಮಹಿಳಾ ಚಳುವಳಿ ಕರೆ ನೀಡಿತ್ತು.

ವಿಶ್ವದೆಲ್ಲ ಮಹಿಳೆಯರು, ಪ್ರಗತಿಪರರು ಗ್ಲೋಬಲ್ ಮಾರ್ಚ್-2000 ಎನ್ನುವ ಹೆಸರಿನಲ್ಲಿ ಒಂದೇ ಘೋಷಣೆಯಡಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು ಕಳೆದ ವಾರ ಆಚರಿಸಿದ್ದಾರೆ. 105 ದೇಶಗಳನ್ನೊಳಗೊಂಡು 3,000 ಮಹಿಳಾ ಸಂಘಟನೆಗಳು ಈ ಕಾರ್ಯಕ್ರಮದಲ್ಲಿ ಭಾಗವಹಿಸಿವೆ. ಲಕ್ಷಾಂತರ ಮಹಿಳೆಯರು ಎಲ್ಲೆಡೆ ಬೀದಿಗಿಳಿದು ಉದಾರೀಕರಣದ ರೂವಾರಿಗಳಿಗೆ ಪ್ರತಿರೋಧ ಒಡ್ಡಿದ್ದಾರೆ.

ಉದಾರೀಕರಣ ವಿರೋಧಿಸಿ ಗ್ಲೋಬಲ್ ಮಾರ್ಚ-2000 ಆಚರಿಸಲು ಕಾರಣ ಇಲ್ಲದಿಲ್ಲ. ಸ್ವರ್ಗವನ್ನು ಭೂಮಿಗೆ ಇಳಿಸುತ್ತೇವೆಂದು ಪ್ರಾರಂಭವಾದ ಉದಾರೀಕರಣ ಜಗತ್ತಿನಾದ್ಯಂತ ಹುಟ್ಟು ಹಾಕಿದ್ದು 'ಬಡತನ ಮತ್ತು ಹಿಂಸೆ'ಯನ್ನು ಅದರಲ್ಲೂ ವಿಶೇಷವಾಗಿ ಬಲಿತೆಗೆದುಕೊಂಡಿದ್ದು ಮಹಿಳೆಯರನ್ನು.

ನಮ್ಮ ದೇಶದ ಉದಾಹರಣೆಯನ್ನೇ ನೋಡಿ.... 10 ವರ್ಷದ ಅವಧಿಯಲ್ಲಿ ದೇಶಾದ್ಯಂತ ಅಕ್ಕಿ, ರಾಗಿ, ಗೋಧಿ, ಬೇಳೆ, ಎಣ್ಣೆಕಾಳು, ಸೀಮೆಎಣ್ಣೆ, ಅಡಿಗೆ ಅನಿಲ ಮುಂತಾದ ಅಗತ್ಯ ವಸ್ತುಗಳ ಬೆಲೆ ಏರಿಕೆಯಿಂದಾಗಿ ಬಡತನ ಅತ್ಯಂತ ವೇಗವಾಗಿ ಬೆಳೆಯುತ್ತಿದೆ. ಬಡತನದ ಕಾರಣದಿಂದಾಗಿ ಹಾಗೂ ಉದಾರೀಕರಣ ಹುಟ್ಟು ಹಾಕಿರುವ ಕೊಳ್ಳುಬಾಕ ಸಂಸ್ಕೃತಿ ಮತ್ತು ಮಾಧ್ಯಮಗಳ ಮೂಲಕ ಪಸರಿಸುತ್ತಿರುವ ಕೊಳೆ, ಹಿಂಸೆಗಳಿಂದ ಕೂಡಿದ ಪಾಶ್ಚಾತ್ಯ ಸಂಸ್ಕೃತಿಯಿಂದಾಗಿ ಮಹಿಳೆಯರ ಮೇಲೆ ಹಿಂಸೆ ಇನ್ನಿಲ್ಲದಂತೆ ಸಾಗಿದೆ. ಇಂಥದೆ ಭೀಕರ ಪರಿಸ್ಥಿತಿ ಜಗತ್ತಿನೆಲ್ಲೆಡೆ ತಾಂಡವವಾಡುತ್ತಿದೆ. ಜಗತ್ತಿನೆಲ್ಲ ಮಹಿಳೆಯರ ಕಷ್ಟ ಬಹುತೇಕವಾಗಿ ಸಮಾನ ಹಾದಿಯನ್ನು ಹಿಡಿದು ಮುಂದೆ ಸಾಗುತ್ತಿರುವ ಹಿನ್ನೆಲೆಯಲ್ಲಿ, ಜಗತ್ತಿನಾದ್ಯಂತ ಮಹಿಳೆಯರು ಒಂದೇ ಘೋಷಣೆ ಮೊಳಗಿಸಿದ್ದಾರೆ. ಉದಾರೀಕರಣದ ರೂವಾರಿಗಳಿಗೆ ಒಕ್ಕೊರಲಿನ ಸವಾಲನ್ನು ಎಸೆದಿದ್ದಾರೆ.

ಇಂತಹ ವಿಶ್ವ ಕರೆಗೆ ಓಗೊಟ್ಟು ಭಾರತದೆಲ್ಲೆಡೆ ಸಹ ಮಹಿಳಾ ದಿನ ಆಚರಿಸಲ್ಪಟ್ಟಿದೆ. ನಮ್ಮ ರಾಜ್ಯದಲ್ಲಿ ವಿವಿಧ ಮಹಿಳಾ ಸಂಘಟನೆಗಳು ಒಳಗೊಂಡು ರಚಿಸಿಕೊಂಡಿದ್ದ 'ಗ್ಲೋಬಲ್ ಮಾರ್ಚ್-2000 ವೇದಿಕೆ'ಯಡಿ ಮಹಿಳೆಯರು ಸಾವಿರಾರು ಸಂಖ್ಯೆಯಲ್ಲಿ ಸೇರಿ ಮೆರವಣಿಗೆ ಮತ್ತು ಬಹಿರಂಗ ಸಭೆಯನ್ನು ನಡೆಸಿದರು.

ಮಾರ್ಚ್ 8 ರಂದು ರಾಜ್ಯದ ಮೂಲೆ-ಮೂಲೆಗಳಿಂದ ಬಂದಿದ್ದ ಕೃಷಿ ಕೂಲಿಕಾರ ಮಹಿಳೆಯರು, ಅಂಗನವಾಡಿ ಕಾರ್ಯಕರ್ತರು ಬ್ಯಾಂಕ್-ಎಲ್ಐಸಿ ಉದ್ಯೋಗಿಗಳು ಗೃಹಿಣಿಯರು ರೈತ ಮಹಿಳೆಯರು ಅಸಂಘಟಿತ ಕ್ಷೇತ್ರದ ಮಹಿಳಾ ಕಾರ್ಮಿಕರು ಇನ್ನೂ ಮುಂತಾಗಿ ಸೇರಿ ರಾಜಧಾನಿ ಬೆಂಗಳೂರಿನ ಚಿಕ್ಕಲಾಲ್‌ಬಾಗಿನಿಂದ ಮೆರವಣಿಗೆ ಹೊರಟು ರಣಬಿಸಿಲಿನಲ್ಲಿ ಬನಪ್ಪ ಪಾರ್ಕಿನಲ್ಲಿ ಬಹಿರಂಗ ಸಭೆ ನಡೆಸಿದರು.

ಅಕ್ಕಿ, ಗೋಧಿ, ರಾಗಿ, ಬೇಳೆ, ಎಣ್ಣೆ, ಸಕ್ಕರೆ, ಸೀಮೆಎಣ್ಣೆ ಮುಂತಾದ ಅಗತ್ಯ ವಸ್ತುಗಳ ಬೆಲೆಗಳನ್ನು ಇಳಿಸುವಂತೆ ಒತ್ತಾಯಿಸುತ್ತಿದ್ದ ಘೋಷಣೆಗಳು ನಗರದ ಜನತೆಯ ಗಮನ ಸೆಳೆದವು. ಮಹಿಳೆಯರ ಮೇಲಿನ 'ಹಿಂಸೆ ಬಡತನ' ತಡೆಯದ ಆಳುವ ಜನರಿಗೆ ಒಕ್ಕೊರಲಿನ ಧಿಕ್ಕಾರ ಸಾರಿದ್ದರು.

ರೊಟ್ಟಿ-ಚಟ್ನಿಯ ಜೊತೆಗೆ ಸಣ್ಣ-ಪುಟ್ಟ ಮಕ್ಕಳನ್ನು ಹೊತ್ತು ಹೊರಟಿದ್ದು ಮಹಿಳೆಯ ಅಸಹನೆಯನ್ನು, ದುಃಖ ದುಮ್ಮಾನವನ್ನು ಕೇಳುವವರು ಯಾರು? ಕೇಳಬೇಕಾಗಿದ್ದ ಜನ ಮಲ್ಲೇಶ್ವರಂ ಆಟದ ಮೈದಾನದಲ್ಲಿ ಲಕ್ಷ-ಲಕ್ಷ ಖರ್ಚು ಮಾಡಿ ಜರಿ ಸೀರೆ ರೇಶ್ಮೆ ಪಂಚೆಯಲ್ಲಿ ಹಬ್ಬ ಆಚರಿಸುತ್ತಾ ಮೈಮರೆತಿದ್ದರು.

ಒಂದಲ್ಲ ಒಂದು ದಿನ ಆಳುವ ಜನರ ಕಣ್ಣು ತೆರೆಸುವ ಛಲದಿಂದ ಮುಂದಾದ ಮಹಿಳೆಯರು ಬನಪ್ಪ ಪಾರ್ಕಿನಲ್ಲಿ ಅಣಿನೆರೆದು ಕಷ್ಟಸುಖ ಹಂಚಿಕೊಂಡರು.

ನೆರೆದಿದ್ದ ಮಹಿಳೆಯರನ್ನುದ್ದೇಶಿಸಿ ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಪ್ರಧಾನ ಕಾರ್ಯದರ್ಶಿ ಕೆ.ನೀಲಾ ಅಧ್ಯಕ್ಷರಾದ ಕೆ.ಎಸ್.ವಿಮಲಾ, ಅಂಗನವಾಡಿ ನೌಕರರ ಸಂಘದ ರಾಜ್ಯಾಧ್ಯಕ್ಷೆ ಎನ್.ಪ್ರಭಾ, ಕಾರ್ಯದರ್ಶಿ ಎಸ್.ವರಲಕ್ಷ್ಮಿ, ಎಸ್.ಎಫ್.ಐ.ನ ರಾಜ್ಯ ಉಪಾಧ್ಯಕ್ಷೆ ಕೆ.ಎಸ್.ಲಕ್ಷ್ಮಿ, ಅಧ್ಯಕ್ಷರಾದ ಕೆ.ಎನ್.ಉಮೇಶ್, ಸಂಯುಕ್ತ ಮಹಿಳಾ ವೇದಿಕೆಯ ಅರುಣ, ಎಲ್.ಐ.ಸಿ. ಮಹಿಳಾ ಉಪಸಮಿತಿಯ ಗಾಯತ್ರಿ ಮುಂತಾದವರು ಮಾತನಾಡಿ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಸಂಘರ್ಷದ ಪರಂಪರೆಯನ್ನು ಎತ್ತಿ ಹಿಡಿಯುತ್ತಾ ಹಸನಾದ ಬದುಕಿಗಾಗಿ ಹೋರಾಟದ ಮಾರ್ಗದಲ್ಲಿ ಮುನ್ನಡೆಯೋಣವೆಂದು ಒಕ್ಕೊರಲಿನ ಮನವಿ ಮಾಡಿದರು.

ಬಹಿರಂಗ ಸಭೆಗೆ ಜೆ.ಡಬ್ಲ್ಯು.ವಿ.ಯ ಕೃಷ್ಣಕುಮಾರ್ ಸ್ವಾಗತಿಸಿದರೆ, ಜನವಾದಿಯ ರಾಜ್ಯ ಸಮಿತಿ ಸದಸ್ಯೆ ಗಂಗಮ್ಮ ಬಿರಾದಾರ ವಂದನೆ ಸಲ್ಲಿಸಿದರು.

ನವದೆಹಲಿಯಲ್ಲಿ: 'ಬಡತನ ಮತ್ತು ಹಿಂಸೆ'ಯನ್ನು ವಿರೋಧಿಸುವ ಮಹಿಳೆಯರ ಪಟ್ಟಿಯನ್ನು ವಿವಿಧ ಮಹಿಳಾ ಸಂಘಟನೆಗಳ ಮುಖಂಡರು ಪ್ರಧಾನಿ ವಾಜಪೇಯಿಯವರಿಗೆ ಸಲ್ಲಿಸಿದರು. ನಂತರ ರಾಷ್ಟ್ರಪತಿಯವರನ್ನು ಭೇಟಿಯಾಗಿ 'ಜಾಗತೀಕರಣ, ಬಡತನ ಮತ್ತು ಹಿಂಸೆ'ಯ ವಿರುದ್ಧ ಐಕ್ಯದ್ಧನಿಯಾದ 'ವುಮೆನ್ಸ್ ಸ್ಪೀಚ್'ನ ಪ್ರಥಮ ಪ್ರತಿಯನ್ನು ರಾಷ್ಟ್ರಪತಿಗಳಿಗೆ ನೀಡಿದರು.

ಮಹಿಳೆಯರು ಸಂಪತ್ತನ್ನು ಸೃಷ್ಟಿಸುವಂತವರು ಬರೀ ಮಕ್ಕಳನ್ನು ಮಾತ್ರವಲ್ಲ. ಆದರೆ ಹಾಲಿ ಪ್ರಧಾನಿಗಳು ಆರ್ಥಿಕ ರಂಗದಲ್ಲಿ ಮಹಿಳೆಯರ ಉತ್ಪಾದನಾ ಪಾತ್ರವನ್ನು ಗುರುತಿಸದೇ ಹೋಗುತ್ತಿದ್ದಾರೆ.ಮಹಿಳೆಯರ ಒಟ್ಟು ಆರೋಗ್ಯದ ಕಡೆ ಗಮನ ನೀಡದೆ ಕುಟುಂಬ ಯೋಜನೆಗೆ ಮಾತ್ರವೇ ಹಣ ಇಟ್ಟಿದ್ದಾರೆ. ಪ್ರಾಥಮಿಕ ಆರೋಗ್ಯ ತೀರಾ ಅಗತ್ಯವೆಂದು ಮನವಿ ಪತ್ರದಲ್ಲಿ ನಮೂದಿಸಲಾಗಿತ್ತು. ಇದಕ್ಕೆ ಪ್ರತಿಯಾಗಿ ಪ್ರಧಾನಿಗಳು ಕುಟುಂಬ ಯೋಜನೆಗೆ ಖರ್ಚಾಗುವ ಹಣ ವಿದೇಶದಿಂದ ಬರುತ್ತದೆಂದು ತಿಳಿಸಿದಾಗ, ಸರ್ಕಾರವು ಆದ್ಯತೆಗಳನ್ನು ಗುರುತಿಸಿಕೊಂಡು ಕೆಲಸ ಮಾಡಬೇಕೆಂದು ಮಹಿಳಾ ಪ್ರತಿನಿಧಿಗಳ ತಂಡ ಪ್ರಧಾನಿಯವರನ್ನು ಆಗ್ರಹಪಡಿಸಿತು.

ಮಹಿಳಾ ಮೀಸಲಾತಿ ಮಸೂದೆಯನ್ನು ಸಹ ಇದೇ ಅಧಿವೇಶನದಲ್ಲಿಯೇ ಮಂಡಿಸಿ-ಚರ್ಚಿಸಿ ಅಂಗೀಕರಿಸಬೇಕೆಂದು ಸಹ ಒತ್ತಾಯಪಡಿಸಲಾಗಿದೆ. ಈ ವಿಚಾರಕ್ಕೆ ಪ್ರಧಾನಿಗಳು ಈ ಅಧಿವೇಶನದಲ್ಲಿಯೇ ಚರ್ಚೆಗೆ ಮಂಡಿಸುವ ಆಶಾಭಾವನೆಯನ್ನು ವ್ಯಕ್ತಪಡಿಸಿರುತ್ತಾರೆ. ಜಾಗತೀಕರಣದ ನೀತಿಗಳು ಹಟ್ಟುಹಾಕಿರುವ ಕೆಟ್ಟ ಪರಿಣಾಮಗಳ ಅನುಭವವನ್ನಾಧರಿಸಿ ಸರಿಸುಮಾರು 100 ಮಹಿಳಾ ಸಂಘಟನೆಗಳ ಅಭಿಪ್ರಾಯಗಳನ್ನೊಳಗೊಂಡ ಪ್ರಥಮ ಪ್ರತಿಯನ್ನು ಸ್ವೀಕರಿಸಿದ ರಾಷ್ಟ್ರಾಧ್ಯಕ್ಷರು ಮನವಿಯನ್ನು ಸರ್ಕಾರಕ್ಕೆ ತಿಳಿಸುವುದಾಗಿ ನುಡಿದರು.

ಮಹಿಳಾ ಸಂಘಟನೆಗಳ ನಿಯೋಗದಲ್ಲಿ - ಬೃಂದಾ ಕಾರಟ್, ಪ್ರಮೀಳಾ ಘಂಡೆ (AIDWA), ಅರ್ಪಣ ಬಸು (AIWC) ವೀಣಾ ಮಜುಂದಾರ್ (CWDS) ಎಸ್.ಎ. ಲಲಿತಾ (JWP) ಅಮರ್ ಜಿತ್ ಕೌರ್ ಮತ್ತು ಪ್ರಮಿಳಾ ಲೂಂಬಾ (NFIW) ಮತ್ತು ಹೇಮ್‌ಚಂದ್ ಮತ್ತು ಸಧೋನಾ ಗಂಗೂಲಿ(YWCA), ಮಹಿಳಾ ಸಂಸದರಾದ ಸರಳಾ ಮಹೇಶ್ವರಿ, ಪ್ರೇಮಜಮ್, ಚಂದ್ರಾ ಪಂಥಿ, ಭಾರತೀರಾಯ್ ಮತ್ತು ಮಿನತಿ ಸೇನ್ ಒಳಗೊಂಡಿದ್ದರು.





ಕೇರಳ: 'ಎಡ ಪ್ರಜಾಸತ್ತಾತ್ಮಕ ಮಹಿಳಾ ಫೆಡರೇಷನ್' ನ ಅಡಿಯಲ್ಲಿ ಕೇರಳದಾದ್ಯಂತ 50 ಸಾವಿರಕ್ಕೂ ಹೆಚ್ಚು ಮಹಿಳೆಯರು ಮಾರ್ಚ್ 8 ರ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯನ್ನು 'ಬಡತನ ಮತ್ತು ಹಿಂಸೆ'ಯನ್ನು ವಿರೋಧಿಸಿ ಆಚರಿಸಿದರು.

ಪ್ರತಿ ಜಿಲ್ಲಾ ಕೇಂದ್ರಗಳಲ್ಲೂ ಸಾವಿರ ಸಾವಿರ ಸಂಖ್ಯೆಯಲ್ಲಿ ಅಣಿನೆರದಿದ್ದ ಮಹಿಳೆಯರು, ರ್‍ಯಾಲಿಗಳು, ಪ್ರತಿಭಟನೆಗಳು ಪ್ರದರ್ಶನಗಳು ಇನ್ನೂ ಮುಂತಾದ ರೀತಿಯಲ್ಲಿ ವಿಶ್ವ-ನಡೆ-2000 ವನ್ನು ಅತ್ಯಂತ ಯಶಸ್ವಿಯಾಗಿ ಜರುಗಿಸಿದರು.

ತ್ರಿವೆಂಡ್ರಂನಲ್ಲಿ ನಡೆದ ಬೃಹತ್ ರ್‍ಯಾಲಿಯನ್ನು, ಜೆ.ಎಂ.ಎಸ್. ನ ಕೇರಳದ ರಾಜ್ಯ ಅಧ್ಯಕ್ಷರಾದ ಎಂ.ಸಿ.ಜೋಸೆಫೈನ್ ಉದ್ಘಾಟಿಸಿದರು. ಶಾಸಕರುಗಳಾದ ಭಾರ್ಗವಿ ತುಂಗಪುನ್-ಗಿರಿಜಾ ಸುರೇಂದ್ರನ್ ರ್‍ಯಾಲಿಯನ್ನುದ್ದೇಶಿಸಿ ಭಾಷಣ ಮಾಡಿದರು. ಪಕ್ಕದ ರಾಜ್ಯಗಳಾದ ಆಂಧ್ರ ಹಾಗೂ ತಮಿಳುನಾಡಿನಲ್ಲಿಯೂ ಸಹ ಸಾವಿರಾರು ಸಂಖ್ಯೆಯಲ್ಲಿ ಮಹಿಳೆಯರು ಜಿಲ್ಲಾ ಕೇಂದ್ರಗಳಲ್ಲಿ ಹಾಗೂ ರಾಜಧಾನಿಗಳಲ್ಲಿ ಸೇರಿ 'ಬಡತನ ಮತ್ತು ಹಿಂಸೆ' ಯ ವಿರುದ್ಧ ಬೃಹತ್ ರ್‍ಯಾಲಿಗಳನ್ನು ಸಂಘಟಿಸಿದ ಬಗ್ಗೆ ವರದಿಗಳು ಬಂದಿವೆ.

ಕರ್ನಾಟಕದ ಮಹಿಳಾ ಕಲ್ಯಾಣ ಮಂತ್ರಿಯೂ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯೂ

ಪಾಪ ಮೋಟಮ್ಮನವರಿಗೆ ಅಂತರಾಷ್ಟ್ರೀಯ ಮಹಿಳಾ ದಿನಾಚರಣೆಯ ಹಿನ್ನೆಲೆ, ಪರಂಪರೆ ತಿಳಿದಿಲ್ಲವೆನಿಸುತ್ತದೆ. ಮಹಿಳಾ ದಿನಾಚರಣೆ ಸಮೀಪಿಸುವ ಒಂದು ವಾರ ಮುಂಚೆಯೇ ತಮ್ಮ ಇಲಾಖೆಯ ಮೂಲಕ ಸುತ್ತೋಲೆಯೊಂದನ್ನು ಹೊರಡಿಸಿ 'ಘನ ಸಂದೇಶವೊಂದನ್ನು' ಸಾರಿದ್ದರು. ಅದೇನೆಂದರೆ ಅವರ ಇಲಾಖೆಯಡಿ ಕೆಲಸ ಮಾಡುವ ನೌಕರರು ಮಾರ್ಚ್-8 ರಿಂದ 11 ರ ತನಕ ಬೆಂಗಳೂರಿನಲ್ಲಿ ಸರ್ಕಾರದ ವಿರುದ್ಧ ಘೋಷಣೆ ಕೂಗಬಾರದು, ಬೇಡಿಕೆಗಳ ಪಟ್ಟಿಯನ್ನು ನೀಡಬಾರದು, ಎಲ್ಲೂ ಕೂಡ ಪ್ರದರ್ಶನ ಕಾಣಬಾರದು ಇತ್ಯಾದಿ.... ಅದರಲ್ಲೂ ವಿಶೇಷವಾದ ಎಚ್ಚರಿಕೆ ಅಂಗನವಾಡಿ ನೌಕರರಿಗೆ. ಏಕೆಂದರೆ ಮಾರ್ಚ್ 8-11 ರ ತನಕ ಮಲ್ಲೇಶ್ವರಂ ಆಟದ ಮೈದಾನದಲ್ಲಿ 'ಸರ್ಕಾರಿ ಮೇಳ' ನಡೆಯುತ್ತದೆ ಆ ಕಾರ್ಯಕ್ರಮಕ್ಕೆ ಉನ್ನತ ಅಧಿಕಾರಿಗಳು ಘನವೆತ್ತ ಮಂತ್ರಿಗಳು - ಮಹೋದಯರು - ರೇಷ್ಮೆ ಜರಿ ಪಂಚೆಗಳಲ್ಲಿ ವಿಜೃಂಭಿಸುತ್ತಾ ಹಬ್ಬ ಮಾಡಲು ಬರುತ್ತಾರೆ. ಮಹಿಳೆಯರೆಲ್ಲಾ ಅಲ್ಲಿಗೆ ಬರಬೇಕೆಂದು ಬುಲಾವ್ ಕಳಿಸಿದ್ದರು. ಪಾಪ ವಿಧಿ ಇಲ್ಲದೆ ಅತಂತ್ರ ಸ್ಥಿತಿಯಲ್ಲಿ ಕೆಲಸ ಮಾಡುತ್ತ ಪಂಚಾಯತ್ ಸದಸ್ಯರಿಂದ ಪಾರ್ಲಿಮೆಂಟ್ ಸದಸ್ಯರ ತನಕ ಬೆದರಿಕೆಗೆ ಒಳಗಾಗುವ ಅಂಗನವಾಡಿ ಹೆಣ್ಣು ಮಕ್ಕಳು ಮಹಿಳಾ ಮಂತ್ರಿಗಳ ಆಜ್ಞೆಗೆ ತಲೆ ತಗ್ಗಿಸಲೇಬೇಕಾಯಿತು. ಅಂದು ಸರ್ಕಾರಿ ಸಮಾರಂಭಕ್ಕೆ ವಿಧಿ ಇಲ್ಲದೆ ಹೋಗಲೇಬೇಕಾಯಿತು.

ಆದರೆ ದಿನಾಚರಣೆ ಸಾರ್ಥಕವಾಯಿತೆ? ಎಂಬ ಪ್ರಶ್ನೆಯನ್ನು ಮಂತ್ರಿಗಳೇ ಹಾಕಿಕೊಳ್ಳಬೇಕು.

ಅಂತರಾಷ್ಟ್ರೀಯ ಮಹಿಳಾ ದಿನಾಚರಣೆ ದುಡಿಯುವ ಮಹಿಳೆಯರ ಧೀರೋದಾತ್ತ ಹೋರಾಟದಿಂದ, ತ್ಯಾಗ ಬಲಿದಾನಗಳಿಂದ ಮೂಡಿ ಬಂದ ದಿನ 8 ಗಂಟೆಗಳ ಕೆಲಸ ಕನಿಷ್ಟ ಸೌಲಭ್ಯಗಳ ಬೇಡಿಕೆಯನ್ನಿಟ್ಟು ಹೋರಾಡಿ ಚಿಕಾಗೋ ಮಹಿಳೆಯರು ವಿಜಯಗಳಾದ ಹಿನ್ನೆಲೆಯಲ್ಲಿ 1911 ರಿಂದ ಪ್ರತಿವರ್ಷ ನಿರಂತರ ಆಚರಿಸಲ್ಪಡುವ ಈ ದಿನದಂದು ಬೇಡಿಕೆಗಳನ್ನಿಟ್ಟು ಹೋರಾಡದೇ 'ಗೌರಿಹಬ್ಬ'ದ ದಿನದಂದು ಹೋರಾಡಬೇಕೇ? ಮಾನ್ಯ ಮಂತ್ರಿಗಳೇ ತಿಳಿಸಬೇಕು.

ಮಹಿಳಾ ಕಲ್ಯಾಣ ಮಂತ್ರಿಗಳ ಇಂತಹ ಪ್ರತಿಗಾಮಿ ಧೋರಣೆಯನ್ನು ಅಖಿಲ ಭಾರತ ಜನವಾದಿ ಮಹಿಳಾ ಸಂಘಟನೆಯ ರಾಜ್ಯ ಘಟಕ ಉಗ್ರವಾಗಿ ಖಂಡಿಸಿದೆ. ಮಹಿಳೆಯರ ಕಷ್ಟ-ಸುಖಗಳನ್ನು ಆಲಿಸಬೇಕಾದ ಮಂತ್ರಿಗಳು ಮಹಿಳೆಯರ ಧ್ವನಿಯನ್ನೇ ಅಡಗಿಸುವಂತ ಕ್ರಮ ವಹಿಸುವುದು ಈ ನಾಡಿನ ಮಹಿಳೆಯರ ದುರ್ದೈವವೆ ಸರಿ.

ಏನೇ ಇರಲಿ ಮಾರ್ಚ್ 9 ರಂದು ಸಾವಿರಾರು ಅಂಗನವಾಡಿ ಮಹಿಳೆಯರು ಬೀದಿಗಿಳಿದು ಹೋರಾಟಕ್ಕೆ ಮುಂದಾದರು. ಬೇಡಿಕೆಗಳನ್ನಿಟ್ಟು ಘೋಷಣೆ ಕೂಗೇ ಕೂಗಿದರು. ಆರ್ಭಟಗಳನ್ನು ಮಾಡಿದ್ದ ಮಹಿಳಾ ಕಲ್ಯಾಣ ಮಂತ್ರಿಗಳೇ ಪ್ರತಿಭಟನಾ ಜಾಗಕ್ಕೆ ಬಂದು ಮನವಿ ಪತ್ರವನ್ನು ಖುದ್ದಾಗಿ ಸ್ವೀಕರಿಸಿ ಹೋದರು. "ಇದೇ ಮಾರ್ಚ್ 8 ರ ಹಿರಿಮೆ' ಹಾಗೂ ಮಹತ್ವ. ಮಂತ್ರಕ್ಕುದುರದ ಮಾವಿನಕಾಯಿ ಹೋರಾಟಕ್ಕಂತು ಉದುರಲೇ ಬೇಕು.

ಹೆಡೆ ಎತ್ತುತ್ತಿರುವ ಆರ್.ಎಸ್.ಎಸ್.

ಆತಂಕಗೊಂಡ ದೇಶ

ದೇಶದಲ್ಲಿ ದಿನನಿತ್ಯವೂ ಅನೇಕ ವಿದ್ಯಮಾನಗಳನ್ನು ಗಮನಿಸಿದ್ದೀರಿ. ಇವುಗಳು ಬಿಡಿಬಿಡಿ ಘಟನೆಗಳು ಎಂದೆನಿಸಬಹುದು. ಆದರೆ ಇವುಗಳು ಬಿಡಿಯಾಗಿರದೇ ಒಂದು ವ್ಯವಸ್ಥಿತ ಸಂಬಂಧಗಳುಳ್ಳ ಸರಮಾಲೆಗಳಾಗಿವೆ. ಅದೇನು ಹೇಗೆ ಎಂಬುದನ್ನು ಇದೇ ಮಾರ್ಚ್ 10 ರಿಂದ 12 ರವರೆಗೆ ದೆಹಲಿಯಲ್ಲಿ ಸೇರಿದ್ದ ಸಿಪಿಐ(ಎಂ)ನ ಕೇಂದ್ರ ಸಮಿತಿ ವಿಶ್ಲೇಷಿಸಿದೆ.

ಆರ್.ಎಸ್.ಎಸ್.ನ ಅಜೆಂಡಾವನ್ನೇ ಜಾರಿಗೊಳಿಸಲು ಮತ್ತೆ ಮತ್ತೆ ನಡೆಸಿರುವ ಪ್ರಯತ್ನಗಳು ಈ ಕೆಲವು ತಿಂಗಳಲ್ಲೇ ಸಾಬೀತಾಗಿವೆ. ರಾಷ್ಟ್ರೀಯ ಪ್ರಜಾಸತ್ತಾತ್ಮಕ ಮೈತ್ರಿ'ಗೆ ಒಂದು ಅಜೆಂಡಾ ಎಂಬುದೇನೋ ಇದೆ. ಆದರೆ ಅದಕ್ಕೆ ಬದಲಿಯಾದ ಅಜೆಂಡಾವೇ ಕ್ರಿಯೆಯಲ್ಲಿದೆ.

ಸರ್ಕಾರದ ಆಡಳಿತ ಯಂತ್ರದಲ್ಲಿ ಆರ್.ಎಸ್.ಎಸ್. ನುಸುಳಲು ಬಹಿರಂಗವಾಗಿಯೇ ಪ್ರಯತ್ನಗಳನ್ನು ನಡೆಸಲಾಯಿತು. ಸರ್ಕಾರೀ ನೌಕರರು 'ಸಂಘದ' ಸದಸ್ಯರಾಗಬಹುದು ಎಂದು ಗುಜರಾತ್ ಸರ್ಕಾರ ಹೊರಡಿಸಿದ ಸುತ್ತೋಲೆಯನ್ನು ಗೃಹಸಚಿವ ಎಲ್.ಕೆ.ಅಡ್ವಾಣಿಯವರಾದಿಯಾಗಿ ಸಮರ್ಥಿಸಿದರು. ಆರ್.ಎಸ್.ಎಸ್.ನ್ನು ಒಂದು ಸಾಂಸ್ಕೃತಿಕ ಸಂಘವೆಂದು ಮುಸುಕು ಎಳೆಯಲು ಶ್ರಮಿಸಲಾಯಿತು. ಬಹುತೇಕ ಮಾಧ್ಯಮಗಳೂ ಸಹ ಆರ್‌ಎಸ್‌ಎಸ್‌ನ ಕರಾಳ ಮುಖವನ್ನು ಬಯಲಿಗೆಳೆಯಲು ಮನಪೂರ್ವಕವಾಗಿ ಬಯಸಲಿಲ್ಲ. ಈ ವಿಷಯವೇ ಪಾರ್ಲಿಮೆಂಟಿನಲ್ಲಿ ರಣರಂಗ ಸೃಷ್ಟಿಸಿತು. ಮತನಿರಪೇಕ್ಷಿತ ಶಕ್ತಿಗಳು, ಪಟ್ಟು ಬಿಡದೆ ಹೋರಾಡಿದರು. ಕೊನೆಗೆ ಎನ್.ಡಿ.ಎ. ಯ ಕೆಲವು ಮಿತ್ರ ಪಕ್ಷಗಳು ಸಂಘ ಪರಿವಾರದ ಹುನ್ನಾರವನ್ನು ಬೆಂಬಲಿಸಲು ಹಿಂಜರಿದವು. ಅತೃಪ್ತಿ ತೋರಿದವು. ಬಹಿರಂಗವಾಗಿ ತಮ್ಮ ಭಿನ್ನಮತ ಸಾರಿದರು. ಬೇಳೆ ಬೇಯುದು ಎಂದು ಮನಗಂಡ ಬಿಜೆಪಿ-ಸಂಘಪರಿವಾರ ಬೇರೆ ದಾರಿಯಿಲ್ಲದೇ ಗುಜರಾತ್ ಸರ್ಕಾರ ಆದೇಶವನ್ನು ವಾಪಾಸುಪಡೆಯಲು ಮುಂದಾಯಿತು. ಇಂಗು ತಿಂದ ಮಂಗನಂತಾಗಿದ್ದರೂ, ತಮ್ಮದೇನೂ ಇದರಲ್ಲಿ ಪಾತ್ರ ಇಲ್ಲ. ಅದೆಲ್ಲಾ ಗುಜರಾತ್ ಸರ್ಕಾರದ್ದೇ ಎಂದು ಮುಖ ಉಳಿಸಿಕೊಳ್ಳಲು ಪ್ರಧಾನಿ ವಾಜಪೇಯಿ ಯತ್ನಿಸಿದರು. ನಿಷ್ಠುರ, ನಿರಂತರ ಹೋರಾಟ ನಡೆಸಿದ ಸಿಪಿಐ(ಎಂ), ಮತ್ತಿತರೆ ಸೆಕ್ಯುಲರ್ ಶಕ್ತಿಗಳ ಯತ್ನ ಶ್ಲಾಘನೀಯ. ಬಿಜೆಪಿ-ಪರಿವಾರ ಹಿಂದೆ ಸರಿದಿದ್ದೇನೋ ನಿಜ, ಆದರೆ ಆಡಳಿತದಲ್ಲಿ ನುಸುಳುವ ಯತ್ನ ಕೈ ಬಿಡುವುದಿಲ್ಲ ಎಂಬ ಎಚ್ಚರಿಕೆ ಅಗತ್ಯವಿದೆ. ಈ ನಡುವೆ ಗಮನಿಸಬೇಕಾದ ವಿಷಯವೆಂದರೆ ಈ ಖಾಕೀ ಚಡ್ಡಿ ವೀರರಿಗಿಂತಲೂ ಹೆಚ್ಚು ಅರಚಿದ್ದು ಜಾರ್ಜ್ ಫರ್ನಾಂಡೀಸ್ ಎಂಬ ಸಮಾಜವಾದಿ "ಆರ್‌ಎಸ್‌ಎಸ್ ಫ್ಯಾಸಿಸ್ಟ್ ಎನ್ನುವುದಾದರೆ ನಾನೂ ಫ್ಯಾಸಿಸ್ಟ್......" ಇಂತಹ ಕೆಲವು ಸತ್ಯಗಳು ಹೊರಬೀಳಲು ಕಾಲಕ್ಕಾಗಿ ಕಾಯಬೇಕು. ರಕ್ಷಣಾ ಸಚಿವರದ್ದು ಎಷ್ಟೊಂದು ನಿಷ್ಠ ಸೇವೆ!


ಬಿಹಾರದ ವಿಷಯದಲ್ಲಿಯೂ ಹಾಗೆಯೇ. ಬಹುಮತ ಕಡಿಮೆ ಇದ್ದು ರಾಜ್ಯಪಾಲರ ಮೂಲಕ ಎನ್.ಡಿ.ಎ.-ಕೂಟದ ನಿತೀಶ್ ಕುಮಾರ್ ರವರನ್ನು ಮುಖ್ಯಮಂತ್ರಿಯನ್ನಾಗಿಸಿದರು. ಸದನದಲ್ಲಿ ಮತದಾನವನ್ನು ಎದುರಿಸಲಾರದೇ ಸ್ಥಿತಿ ಅರಿತು ಹೇಡಿಯಾಗಿ ರಾಜೀನಾಮೆ ಸಲ್ಲಿಸಿದರು. ಮುಂದೆ ಬಹುಮತದಲ್ಲಿ ಆರ್.ಜೆ.ಡಿ.ಯ ರಾಬ್ಡಿ ದೇವಿ ಯಶಸ್ವಿಯಾದರು. ಪ್ರಧಾನಿಗಳೂ ಒಳಗೊಂಡು ಬಿಜೆಪಿಗಳು ನಡೆಸಿದ ಹಣದ ಆಮಿಷ, ಪಿತೂರಿಗಳು ಬಯಲುಗೊಂಡು ಮತ್ತೇ ತೀವ್ರವಾದ ಮುಖಭಂಗವನ್ನು ಅನುಭವಿಸಬೇಕಾಗಿ ಬಂದವು. ಕೇವಲ ವಾರದೊಳಗೆ ಎಂತಹ ಹೊಡೆತ! ಈಗ ಮುಖ ಉಳಿಸಿಕೊಳ್ಳುವ ಹೊಸ ಪೇಂಟ್‌ಗೆ ಹುಡುಕುತ್ತಿದ್ದಾರೆ. ಬಿಹಾರದ ರಾಜ್ಯಪಾಲ ಪಾಂಡೆಯನ್ನು ಕೂಡಲೇ ವಾಪಸು ಕರೆಸಿಕೊಳ್ಳಬೇಕು. ಕ್ಷಣವೂ ಮುಂದುವರಿಯಲು ಅನರ್ಹನೀತ.

ಎಲ್ಲೆಡೆ ಚಡ್ಡಿಗಳ ಪಿತೂರಿ

ಈ ಚಡ್ಡಿಗಳ ಅಟ್ಟಹಾಸ, ಒಂದೊ ಎರಡೋ.... ಎಲ್ಲ ರಂಗಗಳಲ್ಲಿ ಮೂಗು ತೂರಿಸುವ ಪರಿ ಹೇಸಿಗೆ ತರುತ್ತಿದೆ. ಅವರ ವರ್ತನೆ-ಕ್ರಮಗಳು ಪ್ರಜಾತಂತ್ರದ ಗೋಣು ಹಿಸುಕುತ್ತಿವೆ. ಉತ್ತರ ಪ್ರದೇಶದಲ್ಲಿ 'ವಾಟರ್' ಚಲನಚಿತ್ರದ ತಂಡದ ಮೇಲೆ ಧಾಳಿ ನಡೆಯಿತು. ಪೂಜಾ ಮಂದಿರಗಳ ಕಾಯಿದೆಯೂ ಬಂತು. ಸ್ವಾತಂತ್ರ್ಯ ಸಂಗ್ರಾಮದ ಬಗ್ಗೆ ಹಿರಿಯ ವಿದ್ವಾಂಸರ ವೈಜ್ಞಾನಿಕ ಬರಹಗಳು, ಹೊತ್ತಿಗೆಗಳನ್ನು ಇತಿಹಾಸ ಅನುಸಂಧಾನ ಪರಿಷತ್ ಅಧ್ಯಕ್ಷರ ಮೂಲಕ ಅತಿಕ್ರಮಣಕಾರಿಯಾಗಿ ಮುದ್ರಣದಿಂದ ಹಸ್ತಪ್ರತಿ ಹಿಂತೆಗೆದುಕೊಳ್ಳಲಾಯಿತು. ಬೌದ್ಧಿಕ, ಸಾಂಸ್ಕೃತಿಕ ಆಡಳಿತಾತ್ಮಕ ಮತ್ತು ಶಿಕ್ಷಣ ಕ್ಷೇತ್ರದಲ್ಲಿ 'ಹಿಂದುತ್ವ'ದ ಪಡೆಗಳದ್ದೇ ಕಾರುಬಾರು ನಡೆಸಲು ಮುಂದಾಗುತ್ತಿದ್ದಾರೆ. ವೈಚಾರಿಕ ಸ್ವಾತಂತ್ರ್ಯವನ್ನು ದಮನಗೊಳಿಸುತ್ತಿದ್ದಾರೆ. ಆರ್.ಎಸ್.ಎಸ್. ಈ ಪಿತೂರಿಗಳನ್ನು ದೇಶದ ಎಲ್ಲಾ ಮತನಿರಪೇಕ್ಷ, ಪ್ರಜಾಸತ್ತಾತ್ಮಕ ಶಕ್ತಿಗಳು ಪ್ರತಿಭಟಿಸಬೇಕು.

ಸಂವಿಧಾನದ ಪರಾಮರ್ಶೆ

ಇನ್ನು ಸಂವಿಧಾನದ ಪರಾಮರ್ಶೆ ಬಗ್ಗೆ ದೇಶಾದ್ಯಂತ ವ್ಯಾಪಕವಾದ ಪ್ರತಿರೋಧ ಇದ್ದರೂ ಆಯೋಗವನ್ನು ರಚಿಸಿ



ಬಿಹಾರ: ಅರಮನೆ ಪಿತೂರಿಯ ಸಮಾಲೋಚಕರು

ಸಂವಿಧಾನವನ್ನು ಬುಡಮೇಲುಗೊಳಿಸಲು ಬಿಜೆಪಿ ಬಯಸಿದೆ. ಬಿಜೆಪಿಯ ಯತ್ನವಿರುವುದೇ ಸಂವಿಧಾನ ಮೂಲ ಸತ್ವವಾಗಿರುವ ಮತನಿರಪೇಕ್ಷತೆ (ಸೆಕ್ಯುಲರಿಸಂ)ತೆಯ ಧೋರಣೆಗಳನ್ನು ಕಿತ್ತುಹಾಕುವುದು. ಅಧ್ಯಕ್ಷೀಯ ಮಾದರಿ ಸರ್ಕಾರದ ಹೇರಿಕೆ, ಇನ್ನೊಂದು ಸಂಚು. ಈ ಪರಾಮರ್ಶೆ ವಿಷಯ ಪಾರ್ಲಿಮೆಂಟ್‌ನ ಮುಂದೆ ತರಲಿಲ್ಲ. ಇದೀಗ ಹೊಸದಾಗಿ ಆಯ್ಕೆಗೊಂಡಿರುವ ಆರ್.ಎಸ್.ಎಸ್.ನ ಚೀಫ್ ಸುದರ್ಶನ್ "ಈ ಸಂವಿಧಾನವನ್ನು ಪೂರ್ತಿಯಾಗಿ ಕಿತ್ತುಹಾಕಬೇಕು" ಎಂದು ಗುಟುರು ಹಾಕಿದ್ದಾರೆ. ಇದು ಬಿಜೆಪಿಯ ಉದ್ದೇಶದ ಅಪಾಯಕಾರಿ ಸ್ವರೂಪವನ್ನು ಹೊರಗೆಡವಿದೆ. ಸಂವಿಧಾನ ವಿಮರ್ಶೆಯಾಗಲೀ ಎಂದು ಹೇಳುವವರು ಆರ್.ಎಸ್.ಎಸ್. ನ ಅಪಾಯದ ಆಟವನ್ನು ಅರಿಯಬೇಕು. ಸಂವಿಧಾನ ಪರಾಮರ್ಶೆಯನ್ನು ಉಗ್ರವಾಗಿ ವಿರೋಧಿಸುತ್ತಿರುವ ಸಿಪಿಐ(ಎಂ) ಆಯೋಗದ ಕಾರ್ಯನಿರ್ವಹಣೆಗೆ ಯಾವುದೇ ಸಹಕಾರ ನೀಡದಿರಲು ನಿರ್ಧರಿಸಿದೆ.

ಕೇಂದ್ರದ ಬಜೆಟ್, ಹೊಸ ಆಕ್ರಮಣಗಳು

ಯಶವಂತಸಿನ್ಹಾ ಮಂಡಿಸಿದ ಈ ಬಾರಿಯ ಬಜೆಟ್ ವಿದೇಶಿ ಬಂಡವಾಳಿಗರನ್ನು ಮತ್ತೆ ಸಾಮ್ರಾಜ್ಯಶಾಹಿಗಳ ಹಿತಗಳನ್ನು ಕಾಪಾಡಲು ಹಾಗೂ ಅವರ ಮನ ಒಲಿಸಲು ನಡೆಸಿದ ವರಸೆಯಾಗಿದೆ. 1428 ಕೋಟಿ ಕಸ್ಟಂ ತೆರಿಗೆ ಕಡಿಮೆ ಮಾಡಿ, ಆಂತರಿಕ ಉತ್ಪಾದನೆಯ ಮೇಲೆ ಎಕ್ಸೈಜ್ ಸುಂಕವನ್ನು 3252 ಕೋಟಿಯಷ್ಟು ವಿಧಿಸಲಾಗಿದೆ. ಇದೆಲ್ಲಾ ವಿದೇಶಿ ಬಂಡವಾಳಕ್ಕೆ ಮಣೆಹಾಕುವುದರ ಸಾಕ್ಷಿ.

ರಸಗೊಬ್ಬರಗಳ ಬೆಲೆ ಏರಿಕೆ, ಸಬ್ಸಿಡಿ ಕಡಿತ, ರೈತರನ್ನು ಭಾಧಿಸಲಿದ್ದು ಅಂತಿಮವಾಗಿ ಕೃಷಿರಂಗದ ಉತ್ಪಾದನೆ ಸ್ಥಗಿತಗೊಳ್ಳಲಿದೆ. ಪಡಿತರ ಆಹಾರ ವಸ್ತುಗಳ ಬೆಲೆ ಏರಿಸಿರುವುದು ಆಘಾತಕಾರಿ. ಅಕ್ಕಿ, ಗೋಧಿ ಬೆಲೆಯನ್ನು ಶೇ 46 ರಿಂದ 64 ರಷ್ಟು ಹೆಚ್ಚಿಸಲಾಗಿದ್ದು ಬಡತನದ ರೇಖೆಯ ಕೆಳಗಿರುವವರಿಗೆ ಮಾರುಕಟ್ಟೆ ಬೆಲೆಯನ್ನೇ ನಿಗದಿ ಮಾಡಿದಂತೆ. ಹೀಗಾಗಿ ಆಹಾರ ವಸ್ತುಗಳು ಸಿಗದೇ ಜನತೆ ಕಂಗಾಲಾಗುವರು. ಇದೆಲ್ಲಾ ಐಎಂಎಫ್-ವಿಶ್ವಬ್ಯಾಂಕ್ ನಿರ್ದೇಶನಗಳನ್ನು ಚಾಚೂ ತಪ್ಪದೇ ಅಂಗೀಕರಿಸಿದ ಪರಿಣಾಮ. ವಾಜಪೇಯಿ ಸರಕಾರ ಈ ಕೂಡಲೇ ಆಹಾರ ಸಬ್ಸಿಡಿ ಕಡಿತ ಹಿಂತೆಗೆದುಕೊಳ್ಳಬೇಕು. ಬೆಲೆ ಏರಿಕೆ ನಿಯಂತ್ರಣ ಆಗಲೇಬೇಕು. ಈ ಬಜೆಟ್ ವಿರುದ್ಧ ಜನ ಬೀದಿಗಿಳಿದು ಹೋರಾಡಬೇಕು. ರಾಷ್ಟ್ರೀಕೃತ ಬ್ಯಾಂಕ್‌ಗಳಲ್ಲಿ ಖಾಸಗಿಯವರು ಶೇ 33 ರಷ್ಟು ಇಕ್ವಿಟಿ ಪಡೆಯುವ ಕ್ರಮವು ಕೂಡ ಉಗ್ರ ಖಂಡನೀಯ.

ಮೇ 11 ರ ಸಾರ್ವತ್ರಿಕ ಮುಷ್ಕರಕ್ಕೆ ಬೆಂಬಲ

ಈಗಾಗಲೇ ದೆಹಲಿಯಲ್ಲಿ ಮಾರ್ಚ್ 9 ರಂದು ಬೃಹತ್ ರ್‍ಯಾಲಿ ನಡೆಸಿ, ಬೇಡಿಕೆಗಳ ಪಟ್ಟಿಯನ್ನು ಕೇಂದ್ರ ಸರ್ಕಾರಕ್ಕೆ ನೀಡಿರುವ ಸಾಮೂಹಿಕ ಸಂಘಟನೆಗಳ ರಾಷ್ಟ್ರೀಯ ವೇದಿಕೆಯು ಮೇ 11 ರಂದುದೇಶದಾದ್ಯಂತ ವ್ಯಾಪಕವಾದ ಸಾರ್ವತ್ರಿಕ ಮುಷ್ಕರ ನಡೆಸಲು ನಿರ್ಧರಿಸಿದೆ. ಇದರ ಯಶಸ್ವಿಗೆ ಸಿಪಿಐ(ಎಂ) ಕೇಂದ್ರ ಸಮಿತಿಗೆ ಬೆಂಬಲ ಘೋಷಿಸಿದೆ.

ಕ್ಲಿಂಟನ್ ಭೇಟಿ

ಭಾರತ ಮತ್ತು ಉಪಖಂಡದಲ್ಲಿ ಅಮೆರಿಕಾದ ನೀತಿಗಳನ್ನು ಜಾರಿಗೊಳಿಸಲು ಬರುತ್ತಿರುವ ಅಮೆರಿಕಾದ ಅಧ್ಯಕ್ಷ ಬಿಲ್ ಕ್ಲಿಂಟನ್ ಭೇಟಿಯನ್ನು ಎಲ್ಲಾ ದೇಶಪ್ರೇಮಿಗಳು ವಿರೋಧಿಸಬೇಕಿದೆ. ಮಾರ್ಚ್ 21 ಕ್ಲಿಂಟನ್ ಭೇಟಿಯ ಮೊದಲ ದಿನ ಅಂದು 'ಅಮೆರಿಕನ್ ಸಾಮ್ರಾಜ್ಯಶಾಹಿ ವಿರುದ್ಧ' ರಾಷ್ಟ್ರೀಯ ಪ್ರತಿಭಟನಾ ದಿನ'ವನ್ನಾಗಿ ಆಚರಿಸಲು ಸಿಪಿಐ(ಎಂ) ನಿರ್ಧರಿಸಿದೆ. ನಿಷೇಧ ಇದ್ದರೂ ದೇಶಾದ್ಯಂತ ಪ್ರತಿಭಟನಾ ಮೆರವಣಿಗೆ-ಸಭೆ ನಡೆಸಲಾಗುವುದು. ಭಾರತದ ಮೇಲೆ ವಿಧಿಸಿರುವ ವಿವಿಧ ದಿಗ್ಬಂಧನಗಳ ಹಿಂತೆಗೆಯುವಿಕೆ, ಅಮೆರಿಕಾದ ಬಂಡವಾಳದಾರರಿಗೆ ಭಾರತದ ಕೃಷಿ-ಕೈಗಾರಿಕೆ-ಹಣಕಾಸು ರಂಗಗಳನ್ನು ಒಪ್ಪಿಸಲು ಮಾಡುತ್ತಿರುವ ಒತ್ತಡ, ಕಾಶ್ಮೀರದ ವಿದ್ಯಮಾನಗಳಲ್ಲಿ ಮಧ್ಯಪ್ರವೇಶ, ಕ್ಯೂಬಾದ ಮೇಲೆ ಹೇರಿರುವ ದಿಗ್ಬಂಧನಗಳು, ಇರಾಕ್ ಮೇಲಿನ ನಿರ್ಬಂಧ ಹಾಗೂ ಆಕ್ರಮಣಗಳು, ಯುಗೋಸ್ಲಾವಿಯಾದ ಮೇಲೆ ಧಾಳಿ...... ನಿಲ್ಲಿಸಿದಲ್ಲಿ ಮಾತ್ರವೇ ಭಾರತ-ಅಮೆರಿಕಾದ ಸಂಬಂಧಗಳು ಸುಧಾರಿಸಲು ಸಾಧ್ಯ. ಆದರೆ ಅಮೆರಿಕಾಕ್ಕೆ ಇದು ಬೇಕಿಲ್ಲ. ವಾಜಪೇಯಿ ಸರ್ಕಾರವೂ ಸಹ ಅಮೆರಿಕಾದ ಎದುರು ಹಲ್ಲುಗಿಂಜುತ್ತಾ ಸಿಟಿಬಿಟಿಗೆ ಸಹಿ ಹಾಕಲು ಹಾತೊರೆಯುತ್ತಿದೆ. ಅಮೇರಿಕಾದ ಅಡಿಯಾಳಾಗಲು ಯತ್ನಿಸುತ್ತಿದೆ. ಇದು ಖಂಡನೀಯ. ಈ ಹಿನ್ನೆಲೆಯಲ್ಲಿ ಸಿಪಿಐ(ಎಂ) ಜನರ ಆಗ್ರಹದ ಬೇಡಿಕೆಗಳ ಪಟ್ಟಿ ಮುಂದಿರಿಸಿದ್ದು, ಪ್ರತಿಭಟನೆ ನಡೆಸಲು ಕರೆ ನೀಡಿದೆ.

ತ್ರಿಪುರಾ:

ತ್ರಿಪುರಾದಲ್ಲಿ ಉಗ್ರಗಾಮಿಗಳ ಹಾವಳಿ ಮಿತಿ ಮೀರಿದೆ. ಜಿಲ್ಲಾ ಬುಡಕಟ್ಟು-ಗುಡ್ಡಗಾಡು ಮಂಡಳಿ ಚುನಾವಣೆಗಳೂ ಸಮೀಪಿಸುತ್ತಿವೆ. ಪರಿಸ್ಥಿತಿ ಸೂಕ್ಷ್ಮವಾಗುತ್ತಿದೆ. ಅಗತ್ಯವಾದ ಭದ್ರತಾ ಪಡೆಗಳನ್ನು ಕಳಿಸಲು ತ್ರಿಪುರಾ ಸರ್ಕಾರ ಕೋರಿದ್ದರೂ ವಾಜಪೇಯಿ ಸರಕಾರ ಬೇಕೆಂದೇ ನಿರ್ಲಕ್ಷಿಸುತ್ತಿದೆ. ಕೇಂದ್ರ ಗೃಹ ಸಚಿವರಿಗೆ ಹಲವು ಬಾರಿ ಮನವಿ ಮಾಡಿ ಸ್ಥಿತಿ ವಿವರಿಸಿದ್ದರೂ ಫಲಿತಾಂಶ ಮಾತ್ರ ಶೂನ್ಯ. ಉಗ್ರಗಾಮಿಗಳು ದೇಶದ ಗಡಿಯಾಚೆಯಿಂದ ಬೆಂಬಲ ಪಡೆಯುತ್ತಿದ್ದಾರೆ. ರಾಷ್ಟ್ರೀಯ ಭದ್ರತೆ ಸಮಗ್ರತೆ ದೃಷ್ಟಿಯನ್ನು ಪರಿಗಣಿಸದೇ ಬಿಜೆಪಿ ಸರಕಾರ ತಾರತಮ್ಯ ಧೋರಣೆ ಅನುಸರಿಸುತ್ತಿರುವುದು ಖಂಡನೀಯ. ಕೂಡಲೇ ರಾಜ್ಯ ಸರ್ಕಾರದ ಕೋರಿಕೆಯಂತೆ ಅಗತ್ಯವಾದ ಭದ್ರತಾಪಡೆ ಕಳುಹಿಸಬೇಕು.

ಪಕ್ಷದ ಕಾರ್ಯಕ್ರಮ: ಸೂಕ್ತರೀತಿಯಲ್ಲಿ ಪಕ್ಷದ ಕಾರ್ಯಕ್ರಮವನ್ನು ಸಿದ್ಧಪಡಿಸಲು ನಿರ್ಧರಿಸಿರುವ ಸಿಪಿಐ(ಎಂ) ಕರಡಿನ ಮೇಲೆ ಮೊದಲ ಹಂತದ ಚರ್ಚೆ ನಡೆಸಿದೆ. ಕರಡು ಅಂತಿಮಗೊಳಿಸಲು ಏಪ್ರಿಲ್ ಕೊನೆಯಲ್ಲಿ ಕೇಂದ್ರ ಸಮಿತಿ ಸೇರಲಿದೆ.

.... ದೇಶ ಮಾರುವ ದಲ್ಲಾಳಿ

ಪುಟ 5 ರಿಂದ

ಅಮೆರಿಕಾವು ತನ್ನ ಪಕ್ಕದಲ್ಲೇ ಇರುವ ಪುಟ್ಟ ಕ್ಯೂಬಾ ದೇಶ ಮೇಲೆ ಸತತವಾಗಿ 30 ವರ್ಷಗಳಿಂದ ದಿಗ್ಬಂಧನ ಹೇರಿದ್ದು, ಸಂಯುಕ್ತ ರಾಷ್ಟ್ರದ ಜನರಲ್ ಅಸೆಂಬ್ಲಿಯಲ್ಲಿ ಸತತವಾಗಿ ಅಮೆರಿಕಾದ ನಿಲುವಿಗೆ ಸೋಲಾಗುತ್ತಿದ್ದರು(ಕೇವಲ ಎರಡು ರಾಷ್ಟ್ರಗಳು ಮಾತ್ರ ಅಮೆರಿಕಾ ಪರ ಮತ ಹಾಕಿವೆ). ದಿಗ್ಬಂಧನವನ್ನು ಅಮಾನವೀಯವಾಗಿ ಮುಂದುವರಿಸಿದೆ. ಈಗ ಭಾರತಕ್ಕೆ ಕೇವಲ 1500 ಕಿ.ಮಿ. ದೂರದಲ್ಲಿರುವ ಡಿಗೋಗಾರ್ಸಿಯಾ ಎಂಬ ಪುಟ್ಟ ದ್ವೀಪದಲ್ಲಿ ತನ್ನ ಮಿಲಿಟರಿ ನೆಲೆಯನ್ನು ಸ್ಥಾಪಿಸಿಕೊಂಡಿದೆ, ಭಾರತದ ಯಾವುದೇ ಭಾಗವನ್ನು ತಲುಪಬಲ್ಲ ಕ್ಷಿಪಣಿಗಳನ್ನು ಈಗಾಗಲೇ ಇಲ್ಲಿ ಪೇರಿಸಲಾಗಿದೆ ಎಂದವರು ತಿಳಿಸಿದರು.

ಈ ರೀತಿಯ ಆರ್ಥಿಕ, ಮಿಲಿಟರಿ ದಾಳಿಗಳನ್ನು ಒಪ್ಪಿಕೊಳ್ಳಲು ನಾವಂತೂ ಮುಗ್ಧರೂ ಅಲ್ಲ, ಮೂರ್ಖರೂ ಅಲ್ಲ, ಆದರೆ ಬಿಜೆಪಿ ಸರ್ಕಾರವು ಭಾರತದ ಆರ್ಥಿಕ-ರಾಜಕೀಯ ಸಾರ್ವಭೌಮತೆಯನ್ನು ಬದಿಗೊತ್ತಿ, ಅಮೆರಿಕಾದ ಒತ್ತಡಗಳಿಗೆ ಒಂದೊಂದಾಗಿ ಮಣಿಯುತ್ತಿದೆ. ಜಸ್ವಂತ್ ಸಿಂಗ್ ಮತ್ತು ಸ್ಟ್ರೋಬ್ ಟಾಲ್ಬೋಟ್ ನಡುವೆ ಹತ್ತು ಸುತ್ತಿನ ಮಾತುಕತೆಗಳು ನಡೆದಿವೆ, ಆದರೆ ಇದನ್ನು [illegible] ಬಿಜೆಪಿ ಸರ್ಕಾರ ತಿಳಿಸಿಲ್ಲ, ಆದರೆ 3ನೇ ವ್ಯಕ್ತಿಯೊಬ್ಬರಿಂದ ನಾವಿದನ್ನು ತಿಳಿಯಬೇಕಾದ ದುರಂತ ಬಂದಿವೆ ಎಂದರು. ಅಧಿಕಾರಕ್ಕೆ ಬರುವ ಮೊದಲು ಸ್ವದೇಶಿ ಎನ್ನುತ್ತಿದ್ದ ಬಿಜೆಬಿ ಅಧಿಕಾರಕ್ಕೆ ಬಂದ ನಂತರ ವಿದೇಶಿಯಾಗಿದೆ, ಚಿದಂಬರಂರವರು ತಂದಿದ್ದ ಐಆರ್‌ಎ ಮಸೂದೆ ಯನ್ನು ಸಿಪಿಐ(ಎಂ) ಜೊತೆ ಸೇರಿ ವಿರೋಧಿಸಿದ್ದ ಬಿಜೆಪಿಯೇ ಈಗ ಮಸೂದೆ ಅಂಗೀಕರಿಸಿ, ಕೋಟ್ಯಾಂತರ ರೂ. ಕೊಳ್ಳೆ ಹೊಡೆಯಲು ಬಹುರಾಷ್ಟ್ರೀಯ ಕಂಪನಿಗಳಿಗೆ ಅವಕಾಶ ನೀಡಿದೆ ಎಂದರು.

ಈ ಕಾರ್ಯಕ್ರಮದ ಅಧ್ಯಕ್ಷತೆಯನ್ನು ಕಾಂ. ಸೂರಿ ವಹಿಸಿ ಮಾತನಾಡುತ್ತಾ, ಅತ್ಯಂತ ಭಾವೋದ್ವೇಗದಿಂದ ಮಾರ್ಚ್ 21 ರ ಬೆಂಗಳೂರು ಪ್ರತಿಭಟನೆಯನ್ನು ಯಶಸ್ವಿಗೊಳಿಸಲು ಮನವಿ ಮಾಡಿದರು, ಅಂದಿನ ಜನತೆ ಬ್ರಿಟಿಶ್ ವಸಾಹತು ಏಜೆಂಟ್ ಸೈಮನ್‌ನ್ನು 'ಗೋಬ್ಯಾಕ್' ಎಂದರೆ, ಇಂದಿನ ಜನತೆ 'ಕ್ಲಿಂಟನ್ ಗೋಬ್ಯಾಕ್' ಎಂದು ಹೇಳಬೇಕು ಎಂದರು.

ಕಾಂ. ಜಗನ್ನಾಥ್ ಸ್ವಾಗತಿಸಿದರೆ, ಕಾಂ. ಪ್ರಕಾಶ್.ಕೆ ವಂದಿಸಿದರು.

ವರದಿ **ಟಿ.ಎಲ್.ಕೃಷ್ಣೇಗೌಡ**

ಕಥೆ

ಹತ್ಯೆ

ಫಕೀರ್ ಮಹಮದ್ ಕಟ್ಪಾಡಿ

ಕಳೆದ ವಾರದ ಮುಂದುವರಿಕೆ

ಜಾನಕಿ ದನದ ಮೈಮುಟ್ಟಿ ಸವರುತ್ತಾ "ನಿಮ್ಮ ದನ ಎಷ್ಟು ಪಾಪ ಅಲ್ಲಾ..." ಅಂದ್ಲು. "ಹೌದು, ಉಮ್ಮ ಹೇಳುತ್ತಾಳೆ, ಸಣ್ಣ ಮಗು ಕೂಡ ತಂಬಿಗೆ ಹಿಡಿದು ಹಾಲು ಕರೆಯಬಹುದು. ನಮ್ಮ ದನ ಅಷ್ಟು ಪಾಪ" ಎಂದಳು ಪಾತುಮ್ಮ.

ಪಾತುಮ್ಮ ಅಪ್ಪ ಮತ್ತು ಕರೀಮ ಚೇಡಿನೀರನ್ನು ತಂದು ಗರಟೆಯ ಬಾಯಿಯನ್ನು ಅದರಲ್ಲಿ ಅದ್ದಿ ದನದ ಕಪ್ಪು ಮೈಮೇಲೆ ಉರುಟು ಉರುಟಾದ ಮುದ್ರೆಗಳನ್ನು ಮೂಡಿಸತೊಡಗಿದರು. ಕರೀಮ ತಂದೆಯಿಂದ ಕರಟೆಯನ್ನು ಕಿತ್ತುಕೊಂಡು ತಾನೂ ನಾಲ್ಕೈದು ಚಿತ್ತಾರಗಳನ್ನು ಮೂಡಿಸಿದ. ಮೈತುಂಬೆಲ್ಲ ಉರುಟು ಮುದ್ರೆಗಳನ್ನು ಹೊತ್ತ ದನ ವಿಚಿತ್ರ ರೀತಿಯಲ್ಲಿ ಕಂಗೊಳಿಸಿತು.

ಜನಕಿಗೆ ಮತ್ತೆ ಕೆಲವು ಸಂಶಯಗಳು ಮುತ್ತಿಕೊಂಡವು. ಅವಳು ಪಾತುಮ್ಮನನ್ನು ಕರೆದು "ಹೌದಾ ನಿನ್ನಪ್ಪನನ್ನು ಹಿಂದೊಮ್ಮೆ ಗೋಮಾಂಸ ಮಾರಾಟ ಮಾಡಿದ್ದಕ್ಕೆ ಪೋಲೀಸರು ಅರೆಸ್ಟ್ ಮಾಡಿ ಮಾಂಸದ ಬುಟ್ಟಿ ಹೊರಿಸಿ ರಸ್ತೆಯಲ್ಲಿ ಮೆರವಣಿಗೆ ಮಾಡಿದ್ದರಂತೆ" ಎಂದಳು. ಪಾತುಮ್ಮ ಮೂಕಳಂತೆ ಅವಳನ್ನು ಪಿಳಿಪಿಳಿ ನೋಡಿದಳು.

ಉಮ್ಮ ಮನೆಯೊಳಗಿಂದ ನಾಲ್ಕು ಅರಸಿನದೆಲೆಯ ಸಿಹಿಕಡುಬುಗಳನ್ನು ತಂದಳು. ಪಾತುಮ್ಮ ಕರೀಮ ಒಂದೊಂದನ್ನು ತೆಗೆದುಕೊಂಡು ದನಕ್ಕೆ ತಿನ್ನಿಸತೊಡಗಿದರು. ಜಾನಕಿ ಹೇಳಿದ ವಿಷಯ ಪಾತುಮ್ಮಳ ಕಿವಿಯನ್ನು ಕೊರೆಯುತ್ತಿತ್ತು. ಜಾನಕಿ ಹೇಳಿದ್ದರ ಬಗ್ಗೆ ಬಾಪಾನನ್ನು ಕೇಳಿದಳು. ಬಾಪಾನ ಮುಖದ ನಗೆ ಒಮ್ಮಿಂದೊಮ್ಮೆಗೆ ಮಾಯವಾಯಿತು. ಜಾನಕಿಯೊಂದಿಗೆ ಕೇಳಿದರು. "ನಿಂಗೆ ಯಾರಮ್ಮ ಹೇಳಿದ್ದು?" ಜಾನಕಿ ಹೇಳಿದ್ಲು "ನಮ್ಮಪ್ಪ.."

"ಹಾಂ...? ಹೌದು, ನಾನೊಬ್ಬ ಮಾರ್ಕೆಟ್ಟಿನಲ್ಲಿ ಸಾಹುಕಾರ ಕೊಡುವ ಸಂಬಳಕ್ಕೆ ಕೆಲಸ ಮಾಡುವ ಕಸಾಯಿ. ಮಾಂಸ ಮಾಡುವುದು, ಮಾರುವುದು ನನ್ನ ಕಸುಬು. ಆದರೆ ಮಕ್ಕಳಿಗೆ ಒಳ್ಳೆಯ ವಿಷಯಗಳನ್ನು ಹೇಳಿಕೊಡಬೇಕಾದ ಮೇಸ್ಟ್ರು ಕಸಾಯಿಯಾಗಕೂಡದು" ಎಂದರು ಬಾಪಾ. ಅವರು ಹೇಳಿದ್ದು ಜಾನಕಿಗಾಗಲಿ, ಪಾತುಮ್ಮಳಿಗಾಗಲೀ ಏನೆಂದು ಗೊತ್ತಾಗಲಿಲ್ಲ. ಪಾತುಮ್ಮನ ಮನಸ್ಸಲ್ಲಿ ಅಪ್ಪನ ತಲೆಯ ಮೇಲೆ ಮಾಂಸದ ಬುಟ್ಟಿ ಹೊರಿಸಿ ಮೆರವಣಿಗೆ ಮಾಡುವ ಚಿತ್ರ ಮೂಡಿಬಂತು. ಎಲ್ಲರೂ ನಗುತ್ತಿರುವಂತೆ, ಅಪ್ಪನ ತಲೆಯ ಬುಟ್ಟಿಯಿಂದ ನೆತ್ತರು ನೀರು ಇಳಿದು ಮುಖ ತುಂಬಾ ಹರಿದಂತೆ ಪೊಲೀಸರು ಲಾಟಿ ತಿರುಗಿಸಿದಂತೆ... ಪಾತುಮ್ಮ ಕ್ಷಣ ಭಯದಿಂದ ಕಂಪಿಸಿದಳು. ಉಮ್ಮಾ ಬನ್ನಿ ಮಕ್ಳೇ, ಕಡುಬು ತಿನ್ಲಿಕ್ಕೆ ಬನ್ನಿ.... ಎಂದು ಕೂಗಿ ಹೇಳಿದ್ಲು... ಪಾತುಮ್ಮ ಕನಸಿನಿಂದ ಬೆಚ್ಚಿ ಎದ್ದವಳು ವಾಸ್ತವಕ್ಕೆ ತಿರುಗಿದಳು, ಅಮ್ಮ ಮಾಡಿದ ಕಡುಬಿನ ನೆನಪು ಬಂದು ತಿನ್ನಲು ಜಾನಕಿಯನ್ನು ಕರೆದಳು. ಜಾನಕಿ ನಿಲ್ಲಲಾ ಹೋಗಲಾ ಎನ್ನುವ ಸಂದಿಗ್ಧಕ್ಕೆ ಬಂದಳು. "ಅಂದು ನಿನ್ನ ಮನೆಯಲ್ಲಿ ಕೊಟ್ಟರಲ್ಲ ಅದೇ ಕಡುಬು. ಮಾಂಸದ್ದೇನಲ್ಲ..." ಎಂದು ಪಾತುಮ್ಮ ಹೇಳಿದಳು. ಕ್ಷಣ ಹೊತ್ತು ಸುಮ್ಮನಿದ್ದು "ಮತ್ತೆ ಬರುತ್ತೇನೆ..." ಎಂದು ತನ್ನ ಮನೆ ಕಡೆ ಓಡಿದಳು.

ಕಡುಬು ಕೊಡುತ್ತಾ ಉಮ್ಮ ಪಾತುಮ್ಮನೊಂದಿಗೆ "ಮೇಸ್ಟ್ರ ಮಗಳು ಹೋದ್ಲಾ...?" ಅಂದ್ಲು, ಹೌದೆಂದು ಪಾತುಮ್ಮ ತಲೆಯಾಡಿಸುವಾಗ, ಬಾಪಾ ಹೇಳಿದರು "ಅವ್ರು ನಮ್ಮ ಮನೆಯ ತಿಂಡಿ ತಿನ್ನೋದಿಲ್ಲ.." ತಿಂಡಿತಿಂದು ಮುಗಿಸುವಾಗ ಪಾತುಮ್ಮ ಕೇಳಿದ್ಲು "ಜಾನಕಿಯ ಅಪ್ಪ ಹೇಳಿದ್ರಂತೆ. ಅವ್ರೆಂತ ದನ ತಿನ್ನುವವರು ಗೋಪೂಜೆ ಮಾಡುವುದು ಅಂತ. ನಾವು ದನವನ್ನು ಚೆಂದ ಮಾಡ್ಬಾರ್ದಾ?" ಬಾಪಾ ಸುಮ್ಮನಿದ್ದರು. "ಹಾಗೆ ಹೇಳಿದ್ರೆ ಸಸ್ಯಗಳಿಗೂ ಜೀವವಿದೆ- ಅವು ಹುಟ್ಟುತ್ತವೆ, ಸಾಯುತ್ತವೆ; ಉಸಿರಾಡುತ್ತವೆ, ಚಲಿಸುತ್ತವೆ. ಅವುಗಳು ಪ್ರಾಣಿಗಳಂತೆ ಕೂಗುವುದಿಲ್ಲ ಅಷ್ಟೇ. ಕುರಾನಿನಲ್ಲಿ ಹೇಳುವಂತೆ, ಅವೂ ಅಲ್ಲಾಹನ ಇಬಾದತ್ ಮಾಡುತ್ತವೆ ಅಲ್ವಾ? ಅವುಗಳನ್ನು ತಿನ್ನುವವರೇ ಅಲ್ವಾ, ಅವನ್ನು ಬಿತ್ತಿ ಬೆಳೆಸುವುದು...?" ಅಂತ ಉಮ್ಮ ಬಾಪಾನೊಂದಿಗೆ ಕೇಳಿದಳು. "ನಾವೇನು ಹೇಳಿದ್ರೂ ಅದನ್ನು ಯಾರೂ ಕೇಳುವ ಸ್ಥಿತಿಯಲ್ಲಿಲ್ಲ... ಒಪ್ಪಿದ್ರೆ ನಾವು ಬದುಕಬೇಕು... ನೋಡು..." ಎಂದರು ಬಾಪಾ. "ಉಮ್ಮ ಅವರೆಲ್ಲ ತಮಾಷೆ ಮಾಡುತ್ತಾರೆ. ನಾವು ದನದ ಮಾಂಸ ತಿನ್ನೋದು ಬೇಡ.." ಎಂದಳು ಪಾತುಮ್ಮ. ಕರೀಮ ಕಡುಬನ್ನು ಬಿಡಿಸಿ ಹೂರಣವನ್ನು ತಿನ್ನುವುದರಲ್ಲಿ ಬಿದ್ದಿದ್ದ. ಉಮ್ಮ ಹೇಳಿದ್ಲು "ಹೌದು ದನದ ಮಾಂಸ ತಿನ್ನೋದು ಬೇಡಾ ಬಿಡುವಾ. ಈ ಕೋಳಿ, ಆಡಿನ ಮಾಂಸದ ಕ್ರಯ ಎಷ್ಟು ಗೊತ್ತುಂಟಾ ನಿಂಗೆ..? ಶ್ರೀಮಂತರಿಗೆ ಮಾತ್ರ ಅದನ್ನ ಕೊಂಡುಕೊಳ್ಳಕ್ಕೆ ಸಾಧ್ಯ. ನಮ್ಮಂಥ ಬಡವರಿಗೆ ದನದ ಮಾಂಸವೇ ಗತಿ."

"ನಮಗೂ ಶ್ರೀಮಂತಿಕೆ ಬರುತ್ತಿದ್ರೆ; ಬಾಪಾನ ಕೈತುಂಬ ಹಣ ಇರ್ತಿದ್ರೆ; ಬಾಪಾ ಮಾರ್ಕೆಟ್ಟಿನಲ್ಲಿ ಮಾಂಸ ಕೊಯ್ಯುವ ಕೆಲಸ ಮಾಡಬೇಕಾಗಿರಲಿಲ್ಲ. ಜಾನಕಿ ನಮ್ಮ ಮನೆಯ ಕಡುಬು ತಿನ್ನುತಿದ್ಲು" ಎಂದಳು ಪಾತುಮ್ಮ.

ಬಾಪಾ ಜೋರಾಗಿ ನಿಟ್ಟುಸಿರೊಂದನ್ನು ಬಿಟ್ಟರು.

"ಬಾಪಾ ಮಾರ್ಕೆಟ್ಟಿನಲ್ಲಿ ಮಾಂಸ ಕೊಯ್ಯುವ ಕೆಲಸ ಮಾಡುತ್ತಿರುವುದು ಕೆಟ್ಟ ಕೆಲಸ ಅಂತ ತಿಳಿದಿದ್ದಿಯಾ ಮೋಳೆ? ಜಾನಕಿಯ ಅಪ್ಪ ಮೇಷ್ಟ್ರ ಕೆಲಸ ಮಾಡುವ ಹಾಗೆಯೇ ನಂದು ಕಸಾಯಿ ಕೆಲಸ. ಯಾವುದೇ ಕೆಲಸ ಆದ್ರೂ ಕೆಲ್ಸ ಕೆಲ್ಸವೇ. ಕದಿಯುವುದು, ಮೋಸ ಮಾಡುವುದು ಮಾತ್ರ ಕೆಟ್ಟ ಕೆಲಸ" ಎಂದರು ಬಾಪಾ.

"ಮತ್ಯಾಕೆ ಬಾಪಾ ನಿಮ್ಮನ್ನು ಪೊಲೀಸಿನವ್ರು ಅರೆಸ್ಟ್ ಮಾಡಿ ಮೆರವಣಿಗೆ ಮಾಡಿದ್ದು? ಎಂದು ಪಾತುಮ್ಮ ಬಾಪಾನ ಮುಖವನ್ನೇ ನೋಡುತ್ತಾ ಕೇಳಿದಳು.

"ನಾವು ಈ ದೇಶಕ್ಕೆ ಸೇರಿದವ್ರು. ಈ ದೇಶದ ಕಾನೂನಿನ ಪ್ರಕಾರ ನಾವು ನಡೆಯಬೇಕು, ಪಾಲಿಸ್ಬೇಕು ನೋಡು. ನಾನಂದು ತಪ್ಪು ಮಾಡಿದ್ದೆ. ಸರಕಾರದ ಲೈಸನ್ಸು ಇಲ್ಲದೆ ಮಾಂಸ ಮಾರಿದ್ದೆ..." ಎಂದರು ಬಾಪಾ.

"ಅಲ್ಲಾ... ನಾವು ಉಣ್ಣುವುದು, ತಿನ್ನೂದಕ್ಕೂ ಒಂದು ಕಾನೂನಾ...?" ಎಂದು ಉಮ್ಮ ಕೇಳಿದ್ಲು.

"ಹಾಗೆಯೇ ಹೇಳಿ ಅಲ್ವಾ ಆ ದಿವ್ಸ ಪೊಲೀಸ್ ಸ್ಟೇಶನಿನಿಂದ ಜಾಮೀನು ಕೊಟ್ಟು ನನ್ನನ್ನು ಬಿಡ್ಸಿಕೊಂಬಂದು ಯೂಸುಫು, ಕಾದ್ರಿ ಎಲ್ಲ ಗಲಾಟೆ ಮಾಡಿದ್ದು ಮಸೀದಿಯಲ್ಲಿ? ಸಾವುಕಾರ್ ಹಾಜಿ ಏನು ಹೇಳಿದ್ರು ಗೊತ್ತಾ? ಇಂತಹ ಸಣ್ಣ ವಿಷಯಕ್ಕೆ ನಾವು ಗಲಾಟೆ ಮಾಡಿದ್ರೆ ಸಾಯೋದು ನಾವು ಅಂದ್ರು. ಯೂಸುಫು ಸತ್ರೆ ಸಾಯ್ಲಿ, ನ್ಯಾಯಕ್ಕಾಗಿ ಸಾಯುದಲ್ವಾ? ಅಂದ. ಅದಕ್ಕೆ ಸಾಹುಕಾರ್ ಹಾಜಿಯವ್ರು, ನೀವೆಲ್ಲ ಸಾಯುವುದಕ್ಕೆ ಹುಟ್ಟಿದೋರು. ನಾವು ಬದುಕಬೇಕಲ್ವಾ? ಗಲಾಟೆ ಮಾಡಿ ಊರೆಲ್ಲ ಗಲಭೆಯಾದ್ರೆ ನಿಮ್ಮ ಗುಡಿಸಲಿಗೆ ಬೆಂಕಿ ಬಿದ್ರೆ ಹೆಚ್ಚೆಂದರೆ ಸಾವಿರ ರೂಪಾಯಿ ಲಾಸ್ ಆಗ್ಬೋದು. ನಮ್ ಬಂಗಲೆಗೆ, ಗೋದಾಮಿಗೆ ಬೆಂಕಿ ಬಿದ್ರೆ ಲಕ್ಷಾಟ್ಲೆ ರೂಪಾಯಿ ಲಾಸ್ ಆದರೆ ಯಾರು ಕೊಡೋರು ಅಂತ ಸಿಟ್ಟಿನಿಂದ ಹೇಳಿದ್ರು... ಹೋಗ್ಲಿ ಬಿಡು ಎಂತದೇ ಆಗ್ಲಿ ನಾವು ಇನ್ನೊಬ್ರನ್ನ ನೋಯಿಸಕೂಡ್ದೂ. ಅಲ್ಲಾಹ ಮೆಚ್ಚುದಿಲ್ಲ..." ಎಂದರು ಬಾಪಾ.

"ನಿನ್ನ ಬಾಪಾನ ಮಾತು ಕೇಳಿದ್ರೆ ಎಲ್ಲೋ ಮೈಲಾರ್ ಆಗ್ಬೇಕಿದ್ದೋರು ತಪ್ಪಿ ಕಸಾಯಿ ಆಗಿದ್ದಾರೆ.... ಅನ್ನಿಸ್ತದೆ" ಎಂದು ಉಮ್ಮ ಪಾತುಮ್ಮನನ್ನು ನೋಡಿ ನಕ್ಕಳು. ಪಾತುಮ್ಮನೂ ಉಮ್ಮನ ತಮಾಷೆಗೆ ನಕ್ಕಳು.

ಕರೀಮ ಕಡುಬು ತಿಂದು ಮುಗಿಸಿ ಲೋಟದ ನೀರನ್ನು ಎತ್ತಿ ಕುಡಿದ. ಅರ್ಧ ನೀರು ನೆಲಕ್ಕೆ, ಅರ್ಧ ಹೊಟ್ಟೆಗೆ ಅವನಿಗೆ ಬಾಪಾ ಲೋಟ ಸರಿಯಾಗಿ ಹಿಡಿದು ನೀರು ಕುಡಿಯಲು ಕಲಿಸಿದರು.

ತಿಂಡಿ ತಿಂದ ಪಾತ್ರೆಗಳನ್ನು ಎತ್ತುತ್ತಾ ಉಮ್ಮ ಪಾತುಮ್ಮನೊಂದಿಗೆ ಹೇಳಿದಳು: "ಬಾಪಾನಿಗೆ ಡಾಕ್ಟ ಹತ್ತಿರ ಹೋಗಿ ಮದ್ದು ತರಬೇಕು. ಜ್ವರ ಸ್ವಲ್ಪ ಕಮ್ಮಿಯಾಗಿದೆ. ಅಂತ ಹೇಳು." ಶಾಲೆಗೆ ರಜಾ ದಿನವಾದ್ದರಿಂದ ಪಾತುಮ್ಮನಿಗೆ ಸಿಂಗರಿಸಿದ ದನವನ್ನು ಬಯಲಿಗೆ ಮೇಯಿಸಲಿಕ್ಕೆ ಕೊಂಡೊಯ್ಯುವ ಹುಮ್ಮಸ್ಸು. ಉಮ್ಮ ಆಗಲೇ ಔಷಧಿ ಬಾಟ್ಲಿ ಮತ್ತು ಐದು ರೂಪಾಯಿ ಅವಳ ಮುಂದಿಟ್ಟಿದ್ದಳು. ಪಾತುಮ್ಮ ಬೇರೆ ದಾರಿ ಕಾಣದೆ ವೈದ್ಯರ ಬಳಿಗೆ ಹೋದಳು.

ಆಗ್ಲೇ ಜನ ಬಾಟ್ಲಿ ಹಿಡ್ಕೊಂಡು ಬಂದು ಕೂತಿದ್ರು. ಪಾತುಮ್ಮ ಕೂತು ಚಡಪಡಿಸಿದ್ದಳು. ಗೋಡೆಗೆ ನೇತು ಹಾಕಿದ ಬೋರ್ಡಿನ ಅಕ್ಷರಗಳನ್ನು ಜೋಡಿಸುತ್ತಾ ಓದಿದಳು -ಡಾ. ಕೃಷ್ಣಪ್ಪಯ್ಯ ಎಂ.ಬಿ.ಬಿ.ಎಸ್. ಕಂಪೌಂಡರ್ ಹುಡುಗ ಒಬ್ಬೊಬ್ಬರನ್ನೇ ಒಳಗೆ ಕಳುಹಿಸುತ್ತಿದ್ದ. ಎರಡು ಮೂರು ಮಂದಿಯನ್ನು ಕಳುಹಿಸುವಾಗ ಎಡೆಯಲ್ಲಿ ಪಾತುಮ್ಮನೂ ನುಸುಳಿದಳು. ಹುಡುಗ ಗೊಣಗಿದ "ಎಷ್ಟು ಹೇಳುವುದು ಈ ಜನಗಳಿಗೆ." ಪಾತುಮ್ಮಳ ಕಣ್ಣು ತುಂಬೆಲ್ಲ ಹೂಮಾಲೆ ಹಾಕಿದ ದನವೇ ನಿಂತುಕೊಂಡಿತ್ತು. ಗೋಮಾಳಕ್ಕೆ ಮೇಯಿಸಲು ಕೊಂಡು ಹೋಗಬೇಕು. ಕಲ್ಯಾಣಿ, ತುಬುರ, ತನಿಯ, ಮಿಂಗು ಆಗ್ಲೇ ದನಗಳನ್ನು ತಂದಿರಬೇಕು. ಎಷ್ಟೊತ್ತು ಈ ಡಾಕ್ಟನ್ನು ಕಾಯೂದಪ್ಪಾ.

"ಇಲ್ಲ ನೀನು ಈ ಕಾಯಿಲೆ ಗುಣ ಆಗ್ಬೇಕಿದ್ರೆ ಸರೀ ತಿನ್ಬೇಕು. ಮಾಂಸ, ಮೊಟ್ಟೆ ತಿನ್ಲೇಬೇಕು. ಜೊತೆಗೆ ತೊಂಭತ್ತು ಇಂಜೆಕ್ಷನು ಆಗ್ಬೇಕು. ಸಣ್ಣ ಕಾಯಿಲೆಯಲ್ಲ ಇದು. ಶ್ವಾಸಕೋಶದ್ದು ಟಿ.ಬಿ." ಡಾಕ್ಟರರ ಧ್ವನಿ ಕೋಣೆಯೊಳಗಿಂದ.

"ನಾನು ತಿನ್ತಾ ಇದ್ದೇನೆ. ಆದ್ರೆ ನೀವ್ಹೇಳಿದಾಗೆ ತಿನ್ಲಿಕ್ಕೆ ಹಣಕ್ಕೆಲ್ಲಿ ಹೋಗ್ಲಿ. ಆಡಿನ ಮಾಂಸಕ್ಕೆ 36 ರೂಪಾಯಿ" ಎಂದಿತೊಂದು ಸ್ವರ.

"ನೋಡು ದನದ ಮಾಂಸ ಒಗ್ಗಿದರೆ ತಿನ್ನು. ಅದು ಕಡಿಮೆ ಬೆಲೆಗೆ ದೊರೆಯುತ್ತದೆ. ನಿನ್ನ ಸೀಕಿಗೆ ಅದು ಬಹಳ ಒಳ್ಳೆಯದು. ಮತ್ತೆ ಆಡಿನ ಕಾಲಿನ ಸೂಪು ಮಾಡಿ ಕುಡಿ. ಅದು ಅಗ್ಗದ್ದು.." ಡಾಕ್ಟರರ ಮಾತು ಕೇಳುತ್ತಾ ನಿಂತ ಪಾತುಮ್ಮ ಮತ್ತಷ್ಟು ಅಸಹನೆಗೊಂಡಳು. ಕೋಣೆಯೊಳಗೆ ನುಗ್ಗಿಬಿಟ್ಟಳು.

ಅದೇನೋ ಚೀಟಿ ಬರೆಯುತ್ತಿರುವ ಡಾಕ್ಟರ ಮುಖದಲ್ಲಿ ಕೋಪ ಮೂಡುವುದನ್ನು ಗಮನಿಸದ ಪಾತುಮ್ಮ "ಅಪ್ಪನಿಗೆ ಜ್ವರ ಕಡಿಮೆಯಾಗಿದೆ. ಜುಲಾಬು ನಿಂತಿದೆ, ಕೆಮ್ಮು ಸ್ವಲ್ಪ ಇದೆ. ಎದ್ದು ನಡೆಯುತ್ತಿದ್ದಾರೆ. ವಾಂತಿ ಎಲ್ಲ ನಿಂತಿದೆ" ಎಂದು ಚೀಟಿ ಬರೆದುಕೊಟ್ಟರು. ಚೀಟಿ ತಂದು ಕಂಪೌಂಡರಲ್ಲಿ ಕೊಡುವಾಗ "ಒಂದು ಶಿಸ್ತಿಲ್ಲ ಈ ಊರಿನ ಜನಗಳಿಗೆ" ಎಂದು ಗೊಣಗುತ್ತಲೇ ಔಷಧಿ ಮಾತ್ರೆಗಳನ್ನು ಕೊಟ್ಟ. ಹಣ ಕೊಟ್ಟು ಪಾತುಮ್ಮ ಅವುಗಳನ್ನು ಹಿಡಿದುಕೊಂಡು ಮನೆ ಕಡೆ ಓಡಿದಳು.

ಉಮ್ಮನ ಕೈಗೆ ಔಷಧಿ, ಮಾತ್ರೆ ಮತ್ತು ಚಿಲ್ಲರೆ ಹಣವನ್ನು ಕೊಟ್ಟು ಪಾತುಮ್ಮ "ದನವನ್ನು ಮೇಯಿಸಲಿಕ್ಕೆ ಕೊಂಡು ಹೋಗ್ಲಾ ಉಮ್ಮ...?" ಅಂತ ಕೇಳಿದ್ಲು. "ನಿಂಗೆ ಶಾಲೆಗೆ ರಜೆಯಾದ್ರೆ ನನ್ನ ತಲೆ ತಿಂದು ಬಿಡ್ತಿಪ್ಪಾ.. ನೀನೀಗ ದನ ಮೇಯಿಸಲಿಕ್ಕೆ ಅಂತ ಕೊಂಡು ಹೋಗಿ ಎಲ್ಲಾದ್ರು ಆಡ್ತಾ ಕೂತ್ರೆ ದನ ಎಲ್ಲಾದ್ರೂ ಹೋಗಿ ಅಯ್ಯನವರ ತೋಟಕ್ಕೆ ನುಗ್ಗಿ ಬಿಟ್ರೆ ಅವ್ರು ಕೊಂಡೋಗಿ ದೊಡ್ಡಿಗೆ ಕಟ್ಟಿ ಬಿಡ್ತಾರೆ... ಮೊನ್ನೆ ಅಯ್ಯ ಇನ್ನೆಲ್ಲಿಯಾದ್ರು ದನಗಳು ತೋಟಕ್ಕೆ ನುಗ್ಗಿದ್ರೆ ಅದರ ಕಾಲು ಕಡ್ದಾಕು. ದೊಡ್ಡಿಗೆ ಕಟ್ಟಿ ಸಾಕಾಯ್ತು ಅಂತ ಬೀರನಿಗೆ ಹೇಳ್ತಾ ಇದ್ರು" ಅಂತ ಉಮ್ಮ ಹೇಳುವಾಗ ಬಾಪಾ ಅಲ್ಲಿಗೆ ಬಂದವ ಹೇಳಿದ. "ಮತ್ತೆಂತ ಮಾಡೂದು ಅವ್ರು? ವರ್ಷಗಟ್ಲೆ ತನ್ನ ಮಕ್ಕ ಹಾಗೆ ಜೋಕೆಯಿಂದ ಸಾಕಿದ ಸಸಿಗಳನ್ನು ಒಂದೇ ಪಟ್ಟಿಗೆ ದನಗಳು ನಿಸಂತನ ಮಾಡುವಾಗ ಹೊಟ್ಟೆಗೆ ಬೆಂಕಿ ಹಚ್ಚಿದಂತಾಗ್ತದಾ ಇಲ್ವಾ"

ಪಾತುಮ್ಮ ಮತ್ತೆ ಕುಸುಕುಸು ಮಾಡಿದ್ಲು. ತಾನು ಹೇಳುತ್ತಿರೋದೊಂದು ಈ ಬಾಪಾ ಉಮ್ಮ ಮಾತಾಡುತ್ತಿರೋದೇ ಇನ್ನೊಂದು. "ಉಮ್ಮ... ನಾನು ಜಾಗ್ರತೆಯಿಂದ ನೋಡಿಕೊಳ್ಳುತ್ತೇನೆ" ಎಂದು ಹಟ ಹಿಡಿದಳು.

"ಕೊಂಡೋಗ್ಲಿ ಬಿಡು, ಗೋಮಾಳಕ್ಕೆ ಬಹಳಷ್ಟು ದನಗಳು ಬರ್ತಾವೆ. ಹುಡುಗ್ರು ಇರ್ತಾರೆ ದನಕ್ಕೂ ಹಬ್ಬದ ದಿವ್ಸ ಕಾಲಾಡಿಸಿದ ಹಾಗಾಗುತ್ತದೆ" ಎಂದು ಬಾಪಾ ಪಾತುಮ್ಮನ ಪರವಾದಿಸಿದ.

"ನಂಗೇನಂತೆ.... ಏನಾದ್ರೂ ಹೆಚ್ಚು ಕಮ್ಮಿ ಆದ್ರೆ ನಂಗೊತ್ತಿಲ್ಲ. ಗಬ್ಬದ ಹಸು ಬೇರೆ. ನೀವುಂಟು, ನಿಮ್ಮ ಮಗಳುಂಟು" ಎಂದು ಉಮ್ಮ ಸಿಡುಕುತ್ತಲೆ ಒಪ್ಪಿಗೆ ನೀಡಿದಳು.

ಬಾಪಾ ದನಕ್ಕೆ ಕಟ್ಟಿದ ಹಗ್ಗ ಬಿಚ್ಚಿಕೊಟ್ಟರು. ಕರೀಮ ನಾನು ಬರ್ತೇನೆ ಅಂತ ಕೂಗತೊಡಗಿದ. "ಪಾತುಮ್ಮ... ಮಗುವನ್ನೂ ಕರ್ಕೊಂಡು ಹೋಗೇ..." ಎಂದು ಉಮ್ಮ ಕೂಗಿ ಹೇಳಿದ್ರು.

ಕರೀಮ ಕೈಗೆ ಸಿಕ್ಕಿದ ಅಂಗಿಯನ್ನು ತೊಟ್ಟು ಹೊರಟ. ಪಾತುಮ್ಮ ಸಿಡುಕುತ್ತಲೇ ಅವನನ್ನು ಸೇರಿಸಿಕೊಂಡಳು. ಮುಂದೆ ದನ, ಹಿಂದೆ ದನದ ಹಗ್ಗ ಹಿಡಿದ ಪಾತುಮ್ಮ ಅದಕ್ಕೂ ಹಿಂದೆ ಪುಟ್ಟ ಪುಟ್ಟ ಹೆಜ್ಜೆ ಹಾಕುತ್ತ ಅದು ಇದು ಕೇಳುತ್ತಾ ಹೋಗುವ ಕರೀಮ. ಗೋಮಾಳಕ್ಕೆ ಪುಟ್ಟ ಸವಾರಿ ಹೊರಟಿತು.

ಮಧ್ಯಾಹ್ನ ದಾಟಿ ಮೂರು ಗಂಟೆಯಾದ್ರು ಮಕ್ಕಳು ಹಿಂತಿರುಗದಿರುವುದು ಕಾಣದೆ ಪಾತುಮ್ಮಳ ಉಮ್ಮ ಗಾಬರಿಗೊಂಡಳು. ಬಾಪಾ ಕಸಾಯಿ ಕಾದ್ರಿ ಜ್ವರದಿಂದ ಬಳಲಿದ್ದರಿಂದ ನಿದ್ರೆಯಲ್ಲಿದ್ದ. "ನೋಡಿ ಮಕ್ಕಳಿನ್ನೂ ಬಂದಿಲ್ಲ. ಊಟಕ್ಕೆ ಕೂಡಾ ಬಂದಿಲ್ವಲ್ಲಾ" ಎನ್ನುತ್ತಾ ಗಂಡನನ್ನು ಎಬ್ಬಿಸಿದಳು. ಕಾದ್ರಿ ಎದ್ದು ಕೂತು ಕೇಳಿದ. "ಗಂಟೆ ಎಷ್ಟು?" "ಮೂರು ಗಂಟೆ ದಾಟಿದೆ" ಎಂದಳು.

"ಮಕ್ಕಳು ತಡವಾಗಿ ತಿಂಡಿ ತಿಂದಿದ್ದಾವಲ್ಲಾ. ಆಟ ಆಡುತ್ತಿರಬೇಕು. ಬಂದಾರು ಗಾಬರಿ ಯಾಕೆ?" ಎಂದ ಕಾದ್ರಿ.

"ನಂಗೆ ಗಾಬರಿ ಮಕ್ಕಳದ್ದಲ್ಲ, ದನದ್ದು, ಎಲ್ಲಿಯಾದರೂ ಹಗ್ಗ ಕಿತ್ತುಕೊಂಡು ಅಯ್ಯನ ತೋಟಕ್ಕೆ ನುಗ್ಗಿದರೆ? ಅವರು ಕೊಂದು ಬಿಡುವುದಕ್ಕೂ ಹೇಸದ ಜನ. ಆಗ್ಲೇ ಕೆಲಸದಾಳಿಗೆ ಹೇಳಿಬಿಟ್ಟಿದ್ದಾರಂತೆ. ನಮ್ಮದು ಗಬ್ಬದ ಹಸು" ಉಮ್ಮನ ದನಿ ನಡುಗುತ್ತಿತ್ತು.

"ಇಷ್ಟೆಲ್ಲಾ ಗಾಬರಿ ಪಡಬೇಕಾದ ಅವಶ್ಯಕತೆ ಇಲ್ಲ. ಈವತ್ತು ಹಿಂದುಗಳು ಗೋಪೂಜೆ ಮಾಡೋ ದಿನ. ಆ ದಿನ ಯಾರಾದರೂ ಹಿಂದುಗಳು ದನಗಳಿಗೆ ಹೊಡೆದಾರೇ? ಸುಮ್ಮನೆ ಮಕ್ಕಳು ಆಟ ಆಡ್ತಿರಬಹುದು. ಹೇಗೂ ಶಾಲೆಗೆ ರಜ ಅಲ್ವಾ. ಬೇರೆ ಮಕ್ಕಳು ಬಂದಿರಬಹುದು" ಎಂದು ಸಮಾಧಾನ ಮಾಡಿದ ಗಂಡ.

"ಅಂದು ಗೋಪೂಜೆಯ ಮರುದಿನ ಅಲ್ವೇ. ಯೂಸುಫನ ದನದ ಕಾಲನ್ನು ಕಡಿದು ಹಾಕಿದ್ದು ಅಯ್ಯನ ತೋಟದಾಳು? ಅದಿನ್ನು ಬದುಕಿಯೇನು ಪ್ರಯೋಜನ ಅಂತ ಯೂಸುಫ ಬಂದು ನಿಮ್ಮನ್ನು ಕರಕೊಂಡು ಹೋಗಿ ಮಾಂಸ ಮಾಡಿದ್ದು? ಅಯ್ಯನವರೇ ಯಾರನ್ನೋ ಕಳ್ಸಿ ಪೊಲೀಸರನ್ನು ಕರ್ಸಿ ನಿಮ್ಮನ್ನು ಅರೆಸ್ಟ್ ಮಾಡ್ಸಿದ್ದು?" ಎಂದು ಉಮ್ಮ ಗಾಬರಿಯ ದನಿಯಲ್ಲಿ ನೆನಪಿಸಿದಾಗ, ಕಾದ್ರಿ ನಕ್ಕ.

"ಅದೆಲ್ಲಾ ಆದದ್ದು ಆಯ್ತು ನೋಡು. ಹಳೆಯದನ್ನ ನೆನಸಿಕೊಂಡು ಈಗ ರಕ್ತ ಕುದಿಸಿಕೊಂಡರೆ ಏನಾಗುತ್ತದೆ? ಇಲ್ಲ ಈಗೆಲ್ಲಾ ಬದಲಾವಣೆಯಾಗಿದೆ. ಆದೇ ಅಯ್ಯನವರ ಮಗ ಡಾಕ್ಟ್ರು ಆಗಿದ್ದಾರೆ. ಅವರು ಟಿ.ಬಿ. ಆದವರಿಗೆ ದನದ ಮಾಂಸತಿನ್ನು ಅಂತ ಹೇಳ್ತಿದ್ದಾರಂತೆ. ಹಾಗೆ ನೋಡಿದ್ರೆ ಯೂಸುಫನ ಮಗ ರಹೀಮು ಗೋಡಾಕ್ಟ್ರು ಆಗಿಲ್ಲವೆ? ಅಯ್ಯನವರ ದನಗಳಿಗೆ ಕಾಯಿಲೆಯಾದಾಗ, ಅವನನ್ನೇ ಮನೆಗೆ ಕರೆದಿರುವುದು" ಎಂದು ಮತ್ತೆ ಹೆಂಡತಿಯನ್ನು ಸಮಾಧಾನಪಡಿಸಿದರೂ, ಒಳಗೊಳಗೆಯೇ ಮಕ್ಕಳು ಬಾರದಿದ್ದಕ್ಕೆ ಭಯ ಸಂಶಯಗಳು ಅವನನ್ನು ಮೆಲ್ಲನೆ ಮುತ್ತತೊಡಗಿದವು.

ಉಮ್ಮ ಅಡುಗೆ ಕೋಣೆಯೊಳಗೆ ಹೋಗಿ ರಾತ್ರಿ ಊಟದ ತಯಾರಿಯಲ್ಲಿ ತೊಡಗಿದಳು. ಆದರೂ ತಲೆಯ ತುಂಬಾ ಗಬ್ಬದ ಹಸು ಹೇಗಿದೆಯೋ ಮಕ್ಕಳೇನು ಮಾಡ್ತಾರೋ ಅನ್ನುವ ಆತಂಕ ತುಂಬಿತು.

ಸಂಜೆ ನಾಲ್ಕು ಗಂಟೆಯಾದ್ರು ಮಕ್ಕಳು ಬಾರದಿದ್ದುದು ಕಂಡು ಇಬ್ಬರೂ ಗಾಬರಿಯಾದ್ರು. ಕಾದ್ರಿ ಅಂಗಿ ಹಾಕಿಕೊಂಡು ಹೊರಟಾಗ "ನಾನೂ ಬರುತ್ತೇನೆ. ನಿಮ್ಗೆ ಜ್ವರ ಬರ್ತಿದೆ. ಎಲ್ಲಾದ್ರು ನಡೆವಾಗ ತಲೆ ತಿರುಗಿ ಬಿದ್ರೆ?" ಎಂದು ಉಮ್ಮ ಕೂಡಾ ತಲೆಗೆ ಸೆರಗೆಳೆದು ಹಿಂದೆಯೇ ಹೊರಟಳು. ಗೋಮಾಳದಲ್ಲಿ ಮಕ್ಕಳ ಪತ್ತೆ ಇರಲಿಲ್ಲ. ಕಾದ್ರಿ "ಪಾತುಮ್ಮ...." ಎಂದು ಕೂಗಿದ. ಧ್ವನಿ ಎತ್ತರಿಸಿ ಕೂಗಿದ್ದರಿಂದ ಎರಡು ಬಾರಿ ಕೆಮ್ಮಿದ. ಉಮ್ಮನೂ ಕೂಗಿ ಕರೆದಳು. ಎಲ್ಲೂ ಉತ್ತರವಿಲ್ಲ. ಮಕ್ಕಳೆಲ್ಲಿ ಹೋದ್ರಪ್ಪಾ!

ಹುಡುಕುತ್ತಾ ಕಾಲುಗಳು ಅವರಿಗರಿವಿಲ್ಲದಂತೆಯೆ ಅಯ್ಯನವರ ತೋಟದ ಕಡೆ ಹೊರಳಿದವು. ದನ ಮಕ್ಕಳ ಕೈ ತಪ್ಪಿಸಿ ಅಯ್ಯನವರ ತೋಟದೊಳಕ್ಕೆ ನುಗ್ಗಿದ ಹಾಗೆ... ತೋಟದಾಳು ಅದನ್ನು ಓಡಿಸಿ ಕಡಿದು ಹಾಕಿದ ಹಾಗೆ... ದನದ ಶವದ ಮುಂದೆ ಕೂತು ಮಕ್ಕಳು ಅನ್ನ ನೀರು ಬಿಟ್ಟು ಅಳುತ್ತಿರುವ ಹಾಗೆ ಕಣ್ಣ ಮುಂದೆ ಮೂಡಿ ಉಮ್ಮ ಭಯದಿಂದ ಕಂಪಿಸಿದಳು. ನಡುಗುತ್ತಾ ಹೇಳಿದಳು "ನನ್ನದು ಗಬ್ಬದ ಹಸು..." "ಸಮಾಧಾನ ಮಾಡ್ಕೋ.." ಎಂದ ಕಾದ್ರಿ. ಅವನ ದನಿಯೂ ನಡುಗುತ್ತಿತ್ತು.

ಅಯ್ಯನ ತೋಟದ ಗೇಟಿನ ಬಳಿ ಬಂದಾಗ ಅದೇನೋ ಗುಸುಗುಸು ಮಾತು ಕೇಳಿಬಂದಾಗ ಇಬ್ಬರ ಎದೆಯೂ ಜೋರಾಗಿ ಹೊಡೆಯತೊಡಗಿತು. ಅಲ್ಲೇ ಯಾರದೋ ಸ್ಕೂಟರು ನಿಂತಿತ್ತು. ಮೆಲ್ಲಗೆ ಗೇಟಿನ ಬಾಗಿಲು ಓರೆ ಮಾಡಿ ಒಳಹೊಕ್ಕರು. ಅಯ್ಯನ ತೋಟದಾಳು "ನೋಡು ನಿನ್ನಪ್ಪ ಬಂದ್ರು" ಎಂದು ಹೇಳಿದ. ಪಾತುಮ್ಮ ಕುಣಿಯುತ್ತಾ ಬಂದವಳು "ಬಾಪಾ, ನಮ್ಮ ಹಸು ಕರು ಹಾಕಿದೆ. ನಮ್ಮ ಕೈ ತಪ್ಪಿಸಿ ಈ ತೋಟಕ್ಕೆ ಬಂದದ್ದು ನಮ್ಗೆ ಗೊತ್ತೇ ಇಲ್ಲ. ಹುಡುಕ್ತಾ ಬಂದಾಗ ತೋಟದಾಳು ಗೋಡಾಕ್ಟನ್ನು ಕರೆ ತಂದಿದ್ದಾನೆ". ಎಂದಳು. ಕರೀಮ ಪುಟ್ಟ ಕರುವನ್ನು ತೋರಿಸುತ್ತಾ "ಉಮ್ಮ ಈ ಕರು ಎಷ್ಟು ಚೆಂದ ಅಲ್ವಾ ನಂಗೇ ಈ ಕರು ಹಾಂ.." ಎಂದ. ಗೋಡಾಕ್ಟ್ರು ರಹೀಮ ತೋಟದಾಳು ತಂದ ನೀರಿನಿಂದ ಕೈ ತೊಳೆಯುತ್ತಿದ್ದ. "ಕಾದ್ರಿಕಾಕಾ ಸೋಲ್ಲುಪ ಆಸ್ಪತ್ರೆ ಕಡೆ ಬನ್ನಿ. ದನಕ್ಕೆ ಔಷಧಿ ಕೊಡುತ್ತೇನೆ. ಎಲ್ಲಾ ಸರಿಯಾಗಿದೆ. ಗಾಬರಿ ಏನಿಲ್ಲ. ದನ ಕರುವನ್ನು ಮನೆಗೆ ಕರ್ಕೊಂಡು ಹೋಗಬಹುದು" ಎಂದ.

ಕಾದ್ರಿ, ಉಮ್ಮ ಇಬ್ಬರೂ ದೃಶ್ಯ ಕಂಡು ಮೂಕರಾಗಿದ್ದರು. ಕರು ಕಾಲೆತ್ತಿ ನಡೆಯಲು ಪ್ರಯತ್ನಿಸುವುದು, ಬೀಳುವುದು, ತಾಯಿ ದನ ಮೈ ನೆಕ್ಕುತ್ತಿರುವುದು ಕಂಡ ಕರೀಮ, ಪಾತುಮ್ಮ ಹಸಿವು ಮರೆತು ಕೇಕೆ ಹಾಕಿ ಕುಣಿದಾಡುತ್ತಿದ್ದರು.

(ಮುಗಿಯಿತು)



ಮಾನವ ಅಭಿವೃದ್ಧಿ ಕರ್ನಾಟಕ ಇಂದು ಎಲ್ಲಿದೆ?

ಶರತ್‌ಚಂದ್ರ

ಹಿಂದೆ ಒಟ್ಟು ವಾರ್ಷಿಕ ಉತ್ಪನ್ನವೇ ಯಾವುದೇ ದೇಶದ ಪ್ರದೇಶದ ಬೆಳವಣಿಗೆಯ ಸೂಚಕವೆಂದು ಪರಿಗಣಿಸಲಾಗುತ್ತಿತ್ತು. 90 ರ ದಶಕದಲ್ಲಿ ವಿಶ್ವಸಂಸ್ಥೆಯ ಅಭಿವೃದ್ಧಿ ಸಂಸ್ಥೆ 'ಮಾನವ ಅಭಿವೃದ್ಧಿ ಸೂಚಕ' ಎಂಬ ಮಾನದಂಡ ರೂಪಿಸಿದ್ದು, ಈ ಸೂಚಕ ಒಂದು ಆರ್ಥಿಕ ಬೆಳವಣಿಗೆ ಅಲ್ಲದೆ ಅದರ ಹಂಚಿಕೆ, ಆ ಮೂಲಕ ಸಾಧಿಸಲಾಗಿರುವ ಮಾನವ ಅಭಿವೃದ್ಧಿಯನ್ನು ಅಳೆಯಲು ಪ್ರಯತ್ನಿಸುತ್ತಿದೆ. ಇದನ್ನನುಸರಿಸಿ ಭಾರತದಲ್ಲೂ ಹಲವರು 'ಮಾನವ ಅಭಿವೃದ್ಧಿ ವರದಿ' ತಯಾರಿಸಲು ಆರಂಭಿಸಿದ್ದಾರೆ. ರಾಜ್ಯ ಸರ್ಕಾರದ ಮಟ್ಟದಲ್ಲಿ ಕರ್ನಾಟಕ ಇಂತಹ ಪ್ರಯತ್ನ ನಡೆಸಿರುವ ಎರಡನೇ ರಾಜ್ಯ. 1999 ರಲ್ಲಿ ಕರ್ನಾಟಕ ಸರ್ಕಾರ ತಂದಿರುವ 'ಮಾನವ ಅಭಿವೃದ್ಧಿ ವರದಿ' ಇಂದು ರಾಜ್ಯದಲ್ಲಿ ಅಭಿವೃದ್ಧಿಯ ಚಿತ್ರಣ ನೀಡುತ್ತದೆ. ಆ ವರದಿ ಆಧಾರದ ಮೇಲೆ ಕರ್ನಾಟಕದಲ್ಲಿ ಅಭಿವೃದ್ಧಿಯ ಇಂದಿನ ಪರಿಸ್ಥಿತಿ ಏನು? ಎಂದು ಸ್ಥೂಲ ಚಿತ್ರಣ ಕೊಡುವ ಲೇಖನ. ಕರ್ನಾಟಕ ವಾರ್ಷಿಕ ಬಜೆಟ್ ಮಂಡಿಸಲಾಗುವ ಸಮಯದಲ್ಲಿ ಯಾವ ಕ್ಷೇತ್ರಗಳಲ್ಲಿ ಸರ್ಕಾರ ಅಭಿವೃದ್ಧಿಗೆ ಹಣ ಹೂಡಬೇಕಾಗಿದೆ ಎಂಬ ಬಗ್ಗೆ ಚಿತ್ರಣ ನೀಡುವ ಲೇಖನ.

ಮೈಸೂರು ಸ್ವಾತಂತ್ರ್ಯದ ಮೊದಲು ಅಭಿವೃದ್ಧಿಯಲ್ಲಿ ದೇಶದಲ್ಲೇ ಅತ್ಯಂತ ಮುಂದುವರಿದ ಪ್ರದೇಶ ಎಂದು ಪರಿಗಣಿಸಲಾಗಿತ್ತು. ವಿದ್ಯುತ್, ನೀರಾವರಿ, ಸಾರ್ವಜನಿಕ ಸೇವೆ, ಕೈಗಾರಿಕೆ ಶಿಕ್ಷಣ ಮುಂತಾದ ಪ್ರಮುಖ ಕ್ಷೇತ್ರಗಳಲ್ಲಿ ಮುಂದಿತ್ತು. 1956 ರಲ್ಲಿ ಇತರ ಕನ್ನಡ ಮಾತನಾಡುವ ಕ್ಷೇತ್ರಗಳು ಸೇರಿ ಒಂದು ರಾಜ್ಯವಾದ ಮೇಲಿನ ಚಿತ್ರಣ ಬೇರೆ ಆಗಿದೆ. ದೇಶದಲ್ಲೇ ಹಿಂದುಳಿದ ಹೈದರಾಬಾದ್ ಕರ್ನಾಟಕದ ಜಿಲ್ಲೆಗಳು ರಾಜ್ಯದ ಒಟ್ಟಾರೆ ಅಭಿವೃದ್ಧಿ ಸೂಚಕಗಳನ್ನು ಕೆಳ ತಂದಿದೆ. ಕರ್ನಾಟಕದ ಈ ವರದಿ ಅಭಿವೃದ್ಧಿ ಸೂಚಕಗಳನ್ನು ಜಿಲ್ಲಾವಾರಾಗಿ ಕೊಟ್ಟು ಅಸಮಾನತೆಯ ಚಿತ್ರಣ ನೀಡಿದೆ.

ಈ ವರದಿ (ಮತ್ತು ಈ ಲೇಖನದಲ್ಲಿ) ಉದ್ದಕ್ಕೂ 'ಮಾನವ ಅಭಿವೃದ್ಧಿ ಸೂಚಕ'ವೊಂದನ್ನು ಬೆಳವಣಿಗೆಯನ್ನು ಹೋಲಿಸಲು ಬಳಸಲಾಗಿದೆ. ವಿಶ್ವಸಂಸ್ಥೆ ಸಿದ್ಧಪಡಿಸಿದ ಈ ಸೂಚಕದ ವಿವರಗಳನ್ನು ಈ ಲೇಖನದ ಜತೆ ಇರುವ ಬಾಕ್ಸ್‌ನಲ್ಲಿ ನೀಡಲಾಗಿದೆ. ಈ ಸೂಚಕ ಮಾನವ ಅಭಿವೃದ್ಧಿ ಬಗ್ಗೆ ಎಲ್ಲಾ ಹೇಳಿಬಿಡುತ್ತದೆ ಎಂದಲ್ಲ. ಇನ್ನೂ ಹಲವು ಇಂತಹ ಕ್ಷೇತ್ರವಾರು ಸೂಚಕಗಳು ಮಾನವ ಅಭಿವೃದ್ಧಿಯ ವಿವರವಾದ ಚಿತ್ರಣ ನೀಡುತ್ತವೆ, ಉದಾಹರಣೆಗೆ ಶಿಶು ಮರಣದ ಪ್ರಮಾಣ, ಜನಸಂಖ್ಯೆ ಮತ್ತು ಆಸ್ಪತ್ರೆ/ಆಸ್ಪತ್ರೆ ಹಾಸಿಗೆಗಳ ಪ್ರಮಾಣ, ನಿರುದ್ಯೋಗ ಪ್ರಮಾಣ, ಬಡತನದ ರೇಖೆಯ ಕೆಳಗಿರುವ ಜನಸಂಖ್ಯೆ ಪ್ರಮಾಣ, ಕುಡಿಯುವ ನೀರು ಮತ್ತು ಪಾಯಿಖಾನೆ ಇರುವ ಮನೆಗಳ ಪ್ರಮಾಣ, ಪ್ರದೇಶ/ಮನೆವಾರುವಾಗಿ ವಿದ್ಯುದೀಕರಣದ ಪ್ರಮಾಣ-ಇತ್ಯಾದಿ ಸೂಚಕಗಳು ಈಗಲೂ ಇಂತಹ ವಿವರವಾದ ಚಿತ್ರಣ ನೀಡುತ್ತವೆ. ಕರ್ನಾಟಕದ ಸರ್ಕಾರದ ಗುಂಪೊಂದು ತಯಾರಿಸಿದ ವರದಿ ಈ ಸೂಚಕಗಳನ್ನು ನೀಡುತ್ತದೆ.

ಇತರ ರಾಜ್ಯಗಳಿಗೆ ಹೋಲಿಸಿದರೆ ಕರ್ನಾಟಕ

ಮಾನವ ಅಭಿವೃದ್ಧಿ ಸೂಚಕ ಪ್ರತಿ ರಾಜ್ಯಕ್ಕೂ ತಯಾರಿಸಿರುವ ಮೂರು ವರದಿಗಳಿವೆ. ಈ ಮೂರು ವರದಿಗಳಲ್ಲಿ ಕರ್ನಾಟಕ ಪ್ರಮುಖ 15 ರಾಜ್ಯಗಳಿಗೆ ಹೋಲಿಸ್ಸಿದರೆ 7ನೇ ಸ್ಥಾನದಲ್ಲಿದೆ. ಮೂರು ವರದಿಗಳ ಪ್ರಕಾರ ಕೇರಳ ಪ್ರಥಮ ಸ್ಥಾನದಲ್ಲಿದೆ. ಮಹಾರಾಷ್ಟ್ರ, ಗುಜರಾತ್, ಪಂಜಾಬ್, ಹರ್ಯಾಣ ಈ ಮೂರೂ ವರದಿಗಳ ಪ್ರಕಾರ ಕರ್ನಾಟಕಕ್ಕಿಂತ ಮುಂದಿವೆ. ಒಂದು ವರದಿ ಪ್ರಕಾರ ತಮಿಳುನಾಡು ಸಹ ಕರ್ನಾಟಕಕ್ಕಿಂತ ಮುಂದಿದೆ ಇನ್ನೆರಡು ವರದಿಗಳ ಪ್ರಕಾರ ಪಶ್ಚಿಮ ಬಂಗಾಳ ಕರ್ನಾಟಕಕ್ಕಿಂತ ಮುಂದಿದೆ. ಕರ್ನಾಟಕದ ಸೂಚಕ ಭಾರತದ ಸೂಚಕಕ್ಕಿಂತ ಸ್ವಲ್ಪಹೆಚ್ಚಿದೆ. ಉತ್ತರ ಪ್ರದೇಶ, ಬಿಹಾರ, ಮಧ್ಯಪ್ರದೇಶ, ರಾಜಸ್ಥಾನ, ಒರಿಸ್ಸಾಗಳು ಕೊನೆಯ 5 ಸ್ಥಾನದಲ್ಲಿವೆ.

ಆದರೆ ಲಿಂಗ ಸಂಬಂಧಿ ಸೂಚಕದಲ್ಲಿ ಕರ್ನಾಟಕದ ಸ್ಥಾನ ಸ್ವಲ್ಪ ಉತ್ತಮವಾಗಿದೆ (5ನೇ ಸ್ಥಾನ). ಈ ಸೂಚಕ ಭಾರತದ ಸರಾಸರಿಗಿಂತ ಉತ್ತಮವಾಗೂ ಇದೆ. ಈ ಸೂಚಕದಲ್ಲೂ ಕೇರಳ ಮೊದಲನೆಯದು ಮಹಾರಾಷ್ಟ್ರ, ಗುಜರಾತ್, ಪಂಜಾಬ್ ಕರ್ನಾಟಕಕ್ಕಿಂತ ಮುಂದಿವೆ. ಇತರ ಸೂಚಕಗಳನ್ನು ನೋಡಿದರೂ ಹೆಚ್ಚು ಕಡಿಮೆ ಇದೇ ಪರಿಸ್ಥಿತಿ ಇದೆ. ಕರ್ನಾಟಕ ಸುಮಾರು 6-7ನೇ ಸ್ಥಾನದಲ್ಲಿ ಬರುತ್ತದೆ. ಭಾರತದ ಸರಾಸರಿಯ ಸುತ್ತಮುತ್ತ ಇದೆ.

ಅಂದರೆ ಕರ್ನಾಟಕದ ಸರಾಸರಿ ರಾಜ್ಯಗಳಲ್ಲೊಂದು ಆದರೆ ಕರ್ನಾಟಕದ ಸ್ವಾತಂತ್ರ್ಯಪೂರ್ವ ಅಭಿವೃದ್ಧಿಯ [illegible] ಹೋಲಿಸಿದರೆ ಕರ್ನಾಟಕದ ಈಗಿನ ಹಂತ ಸ್ಥಗಿತತೆ ಎನ್ನಬಹುದು. ಇನ್ನೂ ಹೆಚ್ಚಿನ ಸಾಧ್ಯತೆಗಳಿವೆ.

ಪ್ರಾದೇಶಿಕ ಅಸಮಾನತೆ

ಕರ್ನಾಟಕದ ಮಾನವ ಅಭಿವೃದ್ಧಿ ವರದಿ

ಸೂಚಕ	ಕರ್ನಾಟಕ	ಭಾರತ
1. ಮಹಿಳಾ-ಪುರುಷರ ಪ್ರಮಾಣ	963	960
(ಪ್ರತಿ ಸಾವಿರ ಪುರುಷರಿಗೆ ಮಹಿಳೆಯ ಸಂಖ್ಯೆ)		
2. ಶಿಶು ಮರಣದ ಪ್ರಮಾಣ		
(ಪ್ರತಿ ಸಾವಿರ ಹುಟ್ಟಿಗೆ ಸಾಯುವ ಶಿಶುಗಳು)	65	73
3. ತಾಯಂದಿರ ಸಾವಿನ ಪ್ರಮಾಣ	450	453
(ಒಂದು ಲಕ್ಷ ತಾಯಂದಿರಲ್ಲಿ ಹೆರಿಗೆ ಸಂಬಂಧಿ ಮರಣಗಳ ಸಾವು)		
4. ಸ್ಕೂಲಿಗೆ ಹೋಗುವ ಮಕ್ಕಳ ಪ್ರಮಾಣ		
ಗ್ರಾಮೀಣ	65.3%	62.6%
ನಗರ	82.4%	82.4%

ಜಿಲ್ಲಾವಾರಾಗಿ ಈ ಸೂಚ್ಯಂಕಗಳನ್ನು ಕೊಡುತ್ತದೆ. ಈ ವರದಿಯಿಂದ ಹೊಮ್ಮುವ ಚಿತ್ರವೆಂದರೆ, ಕರ್ನಾಟಕವನ್ನು ಕಾಡುತ್ತಿರುವ ತೀವ್ರ ಪ್ರಾದೇಶಿಕ ಅಸಮಾನತೆ. ಕೊಡಗು ಅತ್ಯಂತ ಹೆಚ್ಚಿನ ಮಾನವ ಅಭಿವೃದ್ಧಿ ಸೂಚ್ಯಂಕ ಹೊಂದಿದ್ದರೆ, ರಾಯಚೂರು ಅತ್ಯಂತ ಕಡಿಮೆ ಸೂಚಕ ಹೊಂದಿರುವ ಜಿಲ್ಲೆ. ಕೊಡಗು, ಬೆಂಗಳೂರುನಗರ, ದಕ್ಷಿಣ ಕನ್ನಡ, ಉತ್ತರ ಕನ್ನಡ, ಚಿಕ್ಕಮಗಳೂರು ಮೊದಲ ಐದು ರ್‍ಯಾಂಕ್ ಪಡೆದಿರುವ ಜಿಲ್ಲೆಗಳು. ರಾಯಚೂರು, ಗುಲ್ಬರ್ಗ, ಬೀದರ್, ಬಳ್ಳಾರಿ, ಮೈಸೂರು - ಕೊನೆಯ ಐದು ರ್‍ಯಾಂಕ್ ಪಡೆಯುವ ಜಿಲ್ಲೆಗಳು. ಅಸಮಾನತೆಯ ಪ್ರಮಾಣ ಸಹ ಬಹಳ ಹೆಚ್ಚಿದೆ. ರಾಯಚೂರಿನ ಸೂಚಕ 0.399 ಆಗಿದ್ದರೆ ಕೊಡಗಿನ ಸೂಚಕ 0.630 ಆಗಿದೆ. ಅಂದರೆ ಸುಮಾರು ಒಂದೂವರೆ ಪಟ್ಟು ಹೆಚ್ಚು.

ಆರೋಗ್ಯ, ಶಿಕ್ಷಣ, ಉತ್ಪಾದನೆಯ ನಿರ್ದಿಷ್ಟ ಸೂಚಕಗಳಿಗೆ ಹೋದರೂ ಮೊದಲ ಐದು ಜಿಲ್ಲೆಗಳು, ಕೊನೆಯ ಐದು ಜಿಲ್ಲೆಗಳು ಬದಲಾಗುವುದಿಲ್ಲ. ರ್‍ಯಾಂಕುಗಳಲ್ಲಿ ಸ್ವಲ್ಪ ಬದಲಾವಣೆ ಆಗುತ್ತದೆ (ಉದಾ: ಬೆಂಗಳೂರು ನಗರ ಆರೋಗ್ಯ ಮತ್ತು ಶಿಕ್ಷಣದಲ್ಲಿ 3ನೇ ಸ್ಥಾನ, ಉತ್ಪಾದನೆಯಲ್ಲಿ ಎರಡನೇ ಸ್ಥಾನ, ದಕ್ಷಿಣ ಕನ್ನಡ ಆರೋಗ್ಯ-ಶಿಕ್ಷಣದಲ್ಲಿ ಮೊದಲನೇ ಸ್ಥಾನ, ಉತ್ಪಾದನೆಯಲ್ಲಿ 4ನೇ ಸ್ಥಾನ)

ಪ್ರಾದೇಶಿಕವಾಗಿ ಕರಾವಳಿ-ಮಲೆನಾಡು ಪ್ರದೇಶ ಒಟ್ಟು ಅಭಿವೃದ್ಧಿಯಲ್ಲಿ ಮೊದಲ ಸ್ಥಾನ. ಆಮೇಲಿನ ಸ್ಥಾನ ದಕ್ಷಿಣ ಕರ್ನಾಟಕ ಮತ್ತು ಬಾಂಬೇ ಕರ್ನಾಟಕಕ್ಕೆ. ಹೈದರಾಬಾದ್ ಕರ್ನಾಟಕ ಕೊನೆಯ ಸ್ಥಾನದಲ್ಲಿದೆ. ಈ ಪ್ರದೇಶಗಳಲ್ಲೂ ಜಿಲ್ಲಾವಾರು, ತಾಲೂಕುವಾರು ಇನ್ನಷ್ಟು ಪ್ರಾದೇಶಿಕ ಅಸಮಾನತೆಗಳಿವೆ. ಈ ಅಸಮಾನತೆಗಳು ಸ್ವಾತಂತ್ರ್ಯಪೂರ್ವ ಅಭಿವೃದ್ಧಿಮಟ್ಟ, ಚಾರಿತ್ರಿಕ-ರಾಜಕೀಯ-ಸಾಮಾಜಿಕ ಅಂಶಗಳ ಮೇಲೆ ಆಧಾರಿತವಾಗಿವೆ. ಆಧುನಿಕ ಸ್ವಾತಂತ್ರ್ಯೋತ್ತರ ಅಭಿವೃದ್ಧಿ ಪಥ ಸ್ವಲ್ಪ ಬೆಳವಣಿಗೆ ಸಾಧಿಸಿದೆಯಾದರೂ, ಅಸಮಾನತೆಯನ್ನು ಹೋಗಲಾಡಿಸುವಲ್ಲಿ ಸಂಪೂರ್ಣವಾಗಿ ವಿಫಲವಾಗಿದೆ ಎಂಬುದು ಈ ವರದಿ ಅವಲೋಕಿಸಿದರೆ ಕಣ್ಣಿಗೆ ಹೊಡೆಯುವಂತೆ ಕಾಣುವ ಚಿತ್ರ.

ಈ ವರದಿ ನೀಡುವ ಇನ್ನೊಂದು ಚಿತ್ರಣ ಬೆಚ್ಚಿಬೀಳಿಸುವಂತಹದು. ಆಫ್ರಿಕಾದ ಸಹರಾ ಮರುಭೂಮಿಯ ಸುತ್ತ ಇರುವ ದೇಶಗಳು ಜಗತ್ತಿನಲ್ಲೇ ಅತ್ಯಂತ ಕಡಿಮೆ ಅಭಿವೃದ್ಧಿ ಹೊಂದಿರುವದೇಶಗಳು ಎಂದು ಪರಿಗಣಿಸಲ್ಪಡುತ್ತವೆ(ಹೆಚ್ಚು ಕಡಿಮೆ ಎಲ್ಲಾ ಕ್ಷೇತ್ರಗಳಲ್ಲಿ). ಕರ್ನಾಟಕದ ಎಂಟು ಜಿಲ್ಲೆಗಳು ಈ ಸಹರಾ ದೇಶಗಳಿಗಿಂತ ಮಹಿಳಾ, ಪುರುಷರ ಸಾಕ್ಷರತೆ ಪ್ರಮಾಣ ಎರಡರಲ್ಲೂ ಕಡಿಮೆಯಲ್ಲಿದೆ.ರಾಯಚೂರು, ಗುಲ್ಬರ್ಗ, ಬೀದರ್, ಬಳ್ಳಾರಿ, ಮಂಡ್ಯ, ಮೈಸೂರು, ಕೋಲಾರ, ಬೆಂಗಳೂರು(ಗ್ರಾಮೀಣ) ಆ ಎಂಟು ಜಿಲ್ಲೆಗಳು.



ಪ್ರಾದೇಶಿಕ ಅಸಮಾನತೆಯಲ್ಲಾ ಬರೀ ಸಂಪನ್ಮೂಲ, ಕೈಗಾರಿಕೆ-ಕೃಷಿ ಅಭಿವೃದ್ಧಿಯ ಅಭಾವದಿಂದಲ್ಲ, ನಿಜವಾಗಿಯೂ ಸಾಮಾಜಿಕ ನೀತಿಯ ಅಭಾವವೇ, ಬಳ್ಳಾರಿ, ಮೈಸೂರು, ಗುಲ್ಬರ್ಗ ಜಿಲ್ಲೆಗಳು ಉತ್ಪಾದನೆ-ಆದಾಯದಲ್ಲಿ ಹೆಚ್ಚಿನ ರ್‍ಯಾಂಕಿಂಗ್ ಪಡೆದರೂ, ಶಿಕ್ಷಣ-ಆರೋಗ್ಯದ ಸೂಚಕಗಳಲ್ಲಿ ಭಾರಿ ಕೆಳಗಿನ ರ್‍ಯಾಂಕಿಂಗ್ ಪಡೆದಿವೆ. ಉದಾಹರಣೆಗೆ ಬಳ್ಳಾರಿ ಆದಾಯ-ಉತ್ಪಾದನೆಯಲ್ಲಿ 7ನೇ ಸ್ಥಾನ ಪಡೆದರೆ, ಆರೋಗ್ಯ-ಶಿಕ್ಷಣದಲ್ಲಿ 18ನೇ ಸ್ಥಾನ ಪಡೆದಿದೆ. ಅದೇ ರೀತಿ ಆದಾಯ-ಉತ್ಪಾದನೆಯಲ್ಲಿ ಕೆಳಗಿರುವ ಜಿಲ್ಲೆಗಳು ಆರೋಗ್ಯ-ಶಿಕ್ಷಣದಲ್ಲಿ ಮೇಲಿವೆ. ಧಾರವಾಡ, ಹಾಸನ, ಕೋಲಾರ, ತುಮಕೂರು ಜಿಲ್ಲೆಗಳು ಇದಕ್ಕೆ ಉದಾಹರಣೆ. ಉದಾಹರಣೆಗೆ ಹಾಸನ ಶಿಕ್ಷಣ-ಆರೋಗ್ಯದಲ್ಲಿ 6ನೇ ಸ್ಥಾನ ಪಡೆದಿದೆ, ಆದಾಯ-ಉತ್ಪಾದನೆಯಲ್ಲಿ 14ನೇ ಸ್ಥಾನ ಪಡೆದಿದೆ.

ಮಾನವ ಅಭಿವೃದ್ಧಿ ಸೂಚಕ ಎಂದರೇನು?

ಅಭಿವೃದ್ಧಿಯನ್ನು ಸಾಮಾನ್ಯವಾಗಿ ಒಟ್ಟು ಆರ್ಥಿಕ ಉತ್ಪಾದನೆಯಾಗಿ ಅಳೆಯಲಾಗುತ್ತದೆ. ಉದಾಹರಣೆಗೆ ಒಟ್ಟು ಉತ್ಪಾದನೆ ಒಂದು ಇಂತಹ ಸೂಚಕ. ಆದರೆ ಮಾನವ ಅಭಿವೃದ್ಧಿ ಸೂಚಕ, ಮಾನವನ ಒಟ್ಟಾರೆ ಜೀವನ ಮಟ್ಟ, ಒಟ್ಟು ಸಾಮರ್ಥ್ಯದ ಬೆಳವಣಿಗೆಯನ್ನು ಅಳೆಯಲು ಪ್ರಯತ್ನಿಸುತ್ತದೆ. ಇದಕ್ಕಾಗಿ ಶಿಕ್ಷಣ ಮತ್ತು ಆರೋಗ್ಯದ ಸೂಚಕಗಳನ್ನು ಸೇರಿಸಲಾಗಿದೆ. ವಿಶ್ವಸಂಸ್ಥೆ ತಯಾರಿಸುವ 'ಸೂಚಕ' ಈ ನಾಲ್ಕು ಅಂಶಗಳನ್ನು ಒಳಗೊಂಡಿದೆ.

- ಸರಾಸರಿ ಆಯುಷ್ಯ(ಒಟ್ಟಾರೆ ಆರೋಗ್ಯದ ಸೂಚಕವಾಗಿ)
- ಸಾಕ್ಷರತೆಯ ಪ್ರಮಾಣ(ಶಿಕ್ಷಣದ ಮೂರನೇ ಎರಡು ಭಾಗದ ಸೂಚಕವಾಗಿ)
- ಶಿಕ್ಷಣದ ಎಲ್ಲಾ ಹಂತಗಳಲ್ಲಿ ಶೈಕ್ಷಣಿಕ ಸಂಸ್ಥೆಗಳಲ್ಲಿ ಸೇರ್ಪಡೆ (ಪ್ರಾಥಮಿಕ, ಮಾಧ್ಯಮಿಕ, ಹೈಸ್ಕೂಲು, ಕಾಲೇಜು, ವಿಶ್ವವಿದ್ಯಾಲಯ ಎಲ್ಲಾ ಹಂತಗಳಲ್ಲಿ - ಶಿಕ್ಷಣದ ಮೂರನೇ ಎರಡು ಭಾಗದ ಸೂಚಕವಾಗಿ)
- ತಲಾ ಒಟ್ಟು ಉತ್ಪಾದನೆ(ಬೇರೆ ಬೇರೆ ದೇಶದ ನಾಣ್ಯಗಳಲ್ಲಿ ವ್ಯತ್ಯಾಸಗಳನ್ನು ಅಲ್ಲಿನ ಕೊಳ್ಳುವ ಸಾಮರ್ಥ್ಯದ ಆಧಾರದ ಮೇಲೆ ಸರಿಪಡಿಸಿ - ಒಟ್ಟಾರೆ ಜೀವನ ಮಟ್ಟದ ಸೂಚಕವಾಗಿ)

ಇದಲ್ಲದೆ ಈ ಪ್ರತಿಯೊಂದು ಮಾನವ ಅಭಿವೃದ್ಧಿಯ ಕ್ಷೇತ್ರದಲ್ಲಿ ಒಂದು ಮಾದರಿಯನ್ನು ಇಟ್ಟುಕೊಂಡು ಅದಕ್ಕೂ ಈಗಿನ ಪರಿಸ್ಥಿತಿಗೂ ಇರುವ ಅಂತರವನ್ನು ಈ ಸೂಚಕ ಹೊರ ತರುತ್ತದೆ.

ಉದಾಹರಣೆಗೆ ಸರಾಸರಿ ಆಯುಷ್ಯ 85 ಗರಿಷ್ಠ ಎಂದು ಪರಿಗಣಿಸಲಾಗುತ್ತದೆ. ಸಾಕ್ಷರತೆ ಶೇಕಡಾ 100 ಪ್ರಮಾಣ ಗರಿಷ್ಠ ಎಂದು ಪರಿಗಣಿಸಲಾಗುತ್ತದೆ. ಒಟ್ಟು ಶೈಕ್ಷಣಿಕ ಸಂಸ್ಥೆಗಳಿಗೆ ಸೇರ್ಪಡೆ ಗರಿಷ್ಠ ಶೇಕಡಾ 100 ಎಂದು ಪರಿಗಣಿಸಲಾಗುತ್ತದೆ. ತಲಾ ಒಟ್ಟು ಉತ್ಪಾದನೆ ಗರಿಷ್ಠ 40000 ಸಾವಿರ ಡಾಲರುಗಳು ಎಂದು ಪರಿಗಣಿಸಲಾಗುತ್ತದೆ.

ಅಂದರೆ ಈ ಎಲ್ಲಾ ಗರಿಷ್ಠಗಳನ್ನು ಒಂದು ಪ್ರದೇಶ ಮುಟ್ಟಿದ್ದರೆ ಮಾನವ ಅಭಿವೃದ್ಧಿ ಸೂಚಕ ಎಂದಾಗುತ್ತದೆ. ಈ ಆದರ್ಶ ಸೂಚಕ ಒಂದು ಆಗಿರುತ್ತದೆ. ಅಂದರೆ ಒಂದು ಪ್ರದೇಶದ ಸೂಚಕ ಒಂದಕ್ಕಿಂತ ಕಡಿಮೆ ಸಂಖ್ಯೆ ಆಗಿರುತ್ತದೆ. ಉದಾಹರಣೆಗೆ ಕರ್ನಾಟಕ ಸೂಚಕ(ವಿಶ್ವಸಂಸ್ಥೆ 1997 ವರದಿ ಪ್ರಕಾರ 1992-93 ಸಾಲಿಗೆ) 0.468. ಅಂದರೆ ಆದರ್ಶ ಸೂಚಕದ ಅರ್ಧದಷ್ಟಾಗುತ್ತದೆ. ನಮ್ಮ ದೇಶದಲ್ಲಿ ಅತ್ಯಂತ ಹೆಚ್ಚು 'ಮಾನವ ಅಭಿವೃದ್ಧಿ' ಸಾಧಿಸಿರುವ ರಾಜ್ಯ ಎಂದು ಹೆಸರಾಗಿರುವ ಕೇರಳದ ಸೂಚಕ 0.628. ಅಂದರೆ ಆದರ್ಶ 'ಅಭಿವೃದ್ಧಿ'ಯ ಸುಮಾರು ಮೂರನೇ ಎರಡರಷ್ಟು. ಇನ್ನೊಂದು ರೀತಿಯಲ್ಲಿ ಹೇಳಬೇಕಾದರೆ ಕರ್ನಾಟಕ 'ಆದರ್ಶ ಅಭಿವೃದ್ಧಿ ಮಟ್ಟ' ಮುಟ್ಟಲು ಅರ್ಧದಾರಿ ಕ್ರಮಿಸಬೇಕಿದ್ದರೆ, ಕೇರಳ ಮೂರನೇ ಒಂದು ಭಾಗ ಕ್ರಮಿಸಬೇಕಾಗಿದೆ.

ಮಾನವ ಅಭಿವೃದ್ಧಿ ಸೂಚಕ ಅತ್ಯಂತ ಆದರ್ಶ ಅಳತೆಗೋಲು (ಅಥವಾ ಮಾನದಂಡ) ಏನಲ್ಲ ಉದಾಹರಣೆಗೆ ಆಸ್ತಿಪಾಸ್ತಿಯಲ್ಲಿ ಅಸಮಾನ ಹಂಚಿಕೆ, ನಿರುದ್ಯೋಗ ಇವನ್ನು ಅದು ಗಣನೆಗೆ ತೆಗೆದುಕೊಳ್ಳುವುದಿಲ್ಲ.

ಇನ್ನೊಂದು ಪ್ರಮುಖ ಸೂಚಕವನ್ನು ವಿಶ್ವಸಂಸ್ಥೆ ತಯಾರಿಸಿದೆ. ಲಿಂಗ ಸಂಬಂಧಿ ಅಭಿವೃದ್ಧಿ ಸೂಚಕ ಎಂದು ಇದನ್ನು ಕರೆಯುತ್ತಾರೆ. ಈ ಸೂಚಕ ಮೇಲೆ ಹೇಳಿದ ನಾಲ್ಕು ಕ್ಷೇತ್ರಗಳಲ್ಲಿ ಪುರುಷರು ಮತ್ತು ಮಹಿಳೆಯರ ನಡುವಿನ ಅಸಮಾನತೆಯನ್ನು ಅಳೆಯುತ್ತದೆ. ಯಾವುದೇ ಕ್ಷೇತ್ರದಲ್ಲಿ (ಉದಾಹರಣೆ ಸಾಕ್ಷರತೆ ಪ್ರಮಾಣ) ಎರಡೂ ಅಂಶಗಳು ಸಮಾನ ಸಂಖ್ಯೆ ಸಾಧಿಸಿದರೆ, ಈ ಸೂಚಕ ಗರಿಷ್ಠವಾಗಿರುತ್ತದೆ.

ನಗರದೊಳಗಿನ ನರಕದ ಚಿತ್ರಣ



ಬಳ್ಳಾರಿ,ಗುಲ್ಬರ್ಗ, ರಾಯಚೂರಿನಂತಹ ಬಡ ಜಿಲ್ಲೆಗಳ ಕಡು ಬಡ ಕುಟುಂಬಗಳು ಬೆಂಗಳೂರಿನಂತಹ ನಗರ ಪ್ರದೇಶಗಳಿಗೆ ಹೊಟ್ಟೆಪಾಡಿಗಾಗಿ ವಲಸೆ ಬರುವುದು ಇಂದಿನ ದಿನಗಳಲ್ಲಿ ಅನಿವಾರ್ಯವಾಗುತ್ತಿವೆ. ಇಂತಹ ದೊಡ್ಡ ಪಟ್ಟಣ ಪ್ರದೇಶಗಳಲ್ಲಿ ಹೇಗಾದರೂ ಬದುಕಬಹುದು ಎಂಬುದು ಇವರ ಕಲ್ಪನೆ. ಆದರೆ ಇಲ್ಲಿ ಬದುಕು ಎಷ್ಟು ದುಸ್ತರ, ಅಭದ್ರ ಎಂಬುದು ನಂತರ ಅರಿವಿಗೆ ಬರುತ್ತದೆ. ಅಷ್ಟರಲ್ಲಿ ಹೇಗಾದರೂ ಬದುಕಲೇಬೇಕಾದ, ಜೊತೆಗೆ ವಂಚಕರ-ರಾಜಕೀಯ ಪ್ರಭಾವಿಗಳ ಸ್ವಾರ್ಥದ ಬಲೆಗೆ ಸಿಕ್ಕಿ ಹೀನಾಯ ಬದುಕನ್ನು ಸಾಗಿಸಲೇಬೇಕಾದ ಅನಿವಾರ್ಯಕ್ಕೆ ದೂಡಲ್ಪಟ್ಟಿರುತ್ತಾರೆ. ಈ ಹಿನ್ನೆಲೆಯಲ್ಲಿ ರೂಪುಗೊಂಡ ಚಿತ್ರ ದೇವೀರಿ.

ಗುಲ್ಬರ್ಗ ಸಮೀಪದ ಒಂದು ಸಣ್ಣ ಹಳ್ಳಿಯಿಂದ ಹೊಟ್ಟೆಪಾಡಿಗಾಗಿ ತನ್ನ ತಮ್ಮ 'ಕ್ಯಾತ'ನೊಂದಿಗೆ ಬೆಂಗಳೂರಿಗೆ ಬರುವ ದೇವೀರಿ ಎಂ.ಎಲ್.ಎ. ರಾಮಪ್ಪನ ಕೃಪಾಕಟಾಕ್ಷದಿಂದ ಬೆಂಗಳೂರಿನ ಕೊಳೆಗೇರಿಯೊಂದರಲ್ಲಿ ಆಶ್ರಯ ಪಡೆಯುತ್ತಾಳೆ. ದೇವೀರಿ ತನ್ನ ಪುಟ್ಟ ತಮ್ಮನ ಹಸಿವನ್ನು ನೀಗಿಸುತ್ತಾ ಅವರ ಜೀವನವನ್ನು ಉತ್ತಮ ಪಡಿಸಲು, ಅವನನ್ನು ವಿದ್ಯಾವಂತನನ್ನಾಗಿಸಲು ಅನಿವಾರ್ಯವಾಗಿ ಮೈಮಾರುವ ಕಸುಬಿಗೆ ಇಳಿಯುತ್ತಾಳೆ. ಆದರೆ ಅದಕ್ಕೆ ಪೂರಕವಾದ ವಾತಾವರಣ ಶಾಲೆಯಲ್ಲಿ, ಅವನು ವಾಸಿಸುವ ಕೊಳಗೇರಿಯಲ್ಲಿ ಇರುವುದಿಲ್ಲ. ಕುದುರೆ ಜೂಜಿನ-ಸಿನಿಮಾ ಗುಂಗಿನ ಜನರೇ ಸುತ್ತಾಮುತ್ತಾ.

ಚಿತ್ರದ ಇನ್ನೊಂದು ಮುಖ್ಯಪಾತ್ರ ಪದ್ದಿಯದು. ಇವಳಿಗೆ ಚಲನಚಿತ್ರದಲ್ಲಿ ನಟಿಸಬೇಕೆಂಬ ಹಂಬಲ, ತನ್ನ ಸಾಮಾಜಿಕ-ಆರ್ಥಿಕ ಹಿನ್ನೆಲೆಯ ಪರಿವೆಯೂ ಇಲ್ಲದೆ ಚಿತ್ರದಲ್ಲಿ ನಟಿಸುವ ಒಂದೇ ಉದ್ದೇಶದಿಂದ ಸದಾ ಅಲಂಕಾರದಲ್ಲಿ ತೊಡಗಿರುತ್ತಾಳೆ. ಇದಕ್ಕೆ ಮನೆಯವರೂ ಸ್ಪಂದಿಸುತ್ತಾರೆ. ಕಾರಣ ಕುಡುಕ ತಂದೆ ತನ್ನ ಮಗಳು ಚಿತ್ರ ನಟಿಯಾದರೆ ತನಗೆ ಕುಡಿಯಲು ಸಾಕಷ್ಟು ಹಣ ಸಿಗುತ್ತದೆ. ಕಷ್ಟಪಡುವ ಅಗತ್ಯವಿಲ್ಲ ಎಂದು ತನ್ನ ಮಗಳನ್ನು ಈ ಭ್ರಮಾಲೋಕದ ಕೂಪಕ್ಕೆ ತಳ್ಳುತ್ತಾನೆ.

ಈ ದೌರ್ಬಲ್ಯದ ಅವಿವೇಕದ ಲಾಭ ಪಡೆಯುವ ಒಂದು ಗುಂಪು ನಟಿಸಲು ಅವಕಾಶ ಕೊಡಿಸುವುದಾಗಿ ಆಸೆ ತೋರಿಸಿ ತಮ್ಮ ಕಾಮ ತೃಷೆಗೆ ಅವಳನ್ನುಬಳಸಿಕೊಂಡು ವಂಚಿಸುತ್ತಾರೆ.

ಮತ್ತೊಂದು ಪಾತ್ರ ರಂಗಸೆಟ್ಟಿ. ಅವನಿಗೆ ಸದಾ ಕುದುರೆ ಜೂಜಿನ ಚಿಂತೆ. ತನ್ನ ಸಂಸಾರದ ಆಗುಹೋಗುಗಳ ಪರಿವೆಯೇ ಇಲ್ಲದೆ ಸದಾ ಕುಡಿಯುತ್ತಾ, ಹಣವನ್ನೆಲ್ಲಾ ಕುದುರೆಯ ಬಾಲಕ್ಕೆ ಕಟ್ಟಿ ಕಳೆಯುತ್ತಿರುತ್ತಾನೆ. ಮಕ್ಕಳಿಲ್ಲದ ಅವರಿಗೆ ಕ್ಯಾತನೇ ಮಗ, ತಾಯಿ ವಾತ್ಸಲ್ಯವನ್ನು ಕ್ಯಾತ ಸ್ವಲ್ಪ ಮಟ್ಟಿಗಾದರೂ ಅವರಲ್ಲಿ ಕಾಣುತ್ತಾನೆ.

ಚಿತ್ರದಲ್ಲಿ ಕ್ಯಾತನದು ಪ್ರಮುಖ ಪಾತ್ರ. ತನ್ನ ಅಕ್ಕ ಮಾಡುತ್ತಿರುವುದು ಸರಿಯೇ, ಅವಳನ್ನು ಸುತ್ತುವರಿದ ಜನರ ನಡವಳಿಕೆ ಸರಿಯೇ, ಪದ್ದಿ ಸರಿಯೇ, ತನ್ನ ಸುತ್ತಲ ಪ್ರಪಂಚದಲ್ಲಿ ನಡೆಯುತ್ತಿರುವುದು ಸರಿಯೇ(ಚಿತ್ರದಲ್ಲಿ ಬರುವ ಕನ್ನಡಾಭಿಮಾನಿಗಳು ಕನ್ನಡ ರಾಜ್ಯೋತ್ಸವಕ್ಕಾಗಿ ಬಲವಂತವಾಗಿ ಜನರಿಂದ ಹಣ ಸುಲಿಯುವ ರೀತಿ ಮತ್ತು ಅದರ ದುರುಪಯೋಗವನ್ನು ಇಲ್ಲಿ ಸಾಂಕೇತಿಕವಾಗಿ ಬಳಸಲಾಗಿದೆ) ತಾನು ಸರಿಯೇ, ತಾನೇನು ಮಾಡಬೇಕು. ಹೀಗೆ ಸದಾ ಪ್ರತಿ ಹೆಜ್ಜೆ-ಪ್ರತಿ ಕ್ಷಣವೂ ಅವನಿಗೆ ಪ್ರಶ್ನೆಗಳು ಕಾಡುತ್ತವೆ.

ತನ್ನ ಅಕ್ಕ ಮಾಡುತ್ತಿರುವುದು ತಪ್ಪು ಎನಿಸಿದಾಗ ಅದನ್ನು ಖಂಡಿಸುತ್ತಾನೆ. ದೇವೀರಿ ತನ್ನ ಅಸಹಾಯಕತೆಯನ್ನು ತೋಡಿಕೊಳ್ಳುತ್ತಾಳೆ. ಕ್ಯಾತ ಅವಳ ನಡವಳಿಕೆಯನ್ನು ತಿರಸ್ಕರಿಸುತ್ತಾನೆಯೇ ಹೊರತು ಅವಳ ಪ್ರೀತಿ ವಾತ್ಸಲ್ಯಗಳನ್ನಲ್ಲ. ಆದರೆ ಕ್ಯಾತನಿಗೆ ಎಲ್ಲವೂ ಅರ್ಥವಾಗುತ್ತವೆ; ಸರಿ ತಪ್ಪುಗಳನ್ನು ಗುರುತಿಸುವಷ್ಟು ಶಕ್ತನಾಗಿದ್ದಾನೆ ಎಂದೆನಿಸಿದಾಗ ದೇವೀರಿ ಅವನನ್ನು ಇಂತಹ ವಾತಾವರಣದಿಂದ ದೂರ ಮಾಡಲು ಪ್ರಯತ್ನಿಸುತ್ತಾಳೆ. ಅವನನ್ನು ತೊರೆದು ಹೊರಟು ಹೋಗುತ್ತಾಳೆ. ಅಕ್ಕನ ಅಕ್ಕರೆಯ ಮಡಿಲಿನ ಬಿಸಿಯಿಂದ ದೂರವಾದ ಕ್ಯಾತ ಚಡಪಡಿಸುತ್ತಾನೆ. ತನ್ನ ಈಗಿನ ವಾತಾವರಣ ವ್ಯರ್ಥ ಜೀವನ(ರಂಗಶೆಟ್ಟಿಯದು), ತರ್ಕವಿಲ್ಲದ ಕನಸುಗಳು (ಪದ್ದಿಯದು) ಇವುಗಳೆಲ್ಲವುಗಳಿಂದಲೂ ದೂರವಾಗಿ ಅನಾಥಾಶ್ರಮಕ್ಕೆ ಸೇರುತ್ತಾನೆ.

ದೇವೀರಿ ಚಿತ್ರ ಇತರ ವಾಣಿಜ್ಯ ಚಿತ್ರಗಳಿಗಿಂತ ಭಿನ್ನವಾದ ವಾಸ್ತವ ಬದುಕಿನ ಚಿತ್ರಣಕ್ಕೆ ಅನುಕೂಲವಾದ ಮಾರ್ಗವನ್ನು ಅನುಸರಿಸಿದೆ. ಹಿಂದೆ ಪ್ರಚಲಿತವಾಗಿದ್ದ ಹೊಸ ಅಲೆಯ ಮಾರ್ಗದ ಹಲವು ಅಂಶಗಳನ್ನು ಬಳಸಿಕೊಂಡು ಮಧ್ಯಮ ಮಾರ್ಗವನ್ನು ಹಿಡಿದಿದೆ.

ಚಿತ್ರ ನಿರ್ದೇಶಕರು ಸ್ಲಂಗಳಲ್ಲಿ ವಾಸಿಸುವ ಜನ[…] ನಡುವೆ ಅಡಗಿರುವ ಜೀವಾನುಭವಗಳ, ಜೀವನ[…] ಮೌಲ್ಯಗಳನ್ನು ಹೆಕ್ಕಿ ತೆಗೆಯುವ, ಮುಂದಿನ ನಾಗರಿ[…] ಸಮಾಜವನ್ನು ನಿರ್ಮಿಸಬೇಕಾದ ಮಕ್ಕಳ ಭವಿಷ[…] ನಂದಿ ಹೋಗುತ್ತಿರುವ ಬಗ್ಗೆ ಎಚ್ಚರಿಕೆ ನೀಡುತ್ತಾರ[…]

ದೇವೀರಿ ತಾನು ವೇಶ್ಯೆಯಾಗಲು, ತನ್ನನ[…] ಇತರರಿಗೆ ಒದಗಿಸುವ ದಲ್ಲಾಳಿಗಳು, ಈ ವೃ[…] ಹಿಡಿಯಲು ಎಲ್ಲದಕ್ಕೂ ಕಾರಣ ವಿದ್ಯಾಭ್ಯಾ[…] ಇಲ್ಲದಿರುವುದೇ ಎಂದು ತೀರ್ಮಾನಿಸಿ ತನ್ನ ತಮ[…] ಕ್ಯಾತನನ್ನು ಶಾಲೆಗೆ ಹೋಗುವಂತೆ -ಇಲ್ಲದಿದ್ದ[…] ನೀನು ಇವರಂತೆ (ದಲ್ಲಾಳಿಗಳು) ಕೆಟ್ಟುಹೋಗುವ[…] ಬಗ್ಗೆ ಸದಾ ಎಚ್ಚರಿಸುತ್ತಿರುತ್ತಾಳೆ. ತಾನು ಏನಾದರ[…] ಸರಿ ಕ್ಯಾತನ ಬದುಕು ಉತ್ತಮಗೊಳ್ಳಬೇಕೆಂದ[…] ಬಯಸುವ ಅದಕ್ಕಾಗಿ ಶ್ರಮಿಸುವ ಅವ[…] ಪ್ರಾಮಾಣಿಕ ಪ್ರಯತ್ನ ಮಾನವೀಯ ಮೌಲ್ಯಗಳಿ[…] ಹಿಡಿದ ಕನ್ನಡಿಯಾಗಿದೆ.

ವಿದ್ಯೆ ಕಲಿಯಲೆಂದು ಶಾಲೆಗೆ ಹೋದರೆ ಅ[…] ವಿದ್ಯೆ ಕಲಿಯುವ ಆಸಕ್ತಿ ಮೂಡಿಸುವ[…] ವಾತಾವರಣವೇ ಇಲ್ಲದಿರುವುದು, ವಿದ್ಯೆ ನೀಡು[…] ಸಾಮಾಜಿಕ ಹೊಣೆಗಾರಿಕೆಯ ವಿಷಯದ[…] ಸರ್ಕಾರದ ದಿವ್ಯ ನಿರ್ಲಕ್ಷ್ಯವನ್ನು ತೋರಿಸುತ್ತದ[…] ಮಕ್ಕಳ ಮಾನಸಿಕ ಬೆಳವಣಿಗೆಗೆ ಸುತ್ತ[…] ವಾತಾವರಣ ಹೆಚ್ಚಿನ ಪ್ರಭಾವ ಬೀರುತ್ತದೆ. ಅಂತಹ[…] ವಾತಾವರಣದಲ್ಲಿ ಸಿಕ್ಕ ಸಾವಿರಾರು ಬಾಲಕರ[…] ಇಂದು ವಿದ್ಯಾಭ್ಯಾಸದಿಂದ ವಂಚಿತರಾಗಿ ಸಮಾ[…] ಘಾತುಕರಾಗಿ ರೂಪುಗೊಳ್ಳುತ್ತಿದ್ದಾರೆ.

ಚಿತ್ರದಲ್ಲಿ ನೈಜತೆಯ ದೃಷ್ಟಿಯಿಂದ ಸ್ಲಂ[…] ಭಾಷೆಯನ್ನೇ ಬಳಸಲಾಗಿದೆ. ಅವಾಚ್ಯ ಶಬ್ದಗಳ[…] ಬಳಸಿ ಮಾತನಾಡುವುದೇ ಇಲ್ಲಿನ ರೂಡಿಯೆಂಬ[…] ಚಿತ್ರಿಸುವ ಪ್ರಯತ್ನದಲ್ಲಿ ಅಗತ್ಯವಿಲ್ಲದೆಡೆಯಲ್ಲೂ[…] ಅವಾಚ್ಯ ಶಬ್ದಗಳನ್ನು ಸಂಭಾಷಣೆಗಳ[…] ಬಳಸಿಕೊಳ್ಳಲಾಗಿದೆ. ಇದು ಕೃತಕತೆಯನ್ನು[…] ನಾಟಕೀಯತೆಯನ್ನು ತೋರಿಸುತ್ತದೆ. ಕೆಲವ[…] ಅನಗತ್ಯ ಸಂಭಾಷಣೆಗಳಿವೆ. ಉದಾ: ಪದ್ದಿ ತ[…] ತಂಗಿ ದೊಡ್ಡವಳಾದ ಸಮಾರಂಭಕ್ಕೆ ಕ್ಯಾತನನ[…] ಆಹ್ವಾನಿಸುವ ರೀತಿ "ನೀನು ತಪ್ಪದೆ ಸಮಾರಂಭ[…] ಬರಲೇಬೇಕು-ಬಂದೇ ಬರುತ್ತೀಯ ತಾನೆ" ಎಂ[…] ಸಾಂಪ್ರದಾಯಿಕವಾಗಿ ಆಹ್ವಾನಿಸುವುದು ಅಗತ್ಯ[…] ಎನಿಸುತ್ತದೆ. ಅವನೊಬ್ಬ ಚಿಕ್ಕ ಹುಡುಗ ಎಂಬುದ[…] ಮರೆತಂತೆ ಕಾಣುತ್ತದೆ.

ಕ್ಯಾತನ ಜೀವನವನ್ನು ಉತ್ತಮ ಪಡಿಸ[…] ಬಯಸುವ ದೇವೀರಿ ತಾನೂ ಈ ಹೊಲ[…] ಜೀವನದಿಂದ ಹೊರ ಬರಬೇಕು, ಒಳ್ಳೆಯ ಬದುಕ[…] ಬದುಕಬೇಕು ಎಂದು ಕನಸನ್ನು ಕಾಣದಿರುವು[…] ಎಷ್ಟು ಸಮಂಜಸ ಎಂದು ನಿರ್ದೇಶಕ[…] ಉತ್ತರಿಸಬೇಕು.

ಕ್ಯಾತನಾಗಿ ನಟಿಸಿರುವ ಮಂಜ ಹಾ[…] ದೇವೀರಿ ಪಾತ್ರದ ನಂದಿತಾ ದಾಸ್‌ರ ಅಭಿನ[…] ಶ್ರೇಷ್ಠ ಮಟ್ಟದ್ದು. ಒಟ್ಟಾರೆ ಕಲಾವಿದರನ್ನು ಚೆನ್[…] ದುಡಿಸಿಕೊಳ್ಳುವಲ್ಲಿ ಯಶಸ್ವಿಯಾಗಿರುವ ನಿರ್ದೇಶ[…] ನಿರ್ದೇಶನದ ಬಿಗಿಯನ್ನು ಕಾಯ್ದುಕೊಳ್ಳುವಲ್ಲಿ ಸ್[…] ಮಟ್ಟಿಗೆ ವಿಫಲರಾಗಿದ್ದಾರೆ.

ಇಂತಹ ಕೆಲವು ಸಣ್ಣಪುಟ್ಟ ನ್ಯೂನತೆಗಳ[…] ಹೊರತು ಪಡಿಸಿದಂತೆ ನಿರ್ದೇಶಕರಾದ ಕವಿ[…] ಲಂಕೇಶರ ಪ್ರಥಮ ಪ್ರಯತ್ನ ಅಭಿನಂದನಾಹ[…]

- ಗಂಗಾಧ[…]

ದೌರ್ಜನ್ಯಕ್ಕೊಳಗಾದ ಬಾಲಕಿಗೆ ಹೈಕೋರ್ಟ್ ಪರಿಹಾರ

ಸುಳ್ಳು ಮೊಕದ್ದಮೆಯೊಂದರಲ್ಲಿ ಪೋಲೀಸರಿಂದ ತೀವ್ರ ದೌರ್ಜನ್ಯಕ್ಕೊಳಗಾಗಿದ್ದ ಅಪ್ರಾಪ್ತ ಬಾಲಿಕೆಗೆ ಕರ್ನಾಟಕರಾಜ್ಯ ಉಚ್ಚ ನ್ಯಾಯಾಲಯವು 10 ಸಾವಿರ ರೂ. ಪರಿಹಾರ ನೀಡಬೇಕೆಂದು ಘೋಷಿಸಿದೆ.

ಕಳೆದ ಡಿಸೆಂಬರ್‌ನಲ್ಲಿ ಮಳವಳ್ಳಿ ತಾಲೂಕಿನ ದಾಸನದೊಡ್ಡಿ ಗ್ರಾಮದ ಪ್ರಭಾವತಿ ಎಂಬ ಅಪ್ರಾಪ್ತ ಬಾಲಕಿಯ ಮೇಲೆ ಕಳ್ಳತನದ ಆರೋಪ ಹೊರಿಸಿ, ಆ ಹುಡುಗಿ ಕೆಲಸ ಮಾಡುತ್ತಿದ್ದ ಮನೆಯ ಮಾಲಿಕ ಕೊಟ್ಟ ಸುಳ್ಳು ದೂರನ್ನು ದಾಖಲಿಸಿಕೊಂಡು ಪೋಲೀಸರು ಅದೇ ದಿನ ಬಾಲಕಿಯನ್ನು ಬೆಳಕವಾಡಿಯ ಠಾಣೆಗೆ ಎಳೆತಂದು ತೀವ್ರವಾಗಿ ಥಳಿಸಿ, ಬೂಟು ಕಾಲಿನಿಂದ ಒದ್ದು, ಲಾಠಿಯಿಂದ ಹೊಟ್ಟೆ ಮತ್ತಿತರ ಕಡೆ ತಿವಿದು ತೀವ್ರವಾಗಿ ಗಾಯಗೊಳಿಸಿ ಮನೆಗೆ ಕಳುಹಿಸಿದ್ದರು.

ಈ ಹುಡುಗಿ ಆಸ್ಪತ್ರೆಗೆ ಸೇರಲು ಹೋದಾಗ ಮಳವಳ್ಳಿಯ ವೈದ್ಯರೂ ಸಹ ಸೇರಿಸಿಕೊಳ್ಳಲು ನಿರಾಕರಿಸಿದಾಗ ಅಸಹಾಯಕರಾದ ಪೋಷಕಕರು ಎಸ್‌ಎಫ್‌ಐ-ಡಿವೈಎಫ್‌ಐ ಸಂಘಟನೆಗಳ ಬಳಿ ಬಂದರು. ತಕ್ಷಣ ಗಮನ ಹರಿಸಿದ ಡಿವೈಎಫ್‌ಐನ ಪ್ರಯತ್ನದಿಂದ ಬಾಲಕಿಯನ್ನು ಆಸ್ಪತ್ರೆಗೆ ಸೇರಿಸಿ ಬೇಕಾದ ಚಿಕಿತ್ಸೆಯನ್ನು ಕೊಡಿಸಲಾಯಿತಲ್ಲದೆ, ಪೋಲೀಸರ ವಿರುದ್ಧ ಕ್ರಮ ಕೈಗೊಳ್ಳಲು ಒತ್ತಾಯಿಸಲಾಗಿತ್ತು.

ಇದರ ಪರಿಣಾಮವಾಗಿ ಪ್ರಕರಣದಲ್ಲಿ ಬಾಗಿಯಾದ ಎಸ್.ಐ. ರಂಗಸ್ವಾಮಿ ಮತ್ತುಸಹಾಯಕ ಎಸ್.ಐ. ಚಿಕ್ಕಹುಚ್ಚಯ್ಯನವರು ಅಮಾನತ್ತುಗೊಂಡಿದ್ದರು. ಮತ್ತು ಈಗಲೂ ತನಿಖೆ ಮುಂದುವರೆಯುತ್ತಿದೆ.

ಇದನ್ನು 'ಐಕ್ಯರಂಗ'ವೂ ಸೇರಿದಂತೆ ರಾಜ್ಯದ ಎಲ್ಲಾ ಪ್ರಮುಖ ಪತ್ರಿಕೆಗಳು ಸುದ್ದಿ ಮಾಡಿದ್ದರಿಂದ ಈ ಸುದ್ದಿಯನ್ನೇ ಸಾರ್ವಜನಿಕ ಹಿತಾಸಕ್ತಿ ಅರ್ಜಿ ಎಂದು ಸ್ವಯಿಚ್ಛೆಯಿಂದ ಸ್ವೀಕರಿಸಿದ ನ್ಯಾಯಾಲಯವು ವಿಚಾರಣೆ ನಡೆಸಿ ತನ್ನ ತೀರ್ಪು ನೀಡಿದೆ.

ಮುಖ್ಯ ನ್ಯಾಯಮೂರ್ತಿ ಭಾಸ್ಕರ ರಾವ್ ಮತ್ತು ಮಂಜುಳಾ ಚೆಲ್ಲೂರುರವರಿದ್ದ ವಿಭಾಗೀಯ ಪೀಠವು 10 ಸಾವಿರ ರೂ. ಪರಿಹಾರಕ್ಕೆ ಆದೇಶಿಸಿರುವುದಲ್ಲದೆ ವಿಚಾರಣೆ ನಂತರ ಆರೋಪಿಗಳಿಂದ ಇದನ್ನು ವಸೂಲಿ ಮಾಡಲು ರಾಜ್ಯ ಸರ್ಕಾರಕ್ಕೆ ತಿಳಿಸಿದೆ.

ಈ ಘಟನೆಯು ದೌರ್ಜನ್ಯಕ್ಕೊಳಗಾದ ಬಾಲಕಿ ಮತ್ತು ಡಿವೈಎಫ್‌ಐ ಸಂಘಟನೆಯ ಹೋರಾಟಕ್ಕೆ ಸಿಕ್ಕ ವಿಜಯವಾಗಿದೆ.

PRB DECR 319-79/79 AIKYARANGA WEEKLY Reg. No. 17015/64 KRNM/BGS-405 MAG (2)
ಭಾರತ ಕಮ್ಯುನಿಸ್ಟ್ ಪಕ್ಷ(ಮಾರ್ಕ್ಸ್‌ವಾದಿ), ಕರ್ನಾಟಕ ರಾಜ್ಯ ಸಮಿತಿಯ ಪರವಾಗಿ ಮುದ್ರಣ ಮತ್ತು ಪ್ರಕಾಶನ: ಎಸ್.ಸೂರ್ಯನಾರಾಯಣ ರಾವ್
ಸಂಪಾದಕರು: ಜಿ.ಎನ್ ನಾಗರಾಜ್, ಸಂಪಾದಕೀಯ ಕಛೇರಿ: ನಂ. 12, 18ನೇ ಅಡ್ಡರಸ್ತೆ, ಸಂಪಂಗಿರಾಮನಗರ, ಬೆಂಗಳೂರು-27 ಫೋನ್ ನಂ. 2236462,
ಮುದ್ರಣ: ಹನಿ ಪ್ರಿಂಟರ್ಸ್, ಕ್ವೀನ್ ರಸ್ತೆ, ಬೆಂಗಳೂರು-1
Printed & Published by Communist Party of India(Marxist), Karnataka State Committee. Editor : G.N. NAGARAJ